SAPTHAGIRI(KANNADA)
ILLUSTRATED MONTHLY
Volume:01,Issue:06,Pages:56
January-2022,Price Rs.5/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜನವರಿ 2022
ಬೆಲೆ ರೂ. 5/-




ನಿತ್ಯಾಯ ನಿರವದ್ಯಾಯ
ಸತ್ಯಾನಂದ ಚಿದಾತ್ಮನೇ
ಸರ್ವಾಂತರಾತ್ಮನೇ
ಶ್ರೀಮದ್ವೇಂಕಟೇಶಾಯ ಮಂಗಳಮ್


29-11-2021
ರಿಂದ
08-12-2021
ರ ವರೆಗೆ ನಡೆದ
ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ
ಬ್ರಹ್ಮೋತ್ಸವಗಳ
ದೃಶ್ಯಮಾಲಿಕೆ













# ಭಗವದ್ಗೀತೆ

ಆಚಾರ್ಯಃ ಪಿತರಃ ಪುತ್ರಾಃ
ತಥೈವಚ ಪಿತಾಮಹಾಃ
ಮಾತುಲಾಃ ಶ್ವಶುರಾಃ ಪೌತ್ರಾಃ
ಸ್ಯಾಲಾಃ ಸಂಬಂಧಿನಸ್ತಥಾ

(ಶ್ರೀ ಮದ್ಭಗವದ್ಗೀತೆ - ಅಧ್ಯಾಯ 1, ಶ್ಲೋಕ -33)

ಗುರುಗಳು, ಪಿತೃತುಲ್ಯರು, ಮಕ್ಕಳು, ಅಜ್ಜಂದಿರು, ಸೋದರಮಾವಂದಿರು, ಮಾವಂದಿರು, ಮೊಮ್ಮಕ್ಕಳು, ಭಾವಮೈದುನರು, ಅದರಂತೆ ಬೇರೆ ಬೇರೆ ಸಂಬಂಧವುಳ್ಳವರು ಇಲ್ಲಿ ಎದುರು ನಿಂತಿದ್ದಾರೆ.





ವೆಂಕಟಾಚಲನೆ ಬಾರೋ ಶಂಕರಾಭರಣಶಾಯಿ
ಕಿಂಕರರಿಗೆ ಒಲಿವ ಬಿರುದಾಂಕ ಪರಮಪುರುಷ

ಇಂದಿರಾವಲ್ಲಭನೆ ಬಾರೋ ನಿಂದಿರಾ ಬಾರೋ ಎನ್ನೊಳು
ಇಂದೀವರ ಶ್ಯಾಮ ವರ ಇಂದೀವಾ ದೊರಿಯೆ ಬಾರೋ

ಮಂದರಧರನೆ ಬಾರೋ ಮಂದಹಾಸ ಬಾರೋ
ಮಂದಾಕಿನೀ ಜನಕಾ ನಿತ್ಯಮಂದರ ಉದ್ಧಾರ ಬಾರೋ

ಗಜರಾಜವರದ ಬಾರೋ ಗಜನಾಯಕ ಮಧ್ಯ
ಗಜಮುಖವುಳ್ಳವನೆ ನೀನೆ ಗಜರಿಪುದವನ ಬಾರೋ

ಅರುಣಾನುಜಗಮನ ಬಾರೋ ಅರುಣವರ್ಣ ಬಾರೋ
ಅರುಣಾಂಬುಜ ಚಲುವ ಸೋಮಾರುಣ ನಯನ

ಸಮವರ್ತಿ ವಿನುತ ಬಾರೋ ಸಾಮಲೋಲ ಬಾರೋ ನಿನ್ನ
ಸಮಾನ ಕಾಣೆನೊ ಎಲ್ಲಿ ಸಂಬಂಧಿಗಳ ಪ್ರಿಯ ಬಾರೋ

ಸಮರನಿರ್ಭೀನೆ ಬಾರೋ ಸಮೀರನೆ ಬಾರೋ
ಸಮೀರಗೆ ಒಲಿದ ಲೋಕಸಮಸ್ತ ಪರಿಪೂರ್ಣ ಬಾರೋ

ಕೃಷ್ಣೆಯ ಕಾಯಿದವನೆ ಬಾರೋ ಕೃಷ್ಣನ ಸಖನೆ ಬಾರೋ
ಕೃಷ್ಣ ಮನೋಭೀಷ್ಟ ತಿಮ್ಮ ವಿಜಯವಿಠಲ ಬಾರೋ

- ಶ್ರೀ ವಿಜಯದಾಸರು

(ಏಳನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಅಪಾಂ ಪತ್ಯುಶ್ಯ ತ್ರೂನಸಹನಮುನೇರ್ಧರ್ಮನಿಗಲಂ ಕೃಪೇ ಕಾಕಸ್ಯೈಕಂ ಹಿತಮಿತಿ ಹಿನಸ್ತಿ ಸ್ಮ ನಯನಮ್।**

**ವಿಲೀನಸ್ವಾತಂತ್ರ್ಯೋ ವೃಷಗಿರಿಪತಿ ಸ್ತ್ವದ್ವಿಹೃತಿಭಿಃ ದಿಶತ್ಯೇವಂ ದೇವೋ ಜನಿತಸುಗತಿಂ ದಂಡನವಿಧಿಮ್ ॥೬೪॥**

ಹಿಂದಿನ ಎರಡು ಪದ್ಯಗಳಿಂದಲೂ ದಯಾಪರತಂತ್ರನಾದ ಶ್ರೀನಿವಾಸನು ಆಶ್ರಿತರ ವಿಷಯದಲ್ಲಿ ಕೆಲವು ಪಾಪಗಳಿಗೆ ಸ್ವಲ್ಪವೇ ದಂಡನೆಯನ್ನು ಕೊಡುವನೆಂದೂ, ಕೆಲವು ಪಾಪಗಳನ್ನು ಗಮನಿಸುವುದೇ ಇಲ್ಲವೆಂದೂ ನಿರೂಪಿಸಿರುವರು. ಈ ಶ್ಲೋಕದಲ್ಲಿ - ಪರಮ ಪುರುಷನು ಕೊಡುವ ದಂಡನೆಯನ್ನು ದಯಾದೇವಿಯು ಕಡಿಮೆ ಮಾಡುವುದು ಮಾತ್ರವಲ್ಲದೆ ಕೊಡುವ ದಂಡನೆಯು ಕೊನೆಯಲ್ಲಿ ಹಿತವಾಗುವಂತೆಯೇ ಮಾಡುವಳೆಂದು ನಿರೂಪಿಸುವರು.

ಈ ವಿಷಯವನ್ನು ಶ್ರೀರಾಮಾವತಾರದಲ್ಲಿ ನಡೆದ ಮೂರು ವೃತ್ತಾಂತಗಳನ್ನು ತೋರಿಸಿ ಆಚಾರ್ಯರು ಪ್ರಕಾಶಪಡಿಸಿರುತ್ತಾರೆ. ಸಮುದ್ರವನ್ನು ದಾಟುವುದಕ್ಕೆ ಸರಿಯಾದ ಉಪಾಯವನ್ನು ತಿಳಿಯಲು ಸಮುದ್ರರಾಜನನ್ನು ಪ್ರಾರ್ಥಿಸಿದಾಗ ಅವನು ಬೇಗ ಬರದೆ ಇದ್ದುದರಿಂದ ಪ್ರಭುವು ಕೋಪಗೊಂಡು ಬಾಣವನ್ನು ತೊಡುತ್ತಲೇ ಸಮುದ್ರರಾಜನು ತನ್ನ ಪತ್ನಿಯರೊಡನೆ ಬಂದು ಪ್ರಭುವಲ್ಲಿ ಶರಣಾಗತನಾಗಿ ತಕ್ಕ ಸಮಾಧಾನವನ್ನು ಹೇಳಿದ ಮೇಲೆ ಅವನಿಗೆ ಕೊಡಬೇಕಾಗಿದ್ದ ದಂಡನೆಯನ್ನು ಅವನ ಶತ್ರುವಿನ ಮೇಲೆ ಪ್ರಯೋಗಿಸಿದನು. ಇದಕ್ಕೆ ದಯಾದೇವಿಯ ಪ್ರೇರಣೆಯೇ ಕಾರಣ.

ಹೀಗೆಯೇ ಪ್ರಭುವು ಸೀತಾದೇವಿಯೊಡನೆ ವಿವಾಹಿತನಾಗಿ ಅಯೋಧ್ಯೆಗೆ ಹಿಂತಿರುಗುವಾಗ ಪ್ರಭುವಿನ ಪ್ರಸಿದ್ಧಿಯನ್ನು ತಡೆಯಲಾರದೆ ಎದುರಿಗೆ ಬಂದು ಯುದ್ಧಕ್ಕೆ ಸಿದ್ಧನಾದ ಪರಶುರಾಮನ ವಿಷಯದಲ್ಲಿ ಉಂಟಾದ ಕೋಪವೂ ಕೂಡ ಕಡೆಗೆ (ಪರಶುರಾಮನು ತಗ್ಗಿದ ಕೂಡಲೇ) ಅವನ ಪುಣ್ಯವೆಂಬ ಸಂಕೋಲೆಯನ್ನು ಕಿತ್ತೊಗೆದು ಆತನನ್ನು ಬಂಧನದಿಂದ ಮುಕ್ತನನ್ನಾಗಿ ಮಾಡುವುದರಲ್ಲಿಯೇ ಪರ್ಯವಸಾನ ಹೊಂದಿತು. ಇದೂ ಕೂಡ ದಯೆಯ ಕಾರ್ಯವೆ. ಮೋಕ್ಷವನ್ನು ಪಡೆಯಬೇಕೆನ್ನುವವನಿಗೆ ಪಾಪಗಳು ಹೇಗೆ ಬಂಧನವೋ ಹಾಗೆಯೇ ಐಹಿಕ ಆಮುಷ್ಮಿಕವೆಂದು ಹೇಳಲ್ಪಡುವ ಈ ಲೋಕದ ಸುಖಗಳನ್ನೂ ಸ್ವರ್ಗಾದಿಸುಖಗಳನ್ನೂ ಬೆಳಸುವಂತಹ ಪುಣ್ಯಗಳೂ ಬಂಧನಗಳೇ ಎರಡೂ ಸಂಕೋಲೇಗಳೇ ಅದರಲ್ಲಿ ಪುಣ್ಯವನ್ನು ಚಿನ್ನದ ಸಂಕೋಲೆಯೆಂದು ಬೇಕಾದರೆ ಹೇಳಬಹುದು. ಚಿನ್ನದ್ದಾದರೂ ಆದೂ ಸಂಕೋಲೆಯೇ ಅಲ್ಲವೇ.

ಹೀಗೆಯೇ ಸೀತಾದೇವಿಯ ವಿಷಯದಲ್ಲಿ ಅಸಹ್ಯವಾದ ಅಪರಾಧವನ್ನು ಮಾಡಿದ ಕಾಕಾಸುರನೂ ಬ್ರಹ್ಮಾಸ್ತ್ರಕ್ಕೆ ಹೆದರಿ ಮೂರು ಲೋಕಗಳನ್ನೂ ಸುತ್ತಿ ಉಪಯೋಗವಿಲ್ಲದೆ ಮತ್ತೆ ಶ್ರೀರಾಮನ ಪಾದಗಳಲ್ಲಿ ಬಂದು ಬಿದ್ದ ಕೂಡಲೇ ಅವನನ್ನು ಸಂಹರಿಸುವುದೇ ನ್ಯಾಯವಾಗಿದ್ದರೂ ದಯಾಪರವಶನಾದ ಪ್ರಭುವು ಒಂದು ಕಣ್ಣನ್ನು ಮಾತ್ರ ಕಳೆದು ಅವನಿಗೆ ಮತ್ತೆ ಇಂತಹ ದುಷ್ಕಾರ್ಯಗಳಲ್ಲಿ ಪ್ರವೃತ್ತಿಯುಂಟಾಗದಂತೆ ಪರಮ ಹಿತವನ್ನೇ ಮಾಡಿದನು.

ಈ ರೀತಿಯಾಗಿ ಮೇಲೆ ತಿಳಿಸಿದ ದೃಷ್ಟಾಂತದಂತೆ ಅಪರಾಧಿಗಳ ವಿಷಯದಲ್ಲಿ ಮೊದಲು ಕೋಪವುಂಟಾದರೂ ಅನಂತರ ದಯಾದೇವಿಯ ವಿಲಾಸಕ್ಕೆ ಪರವಶನಾಗಿ ಫಲವನ್ನು ಕೊಡುವ ಕಾಲದಲ್ಲಿ ಅವರಿಗೆ ಹಿತವನ್ನೇ ಉಂಟು ಮಾಡುವ ಮೇಲೆ ನೋಡಲು ದಂಡನೆಯಂತೆಯೇ ತೋರುವ - ದಂಡನೆಯನ್ನು ವಿಧಿಸುವನು. ಅದೇ ದಯೆಯ ಪ್ರಭಾವ "ನಾಹಿತಂ ಕಾರಯೇದ್ಧರಿಃ" ಅಂದರೆ, ಪರಮಪುರುಷನು ಎಂದೂ ಅಹಿತವನ್ನು ಮಾಡುವುದಿಲ್ಲ. ಅವನು ನಮಗೆ ವಿಧಿಸುವ ದಂಡೆಗಳೂ ಕೂಡ ಒಂದು ರೀತಿಯಲ್ಲಿ ಹಿತವಾದವುಗಳೇ. ಆದ್ದರಿಂದ ಈಶ್ವರ ಸಂಕಲ್ಪದಿಂದ ನಡೆಯುವುದೆಲ್ಲವೂ ದಯಾಕಾರ್ಯವೇ ಎಂಬ ವೈಶಿಷ್ಟ್ಯವು ತಿಳಿಯಲು ಯೋಗ್ಯವಾದುದು.




ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವ್ರೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀಪ್ಲವನಾಮ ಸಂವತ್ಸರ
ಮಾರ್ಗಶಿರ - ಪುಷ್ಯ ಮಾಸ ಸಂಚಿಕೆ

ಸಂಪುಟ - 01 | ಜನವರಿ 2022 | ಸಂಚಿಕೆ -06


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ವೈಕುಂಠ ದ್ವಾರ ತೆರೆಯುವ ದಿನ ವೈಕುಂಠ ಏಕಾದಶಿ | -ಹನುಮಂತ.ಮ.ದೇಶಕುಲಕರ್ಣಿ | 7 |
| ಹರಿಕಥಾಮೃತಸಾರಮಹಿಮೆಬಲುಅಪಾರ | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 8 |
| ಹೊಸವರ್ಷದಮೊದಲಹಬ್ಬಮಕರಸಂಕ್ರಾಂತಿ | -ಮೀರಾ. ಎಸ್. ಜೋಷಿ | 10 |
| ದೇವಶಿಲ್ಪಕ್ಕೆ ರವಿರಶ್ಮಿಯಸ್ಪರ್ಶ | -ಅನಂತಜಿಂ. ಜ್ಯೋತಿಷ್ಯಿ | 12 |
| ಬನದೊಳಗಿನ ಬನಶಂಕರಿ ಕುಲದೇವತೆ ಶಾಕಾಂಬರಿ | -ಗಿರಿಜಾ.ಎಸ್.ದೇಶಪಾಂಡೆ | 15 |
| ಶ್ರೀ ಪ್ರಸನ್ನ ವೆಂಕಟದಾಸಾರ್ಯ ವಿರಚಿತ | - ಡಾ॥ ಸುಭಾಸ ಕಾಖಂಡಕಿ | 19 |
| ಆಳ್ವಾರರ ಭಗವದನುಭವ | - ಡಾ॥ ಸಿ.ಎಸ್.ಊರ್ಮಿಳಾ | 20 |
| ಕೆಂಬಾಳಿನ ಲಕ್ಷ್ಮೀ ನರಸಿಂಹ ದೇವಾಲಯ | - ಕೆಂಗೇರಿ ಚಕ್ರಪಾಣಿ | 22 |
| ಶ್ರೀವೆಂಕಟೇಶ್ವರಸ್ವಾಮಿಆಲಯ | -ದಿ॥ ಬಿ.ಎನ್.ಶ್ರೀನಿವಾಸನ್ | 24 |
| ಸಂಭ್ರಮದಲುಡುಪಿ ಪರ್ಯಾಯೋತ್ಸವ | -ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ | 31 |
| ಶ್ರೀ ತ್ಯಾಗರಾಜ ಸ್ವಾಮಿಗಳು | -ಶ್ರೀಮತಿ. ಕೆ.ವಿ. ಲತಾ | 34 |
| ಶ್ರೀ ವೈಕುಂಠದಾಸರು | -ಡಾ॥ ರಾಮಚಂದ್ರ ದಾಸ್ ಸಿ.ಜೆ. | 38 |
| ಆಯುರ್ವೇದಮತ್ತುನಾವು | - ಡಾ॥ ಪ್ರದೀಪ್‌ಕುಮಾರ್ ಹೆಬ್ರಿ | 41 |
| ತಿರುಮಲೆ- ಕಾಲಮಾನಾಚರಣೆಗಳು | - ಶ್ರೀಮತಿ | 42 |
| ಕುಮಾರವ್ಯಾಸಮಹಾಕವಿ | - ಡಾ॥ ಎಸ್. ನಂಜುಂಡಸ್ವಾಮಿ | 44 |
| ಸನಾತನಧರ್ಮದಲ್ಲಿಜ್ಯೋತಿಷ್ಯಶಾಸ್ತ್ರ | - ಆರ್. ಶ್ರೀನಿಧಿ | 46 |
| ಆಳ್ವಾರುಗಳುಕಂಡತಿರುವೇಂಗಡ | - ಎಂ. ಆರ್. ನರಸಿಂಹನ್ | 48 |
| ನೀತಿಕಥೆ - ಕಿತಾಪತಿ ಸೀತಾಪತಿ | - ಜಿ. ಶ್ಯಾಮರಾವ್ | 51 |
| ಚಿತ್ರಕಥೆ - ತ್ಯಾಗರಾಜರು | - ಟಿ. ಶಿವಾಜಿ | 52 |
| ಕ್ವಿಜ್ | | 54 |


ಮುಖಚಿತ್ರ - ಶ್ರೀ ವೆಂಕಟೇಶ್ವರ ಸ್ವಾಮಿಯವರು, ತಿರುಮಲೆ
ಹಿಂಬದಿಚಿತ್ರ - ಶ್ರೀ ರಾಮನನ್ನು ಸ್ತುತಿಸುತ್ತಿರುವ ತ್ಯಾಗರಾಜರು


**ಗೌರವ ಸಂಪಾದಕರು**
ಡಾ॥ ಕೆ. ಎಸ್. ಜವಹರ್ ರೆಡ್ಡಿ, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಸಂಭ್ರಮದ ಸಂಕ್ರಾಂತಿ

ಇನ್ನೇನು ಸಂಕ್ರಾಂತಿ ಹಬ್ಬ ಪ್ರಾರಂಭವಾಗುತ್ತದೆ. ಸಂಕ್ರಾಂತಿ ಹಬ್ಬದ ಕಾಲವನ್ನು ಸುಗ್ಗಿಕಾಲ ಎಂದು ಹಿಂದಿನ ಕಾಲದಿಂದಲೂ ಕರೆಯುತ್ತಿದ್ದೇವೆ. ಈ ಹಬ್ಬದ ವಿಶೇಷತೆ ಏನೆಂದರೆ ಈ ಪರ್ವಕಾಲವನ್ನು ಅನೇಕ ರೀತಿಯ ಪುಣ್ಯಕಾರ್ಯಗಳಿಗೆ ಮೀಸಲಿಡಬಹುದು. ಮೂರು ದಿನಗಳ ಕಾಲ ಆಚರಿಸುವ ಈ ಹಬ್ಬ ಅನೇಕ ಸಂಭ್ರಮಗಳನ್ನು ಒಳಗೊಂಡಿದೆ. ಭೋಗಿ, ಸಂಕ್ರಾಂತಿ, ಕರಿಹಬ್ಬ ಎಂದು ಮೂರು ದಿನಗಳ ಕಾಲ ಈ ಹಬ್ಬವನ್ನು ಆಚರಿಸುವ ವಾಡಿಕೆ ಇದೆ.

ಭೋಗಿ ಹಬ್ಬದಂದು ಅನೇಕರ ಸಂಪ್ರದಾಯದ ಪರವಾಗಿ ತಾಂಬೂಲವನ್ನು ನೀಡುವುದು ಹಾಗೂ ಅಂದು ಹುಗ್ಗಿ, ಪಾಯಸವನ್ನು ದೇವರಿಗೆ ನೈವೇದ್ಯವನ್ನು ಅರ್ಪಿಸುವ ಪದ್ಧತಿ ಅನೇಕ ಕಡೆಗಳಲ್ಲಿ ಇದೆ. ಮುಖ್ಯವಾಗಿ ದಕ್ಷಿಣಭಾರತದಲ್ಲಿ ಆಚರಿಸುವ ಈ ಹಬ್ಬದಲ್ಲಿ ಭೋಗಿ ಹಬ್ಬವನ್ನು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಲ್ಲಿ ಆಚರಿಸುತ್ತಾರೆ.

ಹಾಗೆಯೇ ಸಂಕ್ರಾಂತ್ರಿಯಂದು ಗೋವುಗಳನ್ನು ಚೆನ್ನಾಗಿ ಶುಭ್ರಗೊಳಿಸಿ, ಅವುಗಳನ್ನು ಅಂದವಾಗಿ ಅಲಂಕರಿಸಿ ಅವುಗಳನ್ನು ಬೆಂಕಿಯ ಮೇಲೆ ಹಾರುವಂತೆ ಮಾಡುತ್ತಾರೆ. ಅದನ್ನು ಕಿಚ್ಚು, ಹಾಯಿಸುವುದು ಎಂದು ಕರೆಯುತ್ತಾರೆ. ಇದಕ್ಕೆ ವೈಜ್ಞಾನಿಕ ಕಾರಣಗಳೂ ಇಲ್ಲದಿಲ್ಲ. ಅವುಗಳನ್ನು ಬೆಂಕಿಯ ಮೇಲೆ ಹಾರಿಸಿದಾಗ ಅವುಗಳಿಗೆ ಭಯದಿಂದಾಗಿ ಆ ಕಿಚ್ಚುಹಾಯಿಸುವ ಕಾರ್ಯಕ್ರಮ ಏರುಪೇರಾಗುವ ಸಾಧ್ಯತೆ ಇದೆ. ಈ ಕಾರ್ಯಕ್ರಮವು ಪ್ರತೀ ಗ್ರಾಮದಲ್ಲೂ, ಹಳ್ಳಿಯಲ್ಲೂ, ನಗರಗಳಲ್ಲೂ ಆಚರಿಸುತ್ತಾರೆ.ಗೋವುಗಳನ್ನು ಪೂಜಿಸಿ ಅವುಗಳಿಂದ ನಮಗೆ ದೊರೆಯುವ ಹಾಲಿನಿಂದ ಅನೇಕ ಪದಾರ್ಥಗಳನ್ನು ತಯಾರಿಸುವ ಪದ್ಧತಿಯೂ ಈಗ ವಿಸ್ತೃತವಾಗಿದೆ. ಹಾಲಿನಿಂದ ತಯಾರಿಸುವ ತುಪ್ಪ, ಬೆಣ್ಣೆಗಳಿಗೆ ಅಪಾರವಾದ ಬೇಡಿಕೆಯೂ ಇದೆ.

ಹೀಗೆ ಆ ದಿನ ತಯಾರಿಸುವ ಮಿಶ್ರಣವಾದ ಎಳ್ಳು, ಬೆಲ್ಲ, ಒಣಕೊಬ್ಬರಿ, ಕಡಲೆಬೀಜ ಇವುಗಳ ಸೇವನೆಯಿಂದ ಚಳಿಗಾಲದಲ್ಲಿ ಹರಡಬಹುದಾದ ಅನೇಕ ಖಾಯಿಲೆಗಳನ್ನು ನಾವು ಹೊಡೆದೊಡಿಸಬಹುದು.ಒಂದು ಜನಪದದ ನಂಬಿಕೆಯ ಪ್ರಕಾರ ಶಿವಪಾರ್ವತಿಯರು ಲೋಕಸಂಚಾರಕ್ಕಾಗಿ ಹೊರಟರೆಂದು ಆ ಸಮಯದಲ್ಲಿ ಪ್ರತಿಯೊಬ್ಬ ಪ್ರಜೆಗಳಿಗೂ ಶುಭಫಲವನ್ನು ಪ್ರಸಾದಿಸುತ್ತಾರೆ ಎಂಬ ನಂಬಿಕೆಯೂ ಇದೆ. ತಮಿಳುನಾಡಿನಲ್ಲಿ ಈ ಹಬ್ಬವನ್ನು ಪೊಂಗಲ್ ಎಂದು ಕರೆಯುತ್ತಾರೆ.

ಮುಖ್ಯವಾಗಿ ಉತ್ತರಾಯಣದಲ್ಲಿ ಸೂರ್ಯನು ಧನುರಾಶಿಯಿಂದ ಮಕರರಾಶಿಗೆ ಪ್ರವೇಶಿಸುತ್ತಾನೆ. ಆ ದಿನಗಳಲ್ಲಿ ಬೆಳಕಿನ ಪ್ರಖರತೆ ಹೆಚ್ಚಾಗಿರುತ್ತದೆ. ಸೂರ್ಯನು ಉತ್ತರಾಭಿಮುಖವಾಗಿ ಪ್ರಯಾಣಿಸುತ್ತಾನೆ. ಈ ಆರು ತಿಂಗಳಿನಲ್ಲಿ ಬೆಳಕು ಹೆಚ್ಚಾಗಿರುತ್ತದೆ. ಜೂನ್ ೧೫ ರ ನಂತರ ದಕ್ಷಿಣಾಯನ ಪ್ರಾರಂಭವಾಗುತ್ತದೆ.ಮಹಾಭಾರತದ ಪ್ರಕಾರ ಭೀಷ್ಮಾಚಾರ್ಯರು ಉತ್ತರಾಯಣ ಪುಣ್ಯಕಾಲಕ್ಕಾಗಿ ನಿರೀಕ್ಷಿಸಿ ನಂತರ ಪ್ರಾಣತ್ಯಾಗ ಮಾಡಿದ್ದಾರೆ.

ಇಂತಹಾ ಪುಣ್ಯಕಾಲವಾದ ಸಂಕ್ರಾಂತಿಯಂದು ಎಲ್ಲರೂ ಎಳ್ಳು ಬೆಲ್ಲ, ಸಕ್ಕರೆ ಅಚ್ಚು ಮೊದಲಾದವುಗಳನ್ನು ವಿನಿಮಯ ಮಾಡಿಕೊಂಡು ಎಲ್ಲರೊಂದಿಗೆ ಸಖ್ಯತೆ ಸ್ನೇಹ ಭಾವನೆ, ಸಂಘೀಭಾವವನ್ನು ಹೊಂದುತ್ತಾ ನಮ್ಮ ದೇಶದ ಒಗ್ಗಟ್ಟನ್ನು ಕಾಪಾಡೋಣ.

**ಗೋವುಗಳನ್ನು ಪೂಜಿಸೋಣ, ಗೋವುಗಳನ್ನು ಸಂರಕ್ಷಿಸೋಣ**

**ಗೋವಿಂದಾ॥ ಗೋವಿಂದಾ ॥ ಗೋವಿಂದಾ॥॥**



# ವೈಕುಂಠ ದ್ವಾರ ತೆರೆಯುವ ದಿನ ವೈಕುಂಠ ಏಕಾದಶಿ

ಏಕಾದಶಿಗಳಲ್ಲೇ ಅತ್ಯಂತ ಶ್ರೇಷ್ಠವಾದ ಏಕಾದಶಿಯೇ ವೈಕುಂಠಏಕಾದಶಿ. ಧನುರ್ಮಾಸದ ಶುಕ್ಲ ಪಕ್ಷ ಏಕಾದಶಿಯಂದು ಶ್ರೀ ವಿಷ್ಣುವಿನ ವಾಸಸ್ಥಾನ ವೈಕುಂಠ ದ್ವಾರ ತೆರೆಯುವ ದಿನವಾದ್ದರಿಂದ ಈ ಏಕಾದಶಿ ಶ್ರೇಷ್ಠವಾದದ್ದು ಎಂಬ ನಂಬಿಕೆ , ಆದ್ದರಿಂದಲೇ ಇದನ್ನು ಮೋಕ್ಷದ ಏಕಾದಶಿ ಎಂಬ ಹೆಸರೂ ಇದೆ.ಏಕಾದಶಿ ಶಬ್ದವು ಪಾಡ್ಯ, ಬಿದಿಗೆ, ತದಿಗೆ ಇತ್ಯಾದಿ ತಿಥಿಗಳ ಆದಿಯಾಗಿ ಬರುವ ಹನ್ನೊಂದನೇ ತಿಥಿ. ಏಕಾದಶಿಯ ಪ್ರತಿಯೊಂದು ಮಾಸದ ಶುಕ್ಲ ಹಾಗೂ ಕೃಷ್ಣ ಪಕ್ಷಗಳಲ್ಲಿ ಬರುವ ಪ್ರತ್ಯೇಕ ತಿಥಿಯಾಗಿದೆ. ಏಕಾದಶಿ ಎಂದರೆ ತಕ್ಷಣವೇ ನೆನಪಾಗುವುದು ಉಪವಾಸ, ಉಪವಾಸ ಆಚರಣೆಯೇ ಏಕಾದಶಿಯ ಒಂದು ಮುಖ್ಯ ಅಂಗ. ಏಕಾದಶಿ ಉಪವಾಸದ ಆಚರಣೆಯು ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿಯೂ ಹೆಚ್ಚಿನ ಪರಿಣಾಮಕಾರಿ. ಏಕಾದಶಿ ಆಚರಣೆಯು ಹದಿನೈದು ದಿನಗಳಿಗೊಮ್ಮೆ ಆಹಾರ ಪಾನೀಯಗಳ ಸೇವನೆ ವರ್ಜ್ಯ. ಈ ದಿನದಂದು ಕೆಲವರು ಅನ್ನವನ್ನು ಮಾತ್ರ ತ್ಯಜಿಸಿ ಉಪವಾಸ ಆಚರಿಸಿದರೆ, ಮತ್ತೆ ಕೆಲವರು ಹನಿ ನೀರನ್ನೂ ಕುಡಿಯದೆ, ನಿರಾಹಾರ ವ್ರತವನ್ನು ಆಚರಿಸುತ್ತಾರೆ.

ಪ್ರತಿಯೊಂದು ಏಕಾದಶಿಗೂ ಒಂದೊಂದು ಪುರಾಣೋಕ್ತ ಹೆಸರಿರುವುದಾಗಿದ್ದು ಒಂದಲ್ಲ ಒಂದು ವಿಧದಲ್ಲಿ ಅವು ಒಂದೊಂದು ಹೆಚ್ಚಿನ ಪುಣ್ಯ ಪ್ರದವಾಗಬಲ್ಲದಾಗಿದೆ. ಅವುಗಳ ಪೈಕಿ ಆಷಾಢ ಮಾಸ ಶುಕ್ಲ ಪಕ್ಷದ ಏಕಾದಶಿಗೆ ಶಯನಿ ಅಂತಲೂ ಕರೆದಿರುವುದಾಗಿದೆ. ಅಷ್ಟೇ ಮುಖ್ಯವಾಗಿ ಅವುಗಳೆರಡೂ ಕ್ರಮವಾಗಿ ಪ್ರಥಮೇಕಾದಶಿ ಮತ್ತು ವೈಕುಂಠ ಏಕಾದಶಿ ಅಂತಲೂ ಸಾವಿರಾರು ವರ್ಷಗಳಿಂದ ಕರೆಯಲಾಗಿದ್ದು, ಅವುಗಳ ಹಿನ್ನೆಲೆಯಾಗಿ ಅನೇಕ ಮಹಿಮೆಗಳು ಇರುವುದಾಗಿದೆ.

ಶಯನೀ ಆ ದಿನ ಮಹಾವಿಷ್ಣುವು ನಿದ್ರಿಸಲು ತೆರಳುವನೆಂದೂ , ಮುಂದೆ ಕಾರ್ತೀಕ ಮಾಸದ ಶುಕ್ಲ ಪಕ್ಷದ ಏಕಾದಶಿ ''ಪ್ರಬೋಧಿನೀ''ಯ ನಂತರ ಬರುವ ''ಉತ್ಥಾನ'' ದ್ವಾದಶಿಯಂದು ಅವನು ನಿದ್ರೆ ಮುಗಿಸಿ ಎಚ್ಚರಗೊಳ್ಳುತ್ತಾನೆಂದು ಆಸ್ತಿಕರ ನಂಬಿಕೆ. ಈ ಎರಡೂ ಏಕಾದಶಿಗಳ. ನಡುವಿನ ನಾಲ್ಕು ತಿಂಗಳ ಅವಧಿಯನ್ನು ಚಾತುರ್ಮಾಸ್ಯ ಎನ್ನಲಾಗುತ್ತದೆ. ಇದಾದ ನಂತರ ಬರುವುದೇ ವೈಕುಂಠ ಏಕಾದಶಿ.

ಪುರಾತನವಾದ ಹಿಂದಿನ ಒಂದು ಕಾಲದಲ್ಲಿ ಗೋಕಲವೆಂಬ ನಗರದಲ್ಲಿ ವಾಸವಾಗಿದ್ದ ವೈಖಾನಸನೆಂಬ ರಾಜರ್ಷಿಗೆ ಒಂದು ದಿನ ಇದ್ದಕ್ಕಿದ್ದಂತೆ ತನ್ನ ತಂದೆ ಸತ್ತ ಬಳಿಕ ಪ್ರೇತತ್ವ ನಿವಾರಣೆ ಹೊಂದದೇ ನರಕವನ್ನು ಅನುಭವಿಸುತ್ತಿರುವುದಾಗಿ ಅವನ ದಿವ್ಯ ದೃಷ್ಟಿಗೆ ಗೋಚರವಾಗುವುದಾಯಿತು. ಖಿನ್ನನಾದ ರಾಜನು ಪಂಡಿತರನ್ನು ಕುರಿತು ತನ್ನ ತಂದೆಯ ಆತ್ಮವನ್ನು ನರಕದಿಂದ ಪಾರು ಮಾಡುವ ಬಗೆಯನ್ನು ಕೇಳಿದನು. ಅದಕ್ಕೆ ಉತ್ತರವಾಗಿ ಅವರು ಅಂತಹ ನಿವಾರಣೆಯು ಕೇವಲ ಯಜ್ಞ ದಾನಗಳಿಂದ ಮಾತ್ರ ಆಗುವುದಲ್ಲ, ಜತೆಗೆ ಮಾರ್ಗ ಶಿರ್ಷ ಶುಕ್ಲ ಪಕ್ಷದ ಏಕಾದಶಿ ಆಚರಣೆಯ ಫಲವಾಗಿ ಅವನ ತಂದೆಯು ನರಕದಿಂದ ಪಾರಾಗುವನೆಂದರು.ಅವನು ಹಾಗೆಯೇ ಏಕಾದಶಿ ವ್ರತಾಚರಣೆಯನ್ನು ಒಂದಾದರ ಮೇಲೊಂದರಂತೆ ಆಚರಿಸಿ ಕೊನೆಗೆ ಮಾರ್ಗ ಶೀರ್ಷ ಶುಕ್ಲ ಪಕ್ಷದ ವೈಕುಂಠ ಏಕಾದಶಿ ವ್ರತವನ್ನು ಆಚರಿಸಿ ಸೂಕ್ತ ದಾನಾದಿಗಳನ್ನು ಮಾಡುತ್ತಿದ್ದಂತೆ ಅವನ ತಂದೆಯ ದೇಹವು ನರಕದಿಂದ ಬಿಡಲ್ಪಟ್ಟು, ಮುಂದೆ ಬೇರೆ ದೇಹವು ಪ್ರಾಪ್ತವಾಗಿ ಸ್ವರ್ಗವನ್ನು ಸೇರಿದನು ಎಂದು ಬ್ರಹ್ಮಾಂಡ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಅವನು ಹಾಗೆಯೇ ಏಕಾದಶಿ ವ್ರತಾಚರಣೆಯನ್ನು ಒಂದಾದರ ಮೇಲೋಂದರಂತೆ ಆಚರಿಸಿ ಕೊನಗೆ ಮಾರ್ಗಶೀರ್ಷ ಶುಕ್ಲ ಪಕ್ಷದ ವೈಕುಂಠ ಏಕಾದಶಿ ವ್ರತವನ್ನು ಆಚರಿಸಿ ಸೂಕ್ತ ದಾನಾದಿಗಳನ್ನು ಮಾಡುತ್ತಿದ್ದಂತೆ ಅವನ ತಂದೆಯ ದೇಹವು ನರಕದಿಂದ ಬಿಡಲ್ಪಟ್ಟು, ಮುಂದೆ ಬೇರೆ ದೇಹವು ಪ್ರಾಪ್ತವಾಗಿ ಸ್ವರ್ಗವನ್ನು ಸೇರಿದನು ಎಂದು ಬ್ರಹ್ಮಾಂಡ ಪುರಾಣದಲ್ಲಿ ಉಲ್ಲೇಖಿಸಲಾಗಿದೆ.

– ಹನುಮಂತ.ಮ. ದೇಶಕುಲಕರ್ಣಿ
9480364915

# ಹರಿಕಥಾಮೃತಸಾರ ಮಹಿಮೆ ಬಲು ಅಪಾರ

**ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ**
**80504 36752**





ಹರಿದಾಸ ಸಾಹಿತ್ಯದಲ್ಲಿ ಮೇರು ಕೃತಿ ಹರಿಕಥಾಮೃತಸಾರ ಮೂವತ್ತೇರೇಡು ಗುಣಗಳಕ್ಕೂ ಮಿಗಿಲಾದ ಅನಂತ ಗುಣಗಳ ಮಹಿಮನಾದ ಸರ್ವೋತ್ತಮನಾದ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ ವರ್ಣನೆ, ಕರುಣೆ,ಮಹಿಮೆ ಸೃಷ್ಟಿ ಅಣುತೃಣಾದಿಗಳಲ್ಲಿ ನಿಂತು ಪ್ರೇರ್ಯ, ಪ್ರೇರ್ಯಕನಾಗಿ ಮಾಡುವ ಕಾರ್ಯಗಳ ಬಗ್ಗೆ ಬರೆದಿದ್ದಾರೆ.

ಇಂತಹ ಹರಿಕಥಾಮೃತಸಾರವನ್ನು ಜಗನ್ನಾಥದಾಸರು ಮಾನವ ಕುಲಕೋಟಿ ಉದ್ಧಾರಕ್ಕಾಗಿ ರಚಿಸಿದ್ದಾರೆ. ಇಂತಹ ಹರಿಕಥಾಮೃತಸಾರ ೩೨ ಸಂಧಿಗಳು ಒಳಗೊಂಡ ಪದ್ಯಗಳನ್ನು ಹೊಂದಿರುವ ಷಟ್ಪದಿ ಛಂದಸ್ಸಿನಲ್ಲಿ ಸರಳ ಸುಂದರ ಮನೋಹರವಾಗಿ ನಮ್ಮಂತಹ ಪಾಮರರಿಗೆ ತಿಳಿಯುವ ಹಾಗೇ ಬರೆದಿದ್ದಾರೆ. ದಾಸರು ಹೇಳಿದ ಹಾಗೇ "ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ"ಅನ್ನುವ ಹಾಗೇ ಜೀವನೋಪಾಯಕ್ಕೆ ಲೌಕಿಕ ವಿದ್ಯೆಬೇಕು. ಇದು ಬಾಹ್ಯ ವಿದ್ಯೆ ಆಗುತ್ತದೆ.

ಆದರೆ ಆತ್ಮೋದ್ಧಾರಕ್ಕಾಗಿ ಅಂತರಾತ್ಮನ ಸ್ಮರಣೆಗಾಗಿ ಸಂಸ್ಕಾರದ ಜೊತೆ ಆಧ್ಯಾತ್ಮದ ಅರಿವು ಬೇಕಾಗುತ್ತದೆ. ಇಂತಹ ಅಂತರಾತ್ಮನ ಬಿಂಬರೂಪದಲ್ಲಿರುವ ಭಗವಂತನನ್ನು ತಿಳಿಯಲು ಆಧ್ಯಾತ್ಮಿಕ ಪುಸ್ತಕಗಳನ್ನು ಓದಬೇಕಾಗುತ್ತದೆ. ಈ ಬಾಹ್ಯ ಲೋಕಕ್ಕೆ ಸಂವಿಧಾನಾತ್ಮ ಕಾನೂನು ಹೇಗೆ ಇದೆಯೋ ಅದೇ ರೀತಿ ಆಂತರ್ಯದ ಪರಗತಿ ಸಾಧನೆಗೆ ಎಲ್ಲ ವೇದೋಪನಿಷತ್ತುಗಳ ಸಾರ ಪ್ರಮೇಯ ಭಾಗವತಾದಿ ದಶಾವತಾರ ಎಲ್ಲ ವಿಷಯಗಳನ್ನು ಒಳಗೊಂಡ ಏಕೈಕ ಗ್ರಂಥವಾಗಿದೆ.

ಹರಿಕಥಾಮೃತಸಾರದ ವೈಶಿಷ್ಟ್ಯ ತಿಳಿಯೋಣ:

"ಹರಿಕಥಾಮೃತಸಾರ ಗುರುಗಳ
ಕರುಣದಿಂದಪನಿತು ಪೇಳುವೆ"

ಪರಮ ಭಗವದ್ಭಕ್ತರಿದನಾದರದಿ ಕೇಳುವುದು ಎಂದಿದ್ದಾರೆ

ಈ ಮೇಲಿನ ಪಲ್ಲವಿಯನ್ನು ಪ್ರತಿ ಸಂಧಿಯಲ್ಲಿ ಪುನರಾವರ್ತಿಸಿದ್ದಾರೆ. ಪ್ರತಿ ಸಂಧಿಯ ಆದಿ ಅಂತ್ಯದಲ್ಲಿ ಹೇಳಬೇಕು. ಏಕೆಂದರೆ ಶ್ರೇಷ್ಟ ಜ್ಞಾನಿಗಳಾದ ಜಗನ್ನಾಥ ದಾಸರು ಹರಿಗುರುಗಳ ಕರುಣೆಯಿಂದ ಮತಿಗೆ ತಿಳಿದಷ್ಟು ಹೇಳಿರುವೆ, ಭಕ್ತರು ಉದಾಸೀನತೆ ಮಾಡದೇ ಒಲುಮೆಯಿಂದ ಅನನ್ಯ ಭಕ್ತಿ ಭಾವಗಳಿಂದ ಕೇಳಿ ಎಂದು ವಿನೀತರಾಗಿ ಭಕ್ತರಲ್ಲಿ ಕೇಳಿಕೊಂಡಿದ್ದಾರೆ. ಪ್ರತಿ ಸಂಧಿಯೂ ಒಂದಕ್ಕೊಂದು ಪೂರಕವಾಗಿ, ನಮ್ಮ ಮನಸ್ಸನ್ನು ಜಾಗೃತಗೊಳಿಸುತ್ತದೆ.

ಉದಾಹರಣೆಗೆ ಹೇಳಬೇಕೆಂದರೆ ಕರುಣಾ ಸಂಧಿಯಲ್ಲಿ ನಮ್ಮ ಮೇಲೆ ಭಗವಂತನ ಅನಂತ

ಕಾರುಣ್ಯದ ಬಗ್ಗೆ ಹೇಳಿದ್ದಾರೆ. ಇನ್ನು ಮೂರನೇ ವ್ಯಾಪ್ತಿ ಸಂಧಿಯಲ್ಲಿ,ಅಣುತೃಣುವಿನಲ್ಲಿ ವ್ಯಾಪಿಸಿರುವ ವ್ಯಾಪ್ತೋಪಾಸನೆಯ ಭಗವಂತನ ಬಗ್ಗೆ ಹೇಳಿದ್ದಾರೆ. ಇನ್ನು ಮೂರನೇ ನುಡಿ ಭೋಜನ ಸಂಧಿಯಲ್ಲಿ ನಾವು ಭುಂಜಿಸುವ ಅನ್ನಗತ ರೂಪಿನಲ್ಲಿರುವ ಭಗವದ್ರೂಪಗಳ ಚಿಂತನೆಯಿದೆ. ಹೀಗೆ ಎಲ್ಲ ಸಂಧಿಗಳು ನಮಗೆ ಜೀವನ ಪಾಠ ಕಲಿಸುವ ನೀತಿಪಾಠವಾಗಿದೆ.

"ಹರಿ" ಎಂಬ ಪದದ ವೈಶಿಷ್ಟ್ಯ ವೆಂದರೆ "ಹ" ಎಂದರೆ ವ್ಯಂಜನಾಕ್ಷರದಲ್ಲಿ ೮ ನೇ ಪದವಾಗಿದೆ. ಇನ್ನು 'ರಿ' ಎಂಬ ಅಕ್ಷರ ವ್ಯಂಜನಾಕ್ಷರದ ೨ ನೇ ಸ್ಥಾನವಾಗಿದೆ. ಎರಡು ಅಂಕಿಗಳನ್ನು ಸರಿಯಾಗಿ ಬರೆದರೆ ೮೨ ಆಗುತ್ತದೆ. ಸಂಸ್ಕೃತದಲ್ಲಿ ವಾಮಗತಿ ಯಲ್ಲಿ ಬರೆದಾಗ ೨೮ ಆಗುತ್ತದೆ. ಇಲ್ಲಿ ಚಮತ್ಕಾರ ವೆಂದರೆ ೨೮ ಹರಿಯ ಭಗವದ್ರೂಪಗಳು ಇಂತಹ ಹರಿನಾಮಸ್ಮರಣೆಯಿಂದ ಭವದ ಪಾಪ ಕೋಪ ತಾಪ ಎಲ್ಲವು ಅವನ ಕರುಣೆಯಿಂದ ಎಲ್ಲವು ಒಂದು ಬೆಂಕಿ ಕಿಡಿಯಿಂದ ಹತ್ತಿಯ ರಾಶಿಯನ್ನು ಸುಡುವ ಹಾಗೇ,"ಹರಿ ಎಂಬ ನಾಮ ಸ್ಮರಣೆಯಿಂದ ಬಿಂಬೋಪಾಸನೆ ಮೂಲಕ ಭಗವಂತ ನನ್ನು ಕಾಣಲು ಸಾಧ್ಯ ಅನ್ನುವುದು ತೋರಿಸಿ ಕೊಟ್ಟಿದ್ದಾರೆ.

"ಕಥಾ ಎಂದರೆ ಭಗವಂತನ ಗುಣವರ್ಣನೆಯ ಕೀರ್ತನೆಗಳನ್ನು ಕಥೆಗಳನ್ನು ಕೇಳುವುದು ಹೇಳುವುದು.

"ಅಮೃತ ಎಂದರೆ ಭಗವಂತನನ್ನು ಪ್ರತಿಪಾದನೆ ಮಾಡುವ ವಿದ್ಯೆ, ಮೋಕ್ಷಕ್ಕೆ ಕೊಂಡೊಯ್ಯುವ ಸಾಧನಾ ಮಾರ್ಗವಾಗಿದೆ. ಅಮೃತ ಸವಿಯನ್ನು ಸವಿದವರಿಗೆ ಗೊತ್ತು ಇದರ ಸವಿ.ಹಾಗೇ ಹರಿಕಥಾಮೃತಸಾರದ ಮಹಿಮೆ ತಿಳಿದವರಿಗೆ ಗೊತ್ತು ವೈಶಿಷ್ಟ್ಯ.

"ಸಾರ" ಅಂದರೆ ರಹಸ್ಯ ಅಥವಾ ಶ್ರೇಷ್ಟ ದೇವತೆಗಳು ಮಾಡುವ ಅಮೃತ ಪಾನಕ್ಕಿಂತಲೂ , ಈ ಜ್ಞಾನಾಮೃತದ ಶ್ರೇಷ್ಟ ಎಂದು ತೋರಿಸಲೂ ಸಾರ ಎಂಬ ಪದ ಬಳಸಿದ್ದಾರೆ.

ವಿಷ್ಣುವಿನ ಪಾದದಿಂದ ಬಂದಂತಹ ಗಂಗೆ ಮೂರುಲೋಕವನ್ನು ಪವಿತ್ರಗೊಳಿಸಿ ಮತ್ತು ಮಾನವ ದೇಹದ ಪಾಪ ತೊಳೆದರೆ, ಹರಿನಾಮ ಸ್ಮರಣೆಯನ್ನು ವಿಸ್ಮರಣೆ ಮಾಡದೆ ಸ್ಮರಿಸಿದ ನಮ್ಮ ಜೀವನದ ಆತ್ಮ ಪಾವನವಾಗುತ್ತದೆ ಏಕೆಂದರೆ ಆತ್ಮ ನಿತ್ಯ ನಿರಂತರ ತೀರಿ ಹೋದ ನಂತರ ಬೇರೆ ಯೋನಿಗೆ ಹೋದರೂ, ಆತ್ಮದ ಜ್ಞಾನ ಸಂಸ್ಕಾರ ಶಾಶ್ವತವಾಗಿರುತ್ತದೆ.

ಅತೀ ಹೆಚ್ಚು ಸಂಸ್ಕೃತ ಭಾಷೆಯಲ್ಲಿ ವ್ಯಾಖ್ಯಾನ ಒಳಗೊಂಡ ಗ್ರಂಥವಾಗಿದೆ. ಕನ್ನಡ ಆಧ್ಯಾತ್ಮಿಕ ವಾಙ್ಮಯ ಭಂಢಾರವಾಗಿದೆ.

ಹೀಗಾಗಿ ಭಗವದ್ಗೀತೆಯಲ್ಲಿ ಹೇಳಿರುವ ಹಾಗೇ ಅನನ್ಯಾಶ್ಚಿಂತಯಂತೋ ಮಾಂ ಯೋಜನಾ, ಪರ್ಯಪಾಸತೇ ಅಂದರೆ ಎಲ್ಲ ಚಿಂತೆಗಳನ್ನು ನನ್ನ ಮೇಲೆ ಬಿಟ್ಟು ನಿಶ್ಚಿಂತೆಯಿಂದ ಯಾರು ನನ್ನ ಉಪಾಶಿಸುತ್ತಾರೋ. ಅವರನ್ನು ಎಂದಿಗೂ ಕೈ ಬಿಡುವುದಿಲ್ಲ ಅಂತ ಭಗವಂತ ಹೇಳಿದ್ದಾನೆ.

ಹೀಗಾಗಿ ನಿತ್ಯದಲ್ಲಿ ಸ್ವಲ್ಪ ವೇಳೆಯಾದರೂ ಭಗವಂತನ ನಾಮಸ್ಮರಣೆಯ ಹರಿಕಥಾಮೃತಸಾರ ಓದಿ ತಿಳಿಯೋಣ.

ಮೋಕ್ಷದ ಕಡೆಗೆ ಸಾಗೋಣ ಅನ್ನುತ ಮುಂದಿನ ಸಂಚಿಕೆಯಲ್ಲಿ ಇನ್ನಷ್ಟು ಇದರ ಮಹಿಮೆಯನ್ನು ಅರಿಯೋಣ ಹರಿಕಥಾಮೃತ ಕುಡಿಯೋಣ..

(ಮುಂದುವರಿಯುವುದು)



# ಹೊಸ ವರ್ಷದ ಮೊದಲ ಹಬ್ಬ ಮಕರ ಸಂಕ್ರಾಂತಿ

-ಮೀರಾ. ಎಸ್. ಜೋಷಿ

ಎಲ್ಲರ ಚಳಿಯನ್ನು ಬಿಡಿಸಿ
ಸೂರ್ಯ ತನ್ನ ಪಥ ಬದಲಿಸಿ
ಎಲ್ಲರಲ್ಲಿ ಬದಲಾವಣೆ ಬಯಸಿ
ಹಗಲು ಇರುಳನ್ನು ಹಿಗ್ಗಿಸಿ
ಎಳ್ಳು ಬೆಲ್ಲದ ಸಿಹಿ ಬೆರಸಿ
ಎಲ್ಲರ ತನು ಮನ ಸಂಭ್ರಮಿಸಲು

ಬರುತ್ತಿದೆ ಹೊಸ ವರ್ಷದ ಮೊದಲ ಹಬ್ಬದ ಆಗಮನ.

ಸಂಕ್ರಾಂತಿ ನಮ್ಮ ದೇಶದಲ್ಲಿ ಆಚರಿಸುವ ಹಬ್ಬ. ಹಬ್ಬ ಸಮೃದ್ಧಿಯ ಸಂಕೇತವಾಗಿದೆ. ಮಾಘ. ಮೇಳ ಮಘೀ, ಪೊಂಗಲ್ ಎಂಬ ಹೆಸರಿನಿಂದ ಈ ಹಬ್ಬವನ್ನು ಕರೆಯುತ್ತಾರೆ. ಈ ಸಂಕ್ರಾಂತಿ ಹಬ್ಬಕ್ಕೆ ರಾಜ್ಯ. ಜಾತಿ, ಮತದ ಭೇದವಿಲ್ಲ. ಭಾರತದಲ್ಲಿ ಕರ್ನಾಟಕ, ಆಂಧ್ರಪ್ರದೇಶ, ಕೇರಳ, ತಮಿಳು ನಾಡು, ಅಸ್ಸಾಂ, ಬಿಹಾರ, ಗುಜರಾತ್, ಮಹಾರಾಷ್ಟ್ರ, ಓರಿಸ್ಸಾ, ಪಂಜಾಬ್, ರಾಜಸ್ಥಾನ ಉತ್ತರಪ್ರದೇಶ, ಪಶ್ಚಿಮ ಬಂಗಾಲ ಸೇರಿದಂತೆ ಎಲ್ಲ ಕಡೆಯೂ ಸಂಭ್ರಮದಿಂದ ಆಚರಿಸ ಲಾಗುತ್ತದೆ.

ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಸೂರ್ಯನು ಮಕರರಾಶಿ ಪ್ರವೇಶಿಸಿದಾಗ ಮಕರ ಸಂಕ್ರಾಂತಿಯಾಗುತ್ತದೆ. ಈ ಕಾಲವೇ ಉತ್ತರಾಯಣ ಕಾಲ ಅಥವಾ ಸೂರ್ಯನು ಉತ್ತರ ದಿಕ್ಕಿನ ಪಯಣದ ಆರಂಭವನ್ನು ಸೂಚಿಸುವ ಕಾಲವು ಆಗಿತ್ತಾದ್ದರಿಂದ ಭೂಮಿಯ ಉತ್ತರಾರ್ಧಗೋಲದಲ್ಲಿ ಚಳಿಯು ದೂರವಾಗಿ ಬೆಚ್ಚನೆಯ ವಾತಾವರಣ ಆರಂಭವಾಗಿ ಬೆಳೆಕೊಯ್ಯುವ ಕಾಲವೂ ಕೂಡಾ ಆಗಿರುತ್ತದೆ. ಮಕರ ಸಂಕ್ರಾಂತಿಯದೇ ಉತ್ತ ರಾಯಣ ಆಚರಣೆ ನಡೆಯುತ್ತದೆ. ಮಹಾಭಾರತದ ಕಥೆಯಲ್ಲಿ ಇಚ್ಛಾಮರಣಿಯಾದ ಭೀಷ್ಮರು ಪ್ರಾಣ ಬಿಡಲು ಉತ್ತರಾಯಣ ಪರ್ವ ಕಾಲಕ್ಕಾಗಿ ಕಾದಿದ್ದರು ಎಂಬ ಉಲ್ಲೇಖವಿದೆ.

ಸೂರ್ಯಗ್ರಹವು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶ ಮಾಡುವ ದಿನವನ್ನು ಸಂಕ್ರಾಂತಿ ಎಂದು ಕರೆಯುತ್ತಾರೆ. ಸೂರ್ಯಗ್ರಹವು ಒಂದು ರಾಶಿಯಲ್ಲಿ ಒಂದು ತಿಂಗಳ ಕಾಲ ಇರುತ್ತಾನೆ. ಸೂರ್ಯನು ಧನಸ್ಸು ರಾಶಿಯಿಂದ ಮಕರ ರಾಶಿ ಸೇರುವ ಸಮಯವನ್ನು ಮಕರ ಸಂಕ್ರಾಂತಿ ಎನ್ನು ತ್ತಾರೆ. ಸೂರ್ಯದೇವನನ್ನು ಜಾತಿ, ಮತ ಭೇದವಿಲ್ಲದೇ ಎಲ್ಲ ಜನರು ಪೂಜಿಸುತ್ತಾರೆ. ಸೂರ್ಯ ಜಗತ್ತಿನ ಅಂಧಕಾರ ಓಡಿಸಿ ಬದುಕನ್ನು ನೀಡುತ್ತಾನೆ ಮತ್ತು ಇವನು ಜ್ಞಾನದ ಸಂಕೇತ ವಾಗಿದ್ದಾನೆ. ಪ್ರತೀವರ್ಷ ಜನವರಿ 14 ಅಥವಾ 15 ರಂದು ಮಕರರಾಶಿಗೆ ಪ್ರವೇಶ ಮಾಡುತ್ತಾನೆ. ಈ ಅನಂತರ ಆತನ ಪಥವು ಉತ್ತರಾಭಿಮುಖವಾಗಿ ಚಲಿಸಲು ಪ್ರಾರಂಭವಾಗುತ್ತದೆ.



ಆ ಸಮಯದಲ್ಲಿ ಬೆಳಕು ಹೆಚ್ಚಾಗುತ್ತದೆ. ಮುಂದೆ ಜೂನ್ 15 ರ ನಂತರ ದಕ್ಷಿಣಾಯಣ ಆರಂಭವಾಗುತ್ತದೆ. ಉತ್ತರಾಯಣದಲ್ಲೀ ಸ್ವರ್ಗದ ಬಾಗಿಲು ತೆರೆದಿರುತ್ತದೆ. ಸತ್ತವರು ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆ ಇದೆ.ಕೃತಯುಗದಲ್ಲಿ ಶಿವ ಪಾರ್ವತಿಯರ ವಿವಾಹವಾಗಿದ್ದು ಉತ್ತರಾಯಣದಲ್ಲೇ ಬ್ರಹ್ಮ ದೇವನು ಜಗತ್ತಿನ ಸೃಷ್ಟಿ ಪ್ರಾರಂಭಿಸಿದ್ದು.ಇಂದ್ರನಿಗೆ ಗೌತಮರು ಶಾಪ ವಿಮೋಚನೆ ಮಾಡಿದ್ದು. ನಾರಾಯಣನು ವರಾಹ ಅವತಾರ ದಿಂದ ಭೂಮಿಯ ಮೇಲೆ ಪಾದ ಸ್ಪರ್ಷ ಮಾಡಿದ್ದು ಸಮುದ್ರ ಮಥನದಲ್ಲಿ ಮಹಾಲಕ್ಷ್ಮಿ ಅವತರಿಸಿದ್ದು, ಋಷಿ ಮುನಿಗಳು ತಪ ಸ್ಸಿಗೆ ಆಯ್ಕೆ ಮಾಡಿಕೊಂಡದ್ದು ಉತ್ತರಾಯಣವನ್ನೇ, ಈ ಕಾಲ ದಲ್ಲೇ ಹೆಚ್ಚಾಗಿ ಶುಭ ಕಾರ್ಯ ಮಾಡುತ್ತಾರೆ.

ಸಂಕ್ರಾಂತಿ ಹಬ್ಬವನ್ನು ಸುಗ್ಗಿಯ ಹಬ್ಬವೆಂದೂ ರೈತರು ತಾವು ಬೆಳೆದ ಬೆಳೆಗಳನ್ನು ರಾಶಿಯಾಗಿ ಹಾಕಿ ಅದಕ್ಕೆ ಪೂಜೆ ಮಾಡುತ್ತಾರೆ. ಎಳ್ಳುದಾನ ಮಾಡುತ್ತಾರೆ. ಅದರ ಜೊತೆ ಬೆಲ್ಲ, ಕಡಲೇಬೀಜ, ಕೊಬ್ಬರಿ ಮಿಶ್ರಣ ಮಾಡಿ ದಾನ ಮಾಡುತ್ತಾರೆ. ಬೆಳೆಗಳು ಬರುವ ಕಾಲವಾದ್ದರಿಂದ ಬೆಳೆಗಳ ಪೂಜೆ ಮಾಡಿ ದಾನ ಮಾಡಿದರೆ ಹೆಚ್ಚಿನ ಫಲ ದೊರೆಯಬಹುದೆಂಬ ನಂಬಿಕೆ ಕೂಡಾ ಇದೆ. ಗ್ರಾಮೀಣ ಪ್ರದೇಶದಲ್ಲಿ ರೈತರು ಆ ದಿನ ಎತ್ತುಗಳಿಗೆ ಶೃಂಗರಿಸಿ ಕಿಚ್ಚು ಹಾಯಿಸುತ್ತಾರೆ. ಈ ಸಮಯದಲ್ಲಿ ಚಳಿ ಹೆಚ್ಚಿರು ವುದರಿಂದ ದೇಹದ ಉಷ್ಣತೆ ಹೆಚ್ಚಿಸುವ ಎಳ್ಳು , ಬೆಲ್ಲ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು. ಆದ್ದರಿಂದಲೇ ಎಳ್ಳು ಬೀರುವ ಶಾಸ್ತ್ರ ಮಾಡಲಾಗುತ್ತದೆ. ಇದರೊಟ್ಟಿಗೆ ಹುರಿಗಡಲೆ, ಕೊಬ್ಬರಿ, ಸಕ್ಕರೆ, ಅಚ್ಚುಗಳು, ಬಾಳೇಹಣ್ಣು, ಕಬ್ಬು ಬೀರುವ ರೂಢಿ ಇದೆ. ಸುಗ್ಗಿಯ ಸಂಕೇತವಾಗಿ ಕಬ್ಬನ್ನು ಹಂಚಲಾಗುತ್ತದೆ.

ಪುಣ್ಯ ತೀರ್ಥದಲ್ಲಿ ಅಂದರೆ ನದಿ ಸಂಗಮ, ಸಮುದ್ರದಲ್ಲಿ ಪವಿತ್ರ ಸ್ನಾನ ಮಾಡುವ ಪದ್ಧತಿ ಇದೆ. ಶರೀರದ ಕೊಳೆ ನಿವಾ ರಿಸುವ ಜೊತೆ ಮಾನಸಿಕ ಕೊಳೆ ನಾಶ ಮಾಡುವುದು. ಈ ಸ್ನಾನದ ಉದ್ದೇಶ. ಸರ್ವರೋಗ ನಿವಾರಣೆಗಾಗಿ ಬೇಡುವವರ ಸಿದ್ಧಿಗಾಗಿ ಸ್ನಾನ ಮಾಡುವ ಪದ್ಧತಿ ಇದೆ.ಎಳ್ಳಿನ ನೀರು ಅಥವಾ ಎಳ್ಳೆಣ್ಣೆ ಲೇಪನ ಮಾಡಿ ಸ್ನಾನ ಮಾಡುತ್ತಾರೆ. ಎಳ್ಳಿನ ತರ್ಪಣ ಕೂಡಾ ಕೊಡುತ್ತಾರೆ. ಮಕ್ಕಳಿಗೆ ಎಳ್ಳು, ಹಣ್ಣು, ಬೆಂಡು, ಬತ್ತಾಸು ಸೇರಿಸಿ ಕರಿ ಎರೆಯುತ್ತಾರೆ. ಪೀಡಾ ಪರಿ ಹಾರಾರ್ಥವಾಗಿ ಇದನ್ನು ಮಾಡುತ್ತಾರೆ. ಎಳ್ಳೆಣ್ಣೆ ದೀಪ ದೇವ ರಿಗೆ ಹಚ್ಚುವುದು ಸೂರ್ಯ ನಮಸ್ಕಾರಗಳಿಂದ ಆಯಸ್ಸು ವೃದ್ಧಿಯಾಗುವುದು. ಮಕ್ಕಳಿಂದ ವೃದ್ಧರವರೆಗೂ ಆಚರಿಸ ಲಾಗುವ ವಿಶಿಷ್ಟ ಉಲ್ಲಾಸದಿಂದ ಕೂಡಿದ ಹಬ್ಬ ಸಂಕ್ರಾಂತಿ ಯಾಗಿದೆ.

ಸಂಕ್ರಾಂತಿಯೆಂದು ಗುಜರಾತ್, ಮಹಾರಾಷ್ಟ್ರ ಸೇರಿ ದಂತೆ ಹಲವು ರಾಜ್ಯದಲ್ಲಿ ಗಾಳಿಪಟ ಹಾರಿಸುವ ವಾಡಿಕೆ ಇದೆ. ಗಾಳಿಪಟ ಹಾರಿಸಲು ಜನರು ಬೆಳಿಗ್ಗೆ ಸೂರ್ಯನ ಬಿಸಿ ಲಿಗೆ ಮೈ ಒಡ್ಡುವುದರಿಂದ ವಿಟಮಿನ್ 'ಡಿ' ಕೊರತೆ ನಿವಾರಣೆ ಯಾಗುವುದು.ಉತ್ತರ ಪ್ರದೇಶದಲ್ಲಿ ಸಂಕ್ರಾಂತಿಯಂದು ಕುಂಭಮೇಳ ಜರುಗಿದರೆ ಪಶ್ಚಿಮ ಬಂಗಾಳದಲ್ಲಿ ಗಂಗಾ ಸಾಗರ ಅಂತರೂಢಿಸಿಕೊಂಡಿರುತ್ತಾರೆ.

**ಎಳ್ಳಿನ ಮಹತ್ವ:**

ಸಂಕ್ರಾಂತಿಯಂದು ಕಪ್ಪು ಎಳ್ಳಿನೊಂದಿಗೆ ಸ್ನಾನ ಮಾಡಿ ಎಳ್ಳು ದಾನ ಕೊಟ್ಟರೆ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ಇದೆ. ಎಳ್ಳೆಣ್ಣೆ ದೀಪ ದಾನ ಮಾಡುವುದರಿಂದ ಸೂರ್ಯ ದೇವನ ಅನುಗ್ರಹ ಯಾವಾಗಲೂ ನಮ್ಮ ಮೇಲಿ ರುತ್ತದೆ ಎಂದು ಹಿರಿಯರು ಹೇಳುತ್ತಾರೆ. ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡು ಎಂಬ ಮಾತು ಸಂಕ್ರಾಂತಿ ಹಬ್ಬದ ಮೂಲ ಕಾರಣವಾಗಿರುವುದು.

ಎಳ್ಳಿನ ಕಹಿ ಬೆಲ್ಲದ ಸಿಹಿ ಜೀವನದಲ್ಲಿ ಸರಿಯಾಗಿ ಹಂಚಿಕೊಂಡು ಬಾಳುವುದೇ ಜೀವನದ ಅರ್ಥ. ಎಳ್ಳು ಬೆಲ್ಲ ಪರಸ್ಪರ ಹಂಚಿ ದ್ವೇಷ, ಅಸೂಯೆ, ಶತೃತ್ವಗಳನ್ನೆಲ್ಲ ಮರೆತು ಸಾಮರಸ್ಯದಿಂದ ಬದುಕುವ ಪ್ರತಿಜ್ಞೆ ಮಾಡುವ ಸಂಭ್ರಮದ ಹಬ್ಬವಾಗಿದೆ.

ಸಂಭ್ರಮ ತರಲಿ ಸಂಕ್ರಾಂತಿ
ತೊಡೆದು ಸರ್ವರ ವಿಭ್ರಾಂತಿ
ಚಿಮ್ಮಿಸಲಿ ಮೊಗದಲ್ಲಿ
ಹೊಸದೊಂದು ಕಾಂತಿ
ಉಕ್ಕಿಸುತ ಬದುಕಲ್ಲಿ ನಿತ್ಯ ಸುಖಶಾಂತಿ



# ದೇವ ಶಿಲ್ಪಕ್ಕೆ ರವಿ ರಶ್ಮಿಯ ಸ್ಪರ್ಶ

ಅನಂತ ಚಿಂ. ಜ್ಯೋತಿಷ್ಯಿ,
94825 84575

ನಮ್ಮ ದೇಶದೊಳಗೆ ಅನೇಕ ದೇವಾಲಯಗಳಿದ್ದು ಪ್ರತಿಯೊಂದು ದೇವಸ್ಥಾನಗಳು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಕೆಲವೊಂದು ದೇವಾಲಯಗಳಲ್ಲಿ ಅವುಗಳ ನಿರ್ಮಾಣ ಕಾಲದಲ್ಲಿ ಖಗೋಲ ವೈಶಿಷ್ಟ್ಯಗಳು ಸಮಾವೇಶಗೊಂಡಿವೆ. ವಿಶಿಷ್ಟ ದಿನ ಅಥವಾ ದಿವಸಗಳಲ್ಲಿ ಆರಾಧ್ಯ ವಿಗ್ರಹದ ಮೇಲೆ ಸೂರ್ಯಕಿರಣಗಳು ಸ್ಪರ್ಶಿಸುವ ವ್ಯವಸ್ಥೆಯನ್ನು ಶಿಲ್ಪಿಗಳು ಮಾಡಿದ್ದನ್ನು ಅನೇಕ ದೇವಾಲಯಗಳಲ್ಲಿ ಕಾಣಬಹುದು. ಕೆಲವೆಡೆಗೆ ಬಾಗಿಲಿನಿಂದ ಇತರೆಡೆ ಕಿಡಕಿಯಿಂದ ಇಲ್ಲವೇ ರಂಧ್ರದಿಂದ ಸೂರ್ಯ ಕಿರಣಗಳು ಪ್ರವೇಶಿಸುತ್ತವೆ. ಹಗಲಿನ ಮೊದಲಿನ ಕಿರಣ ಅಥವಾ ಸಮಯಾಂತರಗಳಲ್ಲಿ ಸೂರ್ಯ ಕಿರಣಗಳ ಸ್ಪರ್ಶ ದೇವಶಿಲ್ಪಗಳ ಮೇಲೆ ಆಗುತ್ತಿದ್ದು ಕೆಲವು ದೇವಾಲಯಗಳ ಸಂಕ್ಷಿಪ್ತ ಮಾಹಿತಿ ಇಂತಿದೆ.

ಕರ್ನಾಟಕದ ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಾಲಯವನ್ನು 9 ನೇ ಶತಮಾನದೊಳಗೆ ಚೋಳರ ಶಾಸನ ಕಾಲದಲ್ಲಿ ನಿರ್ಮಿಸಲಾಗಿದೆ.ಮಕರ ಸಂಕ್ರಮಣದ ದಿನದಂದು ಅಪರಾಹ್ನದ ಕಾಲದಲ್ಲಿ ಸೂರ್ಯಕಿರಣಗಳು ಶಿವಲಿಂಗದ ಮುಂದಿರುವ ನಂದಿಯ ಕೊಡುಗಳ ಮಧ್ಯದಿಂದ ಹಾದು ಶಿವಲಿಂಗವನ್ನು ಸ್ಪರ್ಶಿಸುತ್ತದೆ. ಈ ಸುಂದರ ಸನ್ನಿವೇಶವನ್ನು ಕಣ್ಣುತುಂಬಿಸಿಕೊಳ್ಳಲು ಬಹು ಸಂಖ್ಯೆಯ ಜನರು ನೆರೆದಿರುತ್ತಾರೆ. ಮತ್ತು ನವೆಂಬರದ ಉತ್ತಾರಾರ್ಧದಲ್ಲಿಯೂ ಇಂತಹ ಘಟನೆಗಳೂ ನಡೆಯುತ್ತಿವೆ ಎಂದು ಹೇಳಲಾಗುತ್ತದೆ. ಈ ಗವಿ ಗಂಗಾಧರೇಶ್ವರ ದೇವಾಲಯವು ಇನ್ನೂ ಇತರ ಖಗೋಲ ಶಾಸ್ತ್ರೀಯ ವೈಶಿಷ್ಟ್ಯವನ್ನು ಪಡೆದು ಕೊಂಡಿದೆ.

ಇಂತಹ ಇನ್ನೊಂದು ಸಂಗತಿ ಬೆಂಗಳೂರಿನ ಇತರೆಡೆಗೆ ಕಂಡು ಬರುತ್ತದೆ. ಬೆಂಗಳೂರಿನ ದೊಮ್ಮಲೂರು ಪ್ರದೇಶದಲ್ಲಿ ಸೂರ್ಯಕಿರಣಗಳ ಸ್ಪರ್ಶವು ದೇವಶಿಲ್ಪದ ಮೇಲೆ ಆಗುತ್ತಿದ್ದು ಗವಿ ಗಂಗಾಧರೇಶ್ವರ ದೇವಾಲಯದಷ್ಟು ಹೆಚ್ಚು ಪ್ರಸಿದ್ಧಿ ಪ್ರಚಾರವನ್ನು ಪಡೆದುಕೊಂಡಿಲ್ಲ. ಸೆಪ್ಟೆಂಬರ್ ತಿಂಗಳ ಕೊನೆಗೆ ಮತ್ತು ಜನವರಿಯಲ್ಲಿ ಹೀಗೆ ವರ್ಷದಲ್ಲಿ ಎರಡು ಬಾರಿ ಬೆಂಗಳೂರು ದೊಮ್ಮಲೂರಿನ ವೇಂಕಟೇಶ್ವರನನ್ನು ಸೂರ್ಯ ಕಿರಣಗಳು ಸ್ಪರ್ಶಿಸುತ್ತದೆ. ದೇವಾಲಯ ಪ್ರವೇಶಿಸುವ ಸೂರ್ಯ ಕಿರಣಗಳು ಮೊದಲು ಉತ್ಸವ ಮೂರ್ತಿಯನ್ನು ಆ ಬಳಿಕ ಮೂಲ ವಿಗ್ರಹವನ್ನು ಸ್ಪರ್ಶಿಸಿ ಶೋಭೆಯನ್ನು ಹೆಚ್ಚಿಸುತ್ತದೆ. ದೇವಾಲಯವನ್ನು ಚೋಳರಾಜರು ನಿರ್ಮಿಸಿದರೆಂದು ಹೇಳಲಾಗುತ್ತಿದೆ.

ಕರ್ನಾಟಕದಲ್ಲಿ ಇತಿಹಾಸ ಪ್ರಸಿದ್ಧವಾದ ಬೇಲೂರು ಚನ್ನಕೇಶವ ದೇವಾಲಯದೊಳಗೆ ಕೂಡ ಮೂಲ ವಿಗ್ರಹವನ್ನು ಸೂರ್ಯ ರಶ್ಮಿಗಳು ಸ್ಪರ್ಶಿಸುತ್ತವೆ. ಗೋಪುರದ ಪ್ರಥಮ ಗವಾಕ್ಷಿ ಮೂಲಕ ಸೂರ್ಯ ಕಿರಣಗಳು ಮೂಲ ವಿಗ್ರಹವನ್ನು ಸ್ಪರ್ಷಿಸುತ್ತದೆ. ಮೂಲ ವಿಗ್ರಹ ಮತ್ತು ಮಹಾ ದ್ವಾರದ ನಡುವೆ ಮೂನ್ನುರು ಅಡಿ ಅಂತರವಿದೆ. ಇದರ ಮಧ್ಯದಲ್ಲಿ ಮಹಾ ದ್ವಾರ ಗರ್ಭಗೃಹದ್ವಾರ ಮೊದಲಾದ ಅನೇಕ ಬಾಗಿಲುಗಳಿವೆ. ಉತ್ತರಾಯಣದ ಕಾಲದಲ್ಲಿ ಸಂಭವಿಸುವ ಸೂರ್ಯಕಿರಣಗಳ ಪ್ರವೇಶ ದಿನವು ವಿಶೇಷ ಮಹತ್ವವೆಂದು ಗೌರವವನ್ನು ಪಡೆದುಕೊಂಡಿದೆ.

ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಅರಸವಿಲ್ಲಿ ಎಂಬ ಪ್ರದೇಶದಲ್ಲಿ ಭಗವಾನ ಸೂರ್ಯನಾರಾಯಣನು ವಿರಾಜಮಾನನಾಗಿರುವನು. ಉತ್ತರಾಯಣದ ಸಮಯದಲ್ಲಿ ಮಾರ್ಚ್ 2 ನೇ ವಾರ ದಕ್ಷಿಣಾಯನದ ಅಕ್ಟೋಬರ್ ಮೊದಲನೆ ವಾರದಲ್ಲಿ ಸೂರ್ಯೋದಯದ ಕಾಲದೊಳಗೆ ಗೋಪುರದ ಮೂಲಕ ಸೂರ್ಯ ಕಿರಣಗಳು ದೇವಾಲಯವನ್ನು ಪ್ರವೇಶಿಸಿ ಧ್ವಜ ಸ್ತಂಭಾದಿಗಳನ್ನು ಸ್ಪರ್ಶಿಸಿ ಕೊನೆಗೆ ಆರಾಧ್ಯ ವಿಗ್ರಹವನ್ನು ಸ್ಪರ್ಶಿಸುತ್ತಿದ್ದು ಈ ಘಟನೆಯನ್ನು ಕಾಣಲು ಭಕ್ತರು ದೇವಾಲಯದ ಹತ್ತಿರ ನೆರೆದಿರುತ್ತಾರೆ.

ಇಂತಹ ಸಂಗತಿ ಆಂಧ್ರಪ್ರದೇಶದಲ್ಲಿ ಇನ್ನೊಂದಿದೆ. ಬಂಗಾಳ ಕೊಲ್ಲಿಯಿಂದ 2 ಕಿಲೋಮೀಟರ ಅಂತರ ಪೇದಗಂಜಮ್ ಪ್ರದೇಶದಲ್ಲಿ ಭವನಾರಾಯಣ ಮಂದಿರವಿದ್ದು ಚೋಳರಾಜ ಉದಯನು ನಿರ್ಮಿಸಿರುತ್ತಾನೆ. ಅಗಸ್ತ್ಯ ಮಹರ್ಷಿಯು ದಕ್ಷಿಣದತ್ತ ಹೊರಟಾಗ ಇಲ್ಲಿ ವಿಗ್ರಹವನ್ನು ಪ್ರತಿಷ್ಠಾಪಿಸಿದನೆಂದು ಸ್ಥಳ ಪುರಾಣವು ಸಾರುತ್ತದೆ. ಉತ್ತರಾಯಣ ದಕ್ಷಿಣಾಯನ ಮಧ್ಯದಲ್ಲಿ ಸೂರ್ಯ ಕಿರಣಗಳು ಇಲ್ಲಿಯ ಮೂಲ ಮೂರ್ತಿ ಭೂದೇವಿ ಶ್ರೀದೇವಿ ಸಹಿತ ನೀಲಾ ಸಹಿತ ಭವನಾರಾಯಣನನ್ನು ಸ್ಪರ್ಶಿಸುತ್ತದೆ.ಇಲ್ಲಿಯ ವಿಮಲಾದೇವಿಯ ಅನುಗ್ರಹದಿಂದ ಮಕ್ಕಳಿಲ್ಲದವರು ಮಕ್ಕಳನ್ನು ಪಡೆಯುತ್ತಾರೆ. ಹೀಗಾಗಿ ನಿಪುತ್ರಿಕಾ ದಂಪತಿಗಳು ಈ ದೇವಾಲಯಕ್ಕೆ ಬಂದು ಪೂಜಾ ಸೇವಾದಿಗಳನ್ನು ಮಾಡುತ್ತಾರೆ. ಈ ದೇವಾಲಯದಲ್ಲಿ ಸೂರ್ಯಕಿರಣಗಳು ಮೂಲ ಮೂರ್ತಿಗಳ ಸ್ಪರ್ಶವು ವರ್ಷದೊಳಗೆ 2 ಬಾರಿ ನಡೆಯುತ್ತಿರುವುದು ವಿಶೇಷ.

ಆಂಧ್ರಪ್ರದೇಶದ 3 ನೇ ಸ್ಥಳವೂ ಗುಡಿಮಲ್ಲಂ ಪ್ರದೇಶದ ಪರಶುರಾಮ ದೇವಾಲಯವಾಗಿದೆ.ಇದು ಚಿತ್ತೂರು ಜಿಲ್ಲೆಯ ರೇಣಿಗುಂಟಾ ಪ್ರದೇಶದಿಂದ 12 ಕಿ.ಮೀ. ಅಂತರದಲ್ಲಿದೆ. 2200 ವರ್ಷಗಳಿಗಿಂತ ಹಿಂದಕ್ಕೆ ಈ ದೇವಾಲಯವು ನಿರ್ಮಿತವಾಗಿತ್ತದೆಂದು ಹೇಳುತ್ತಾರೆ. ಉತ್ತರಾಯಣ ದಕ್ಷಿಣಾಯಣದಲ್ಲಿ ಸೂರ್ಯ ಕಿರಣಗಳು ಲಿಂಗದ ಶಿರೋಭಾಗವನ್ನು ಸೂರ್ಯೋದಯದ ಸಮಯದಲ್ಲಿ ಸ್ಪರ್ಶಿಸುತ್ತದೆ. ಸಪ್ತಭುಜದಿಂದ ಕೂಡಿರುವ ಈ ಶಿವಲಿಂಗವು ಭೂಸ್ಥರಕ್ಕಿಂತ ಕೆಳಗೆ ಇದೆ. ಮೆಟ್ಟಿಲುಗಳನ್ನು ಇಳಿದು ಗರ್ಭಗಾರವನ್ನು ಪ್ರವೇಶಿಸಬೇಕಾಗುತ್ತದೆ. ಸಪ್ತವಲಯಾತ್ಮಕ ಪೀಠದಲ್ಲಿ ಶಿವಲಿಂಗವಿದ್ದು ಈಗ ಎರಡು ವಲಯ ಮಾತ್ರ ಕಾಣಬಹುದು. ಉಳಿದವು ಭೂಮಿಯ ಅಡಿಗೆ ಇದೆ. ಲಿಂಗದ ಮೂಲ ಭಾಗದಲ್ಲಿ ಬ್ರಹ್ಮ ಮಧ್ಯದಲ್ಲಿ ವಿಷ್ಣು ಮೇಲೆ ಶಿವನು ಇರುವನೆಂದು ಸ್ಥಳ ಪುರಾಣವು ಸಾರುತ್ತದೆ. ಹಿಂದಕ್ಕೆ ತಂದೆಯ ಆಜ್ಞೆಯಂತೆ ತಾಯಿಯ ತಲೆಯನ್ನು ಕತ್ತರಿಸಿದ ಪರಶುರಾಮನು ಪಾಪದ ನಿವೃತ್ತಿಗಾಗಿ ಈ ಲಿಂಗವನ್ನು ಪೂಜಿಸಿದ್ದನು. ಮತ್ತು ಪೂಜೆಗಾಗಿ ತಾವರೆಗಳ ರಕ್ಷಿಸುವುದಕ್ಕೆ ಚಿತ್ರಸೇನ ಯಕ್ಷನನ್ನು ನಿಯುಕ್ತಿಗೊಳಿಸಲಾಯಿತು.ಹೀಗಿರುತ್ತಾ ಒಂದೊಮ್ಮೆ ಯಕ್ಷನು ಕಮಲ ಹೂವಿನಿಂದ ಪೂಜೆಯನ್ನು ಮಾಡಿಕೊಂಡನು. ಈ ಕಾರಣಕ್ಕಾಗಿ ಪರುಶು ರಾಮ ಮತ್ತು ಚಿತ್ರಸೇನ ಇಬ್ಬರಲ್ಲಿ 14 ವರ್ಷಗಳ ತನಕ ಯುದ್ಧ ನಡೆದರೂ ಮುಗಿಯದರಿಂದ ಶಿವನು ಪ್ರಸನ್ನನಾಗಿ ಇಬ್ಬರನ್ನು ತನ್ನಲ್ಲಿರಿಸಿಕೊಂಡನೆಂದು ಸ್ಥಳ ಪುರಾಣವು ಹೇಳುತ್ತದೆ. ಇಲ್ಲಿ ಇನ್ನೊಂದು ವೈಶಿಷ್ಟ್ಯವಿದೆ. 60 ವರ್ಷಕ್ಕೆ ಇಲ್ಲಿ ಪ್ರವಾಹ ಉಂಟಾಗಿ ಲಿಂಗಕ್ಕೆ ಮಜ್ಜಾನಾಭೀಷೇಕವು ನಡೆಯುತ್ತದೆ. ಈ ಹಿಂದೆ 1945ರಲ್ಲಿ ಪ್ರವಾಹ ಬಂದಿತ್ತೆಂದು ಆ ಬಳಿಕ 4.12.2005 ಕ್ಕೆ ಜಲ ಪ್ರವಾಹವು ಬಂದಿತ್ತು. ಕಾಶಿಯ ಗಂಗೆಯೇ ಇಲ್ಲಿಗೆ ಬಂದು ಶಿವಲಿಂಗವನ್ನು ಅಭಿಷೇಕಿಸುತ್ತದೆ, ಎಂಬುದು ಭಕ್ತರ ಶ್ರದ್ಧೆಯಾಗಿದೆ. ಹೀಗಿರುವ ಪರಶುರಾಮೇಶ್ವರ ಮಂದಿರದಲ್ಲಿ ಪ್ರತಿ ವರ್ಷ 2 ಬಾರಿ ಸೂರ್ಯಕಿರಣಗಳ ಸ್ಪರ್ಶ 60 ನೇ ವರ್ಷಕ್ಕೆ ಒಂದು ಬಾರಿ ಜಲ ಪ್ರವಾಹದ ಮಜ್ಜನ ನಡೆಯುತ್ತಿರುವುದು ವೈಶಿಷ್ಟ್ಯವಾಗಿದೆ.

ಮಹಾರಾಷ್ಟ್ರದ ಕೊಲ್ಹಾಪುರ ಮಹಾಲಕ್ಷ್ಮೀ ದೇವಾಲಯದೊಳಗೆ ಅಸ್ತಾಭಿಮುಖದ ಸೂರ್ಯಕಿರಣಗಳ ಸ್ಪರ್ಶವು ಮಹಾ ಲಕ್ಷ್ಮಿಯ ಮೂರ್ತಿಯ ಮೇಲೆ ಆಗುತ್ತದೆ. ವರ್ಷದಲ್ಲಿ ಹೀಗೆ ಉತ್ತರಾಯಣ ಮತ್ತು ದಕ್ಷಿಣಾಯಣದೊಳಗೆ ಎರಡು ಬಾರಿ ಎರಡು ದಿನಗಳ ತನಕ ಕಿರಣೋತ್ಸವವನ್ನು ಆಚರಿಸಲಾಗುತ್ತಿದ್ದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ನೋಡಿ ಧನ್ಯತೆಯನ್ನು ಹೊಂದುತ್ತಾರೆ.

ಇಂತಹ ಇನ್ನೊಂದು ಸಂಗತಿ ಮಹಾರಾಷ್ಟ್ರದ ಬೌದ್ಧ ಕ್ಷೇತ್ರ ಅಜಂತಾ ಗುಹೆಗಳಲ್ಲಿ ಕಾಣಬಹುದು. ಅಜಂತಾದ ಅರಣ್ಯದ ಅಖಂಡ ದೊಡ್ಡ ಶಿಲೆ ಕೊರೆದು ಗುಹೆಗಳನ್ನು ರಚಿಸಲಾಗಿತ್ತು. ಇಲ್ಲಿ 26 ನೇ ಗುಹೆಯಲ್ಲಿ ಉತ್ತರಾಯಣದ ಕಾಲದಲ್ಲಿ ಅಸ್ತಾಭಿಮುಖದ ಸೂರ್ಯನ ಕಿರಣಗಳು ಸ್ಪರ್ಶಿಸುತ್ತದೆ.

ಧರ್ಮಬುದ್ಧಿಯ ವಿಕಾಸಕ್ಕಾಗಿ ನಿರ್ಮಿತಿಗೊಂಡ ದೇವಾಲಯಗಳಲ್ಲಿ ಖಗೋಲ ವೈಚಿತ್ರಗಳನ್ನು ಸಮಾವೇಶಗೊಳಿಸಿ ಸ್ವಂತಿಕೆಯ ಪ್ರತಿಭೆಯನ್ನು ಶಿಲ್ಪಿಗಳು ಮೆರೆದಿದ್ದಾರೆ. ಸೂರ್ಯನ ನಿರ್ದಿಷ್ಟ ಗತಿ ಸೂರ್ಯೋದಯದ ವಿವರ ಇತ್ಯಾದಿಗಳನ್ನು ಅಧ್ಯಯನಗಳಿಂದ ಅರಗಿಸಿಕೊಂಡು ಶಿಲ್ಪಿಗಳು ಕಾರ್ಯ ಕೌಶಲ್ಯವನ್ನು ವಿಶ್ವಕ್ಕೆ ಕಾಣಿಕೆಯಾಗಿ ನೀಡಿದ್ದಾರೆ. ಈ ಶಿಲ್ಪಿಗಳು ಪ್ರಶಂಸೆಗೆ ನಿಜಕ್ಕೂ ಅರ್ಹರೆನಿಸಿದ್ದಾರೆ.

# ಪುಣ್ಯದಾಯಕ ಧನುರ್ಮಾಸ

-ಕೃಪೆ



ಶ್ರೀ ವಿಷ್ಣುವಿನ ಆರಾಧನೆಯ ಮಾಸವೇ ಧನುರ್ಮಾಸ "ಮಾಸಾನಾಂ ಮಾರ್ಗಶಿಷೋಹಂ" ಎಂದು ಶ್ರೀಕೃಷ್ಣ ಪರಮಾತ್ಮ ಹೇಳಿರುವರು.೧೨ ಮಾಸಗಳಲ್ಲಿ ಮಾರ್ಗಶಿರಮಾಸ ಶ್ರೇಷ್ಠ ಮಾಸವೆಂದು ಹೇಳಬಹುದು. ವಿಷ್ಣುವಿಗೆ ಅತ್ಯಂತ ಶ್ರೇಷ್ಟ ಮಾಸ ಇದಾಗಿದೆ. ಸಂಪತ್ತನ್ನು ನೀಡುವ ಲಕ್ಷ್ಮಿ ದೇವಿಯನ್ನು ವಿಷ್ಣುವನ್ನು ಸೂರ್ಯನನ್ನು ಪೂಜಿಸುವ ಮಾಸ ಇದಾಗಿದೆ.

ಧನುರ್ಮಾಸದಲ್ಲಿ ಹೇಮಂತ ಋತುವಿನ ಆಗಮನ ವಾಗುವುದು. ಈ ಮಾಸದಲ್ಲಿ ಹುಣ್ಣಿಮೆಯ ದಿನ ಚಂದ್ರನು ಮೃಗಶಿರಾ ನಕ್ಷತ್ರದಲ್ಲಿರುವನು. ಆದ್ದರಿಂದ ಈ ಮಾಸಕ್ಕೆ ಮಾರ್ಗಶೀರ್ಷಮಾಸವೆನ್ನುವರು. ಸೂರ್ಯನು ವೃಶ್ಚಿಕ ರಾಶಿಯಿಂದ ಧನಸ್ಸು ರಾಶಿಯನ್ನು ಪ್ರವೇಶಿಸಿದ ಕ್ಷಣದಿಂದ ಧನುರ್ಮಾಸ ಆರಂಭಗೊಳ್ಳುವುದು.

**ವ್ರತದ ಹಿನ್ನೆಲೆ:**

ವಿಷ್ಣುಪುರಾಣದ ಪ್ರಕಾರ ಬ್ರಹ್ಮದೇವನು ಹಂಸಪಕ್ಷಿಯ ಅವತಾರದಲ್ಲಿ ಲೋಕ ಸಂಚಾರ ಮಾಡುವಾಗ ಸೂರ್ಯದೇವನು ಹೆಚ್ಚಿನ ಬೆಳಕು ಶಾಖವನ್ನು ಬ್ರಹ್ಮನ ಮೇಲೆ ಪ್ರಯೋಗಿಸಲು ಕೋಪಗೊಂಡ ಬ್ರಹ್ಮನು ಸೂರ್ಯನಿಗೆ ನಿನ್ನ ತೇಜೋಬಲ ಕ್ಷೀಣಿಸಲಿ ಎಂದು ಶಾಪ ಕೊಟ್ಟನು.ಸೂರ್ಯನು ಆಗ ಕಾಂತಿಹೀನನಾದನು. ಸೂರ್ಯ ನಿಲ್ಲದೇ ಜಗತ್ತಿನ ಎಲ್ಲ ಕಾರ್ಯ ನಿಲ್ಲಲ್ಲು ಬ್ರಹ್ಮನನ್ನು ಕುರಿತು ದೇವತೆಗಳು ತಪಸ್ಸು ಮಾಡಿದರು. ಸೂರ್ಯನಿಗೆ ನೀಡಿದ ಶಾಪ ಪರಿಹರಿಸು ಎಂದು ಬೇಡಲು ಧನುರ್ಮಾಸದ ಮೊದಲ ಜಾವದಲ್ಲಿ ಮಹಾವಿಷ್ಣುವಿನ ಪೂಜೆ ಮಾಡಿದರೆ ನಾನು ನೀಡಿದ ಶಾಪ ವಿಮೋಚನೆಯಾಗುವುದು ಎಂದು ಬ್ರಹ್ಮನು ನುಡಿಯಲು ಅದರಂತೆ ಸೂರ್ಯನು ೧೬ ವರ್ಷ ಮಹಾ ವಿಷ್ಣುವಿನ ಪೂಜೆ ಮಾಡಿ ತನ್ನ ತೇಜಸ್ಸನ್ನು ಮರಳಿ ಪಡೆದ ನಂತೆ ಸೂರ್ಯನಿಂದ ಆರಂಭವಾದ ಈ ವ್ರತವು ಭೂ ಲೋಕದಲ್ಲಿ ಪ್ರಸಾರವಾಯಿತು.ಹಿಂದೆ ಅಗಸ್ತ್ಯ,ವಿಶ್ವಾಮಿತ್ರ,ಗೌತಮ,ಭೃಗುಮಹರ್ಷಿಗಳಲ್ಲದೇ ದೇವತೆಗಳು ಈ ವ್ರತ ಮಾಡಿದರು.

**ವ್ರತದ ಕ್ರಮ**

ಸೂರ್ಯೋದಯದ ಮೊದಲೇ ಸ್ನಾನ ಜಪಾದಿ ಮುಗಿಸಿ ಮಹಾವಿಷ್ಣುವಿನ ದರ್ಶನ ಮಾಡಿ ವಿಷ್ಣುವಿಗೆ ಪಂಚಾಮೃತ ಅಭಿಷೇಕ ಮಾಡಿ ತುಲಸೀ ಮಾಲೆಯಿಂದ ಅಲಂಕರಿಸಬೇಕು. ನೈವೇದ್ಯಕ್ಕೆ ಹುಗ್ಗಿ, ಸಕ್ಕರೆ ಪೊಂಗಲ್ ಮಾಡಬಹುದು. ಈ ವ್ರತ ೩೦ ದಿನ ಇಲ್ಲವಾದರೋ ೧೫ ದಿನ ಅಥವಾ ೭ ದಿನವಾದರೂ ಮಾಡಬೇಕು. ಶೂನ್ಯ ಮಾಸ-ಈ ಮಾಸವನ್ನು ಶೂನ್ಯಮಾಸವೆಂದು ಕರೆಯುತ್ತಾರೆ. ವಿವಾಹ ಉಪನಯನ,ಗೃಹಪ್ರವೇಶ ಕಾರ್ಯಕ್ರಮ ಮಾಡುವುದು ಸೂಕ್ತವಲ್ಲ.

**ಧನುರ್ಮಾಸದಲ್ಲಿ ಆರೋಗ್ಯ**

ಈ ಮಾಸದಲ್ಲಿ ಚಳಿ ಹೆಚ್ಚಿರುವುದರಿಂದ ಮನುಷ್ಯ ಮುದುಡಿ ಬಿಲ್ಲಿನಂತೆ ತನ್ನ ದೇಹ ಬಗ್ಗಿಸಿ ಮಲಗುತ್ತಾನೆ. ಅದಕ್ಕೂ ಕೂಡ ಧನುರ್ನಂತೆ ಮಲಗುವುದರಿಂದ ಧನುರ್ಮಾಸ ಎಂತಲೂ ಕರೆಯುತ್ತಾರೆ. ತಿಂಗಳಿಡೀ ಮೆಣಸು, ಜೀರಿಗೆ ಇರುವ ಹುಗ್ಗಿ ಮಾಡಿ ನೈವೇದ್ಯ ಮಾಡಿ ಸೇವಿಸುವುದರಿಂದ ಚಳಿಯಲ್ಲಿ ಚರ್ಮ ಸುಕ್ಕುಗಟ್ಟುವುದು, ಸೀಳುವುದು ಜ್ವರ ಉರಿ, ಕೆಮ್ಮು ನಿಯಂತ್ರಿಸುವ ಆಹಾರ ಇದಾಗಿದೆ.

ಧನುರ್ಮಾಸದಲ್ಲಿ ನಾವೂ ಭಗವಂತನನ್ನು ಪೂಜಿಸಿ ಆರಾಧಿಸಿ ಪುನೀತರಾಗೋಣ.



# ಬನದೊಳಗಿನ ಬನಶಂಕರಿಕುಲದೇವತೆ ಶಾಕಾಂಬರಿ

-ಗಿರಿಜಾ. ಎಸ್. ದೇಶಪಾಂಡೆ

97393 88300

ಶಾಕಾಂಬರಿ ನಮಸ್ತೇಸ್ತು ಶಂಕರ ಪ್ರಾಣವಲ್ಲಭೇ
ನಮಸ್ಕರೋಮಿ ದೇವೇಶಿ ಪರಿಪಾಲಯ ಶಂಕರಿ॥

ಬನದೊಳಗಿನ ಬನಶಂಕರಿಕುಲದೇವತೆ ಶಾಕಾಂಬರಿ ಎನ್ನುವ ಹಾಡು ಕೇಳಿದಾಗ ನಮ್ಮ ಕನ್ನಡ ನಾಡಿನಲ್ಲಿ ಅಲ್ಲದೇ ಮಹಾರಾಷ್ಟ್ರ, ಆಂಧ್ರ ಪ್ರದೇಶದ ಜನರಿಗೆ ಕುಲದೇವತೆಯಾಗಿರುವುದು ಒಂದು ಭಕ್ತಿ ಪೂರ್ವಕ ವಿಷಯವಾಗಿದೆ.ಬಾದಾಮಿಯ ಸಾನಿಧ್ಯದಲ್ಲಿರುವ ಬನ ಶಂಕರಿ ದೇವಾಲಯವನ್ನು 7 ನೇ ಶತಮಾನದಲ್ಲಿ ಕಲ್ಯಾಣಚಾಲುಕ್ಯರು ನಿರ್ಮಿಸಿದರೆಂದು ನಂಬಲಾಗಿದೆ. ಸ್ಕಂದಪುರಾಣ ಮತ್ತು ಪದ್ಮಪುರಾಣ ದಲ್ಲಿ ಹೇಳಿರುವಂತೆ ಬನಶಂಕರಿಯಲ್ಲಿ ದುರ್ಗಮಾಸುರನೆಂಬ ರಾಕ್ಷಸನನ್ನೇ ಸಂಹರಿಸಿದ ದೇವಿ ಪಾರ್ವತಿಯ ಅವತಾರವಾದ ಚಾಲು ಕ್ಯರು ಕುಲದೇವಿಯು ಈ ದೇವಾಲಯದಲ್ಲಿ ಆರಾಧಿಸಲ್ಪಡುವ ದೇವತೆ ಯಾಗಿರುವಳು.ಈಬನಶಂಕರಿ ದೇವಾಲಯದಲ್ಲಿ ದೇವಿಯ ಮೂರ್ತಿ ಯನ್ನು ಕಪ್ಪುಕಲ್ಲಿನಿಂದ ಕೊರೆಯಲಾಗಿದ್ದು ಆಕೆಯು ಸಿಂಹದ ಮೇಲೆ ಕುಳಿತಿರುವ ಭಂಗಿಯಲ್ಲಿ ಇರಲು ಪಾದದಡಿ ಸಿಲುಕಿರುವ ರಾಕ್ಷಸನನ್ನು ಸಹ ಕಾಣಬಹುದು. ದೇವಿಯು ತನ್ನ ಅಷ್ಟ ಕೈಗಳಲ್ಲಿ ತ್ರಿಶೂಲ, ಘಂಟೆ, ಕಮಲಾಪತ್ರ, ಡಮರುಗ, ಖಡ್ಗ ಮತ್ತು ಪವಿತ್ರವೇದ ಬರಹವನ್ನು ಹಿಡಿದಿರು ವುದನ್ನು ಕಾಣಬಹುದಾಗಿದೆ.

ಬನಶಂಕರಿ ದೇವಾಲಯ 7 ನೇ ಶತಮಾನದಲ್ಲಿ ನಿರ್ಮಿತ ವಾಗಿದ್ದರೂ ಅದನ್ನು 17 ನೆಯ ಶತಮಾನದಲ್ಲಿ ಮರಾಠದಲ್ಲಿ ಪ್ರಮುಖ ರಾಗಿದ್ದ ಪರಶುರಾಮ ಅಗಲೆ ಎಂಬುವನು ಅಲ್ಲಿ ದುರಸ್ತಿಗೊಳಿಸಿದನು.

ಈ ಪುರಾತನ ದೇವಾಲಯ ದ್ರಾವಿಡ ಶೈಲಿಯ ವಾಸ್ತು ಶೈಲಿ ಪ್ರದರ್ಶಿಸುತ್ತದೆ.ಈ ದೇವಾಲಯಕ್ಕೆ ಪುಷ್ಯ ಮಾಸದಲ್ಲಿ ಜನವರಿ ಅಥವಾ ಫೆಬ್ರವರಿಯಲ್ಲಿ ರಥದ ಮೆರವಣಿಗೆ ಬನಶಂಕರಿಯ ಜಾತ್ರೆಯ ಮಹತ್ವದ್ದಾಗಿ ರುತ್ತದೆ.

ಬನ ಎಂದರೆ ಕಾಡು ಮತ್ತು ಶಂಕರಿ ಎಂದರೆ ಶಿವಪ್ರಿಯೆ ಅಥವಾ ಪಾರ್ವತಿಯನ್ನು ಬಣ್ಣಿಸುವ ರೀತಿ ಯಾಗಿದೆ. ಬನಶಂಕರಿಯನ್ನು ಮಹಾಕಾಳಿ,ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿ ಎಂದು ಕರೆಯುತ್ತಾರೆ. ತಾಯಿಯ ಬಲಗೈಯು ಸುಜ್ಞಾನದ ಸಂಕೇತವಾದರೆ ಎಡಗೈಯು ಶೌರ್ಯದ ಸಂಕೇತವಾಗಿದೆ.ದೇವಾಲ ಯಕ್ಕೆ ನಾಲ್ಕು ದಿಕ್ಕಿನಲ್ಲಿ ನಾಲ್ಕು ದ್ವಾರಗಳಿವೆ. ಆವರಣ ದಲ್ಲಿ ನಾಲ್ಕು ದೀಪಸ್ತಂಭಗಳಿವೆ. ಕಾರ್ತೀಕ ಮಾಸದಲ್ಲಿ ಈ ದೀಪಸ್ತಂಭಗಳಲ್ಲಿ ಭಕ್ತರು ದೀಪವನ್ನು ಬೆಳಗಿಸು ತ್ತಾರೆ.ಬನಶಂಕರಿಯನ್ನು ಬಾಳವ್ವ,ಬನದವ್ವ, ಸುಂಕವ್ವ, ಶಾಕಾಂಬರಿ, ಶಿರಿವಾತಿ, ಚೌಡಮ್ಮ, ವನ ದುರ್ಗೆ ಹೀಗೆ ನಾನಾ ಹೆಸರುಗಳಿಂದ ಕರೆಯುತ್ತಾರೆ.ಈ ಬನಶಂಕರಿ 6 ನೇಯ ಅವತಾರವೆಂದು ಹೇಳಲಾಗು ತ್ತದೆ.

ಇತಿಹಾಸ - ಹಿಂದೆ ಈ ಪ್ರದೇಶವು ಭಯಂಕರ ನೀರು, ಬೆಳೆ ಇಲ್ಲದೇ ತತ್ತರಿಸುತ್ತಿರುವಾಗ ಎಲ್ಲ ದೇವತೆ ಗಳು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ತಮ್ಮ ಕಷ್ಟವನ್ನು ನೀಗಿಸುವಂತೆ ಕೇಳಿಕೊಂಡರು.

ಇದಕ್ಕೆ ಪರಿಹಾರ ಬನಶಂಕರಿಯನ್ನು ಬೇಡಿಕೊಳ್ಳೋಣ ಎಂದು ಎಲ್ಲರೂ ಕೂಡಿ ತಿಲಕಾರಣ್ಯ ಪ್ರದೇಶಕ್ಕೆ ಬಂದು ತಾಯಿ ಬನಶಂಕರಿ ಕುರಿತು ಈ ಕ್ಷೇತ್ರದಲ್ಲಿ ಮಳೆ ಇಲ್ಲದೇ ಯಜ್ಞ ಯಾಗಾದಿಗಳು ನಿಂತು ಹೋಗಿ ಬದುಕೇ ಕಷ್ಟವಾಗಿದೆ. ಜಗತ್ತಿಗೆ ಜಲ ನೀಡಿ ಕಾಪಾಡು ನಮ್ಮನ್ನು ರಕ್ಷಿಸು ಎಂದು ದೇವಿಯನ್ನು ಪ್ರಾರ್ಥಿಸಿದರು. ಇದರಿಂದ ಪ್ರಸನ್ನಳಾದ ತಾಯಿ ಭೂ ತಾಯಿಯ ನೀರಿನ ದಾಹ ತೀರಿಸಿ ಎಲ್ಲರನ್ನು ಕಾಪಾಡಿದಳು. ಅಲ್ಲದೇ ತನ್ನ ತನುವಿನ ಶಾಖದಿಂದ ಕಾಯಿಪಲ್ಲೆ ಸೃಷ್ಟಿಸಿ ಜನರ ಸಂಕಷ್ಟಗಳನ್ನು ನೀಗಿಸಿದಳಂತೆ ಹೀಗಾಗಿ ದೇವಿಗೆ ಶಾಕಾಂಬರಿ ಎನ್ನುವ ಹೆಸರು ಬಂತೆಂದು ಹೇಳಲಾಗುತ್ತದೆ. ಅದಲ್ಲದೇ ಈ ಪ್ರದೇಶದಲ್ಲಿ ಹರಿದ್ರಾತೀರ್ಥ, ತೈಲತೀರ್ಥ, ಪದ್ಮತೀರ್ಥ,ಕ್ಷಮಾತೀರ್ಥ, ಹೀಗೆ ಸಾಕಷ್ಟು ತೀರ್ಥ ಕೊಳಗಳನ್ನು ಸೃಷ್ಟಿ ಮಾಡಿದಳಂತೆ. ಅಂದಿನಿಂದ ಈ ಪ್ರದೇಶ ನಂದನವನವಾಗಿ ಹರಿತ್ತಿನಿಂದ ಕಂಗೊಳಿಸುತ್ತಿದೆ ಈ ಊರಿನ ಸುತ್ತ ದಟ್ಟವಾದ ಅರಣ್ಯ ಪ್ರದೇಶವಿದ್ದು ತೆಂಗು,ಬಾಳೆ, ವೀಳ್ಯದೆಲೆಯ ತೋಟಗಳಿಗೆ ಹಾಗೂ ಹತ್ತಿರದಲ್ಲೇ ಸರಸ್ವತಿಯ ಹೊಳೆಯೂ ಹರಿಯುತ್ತಿದೆ. ಈ ಕಾರಣದಿಂದ ಈ ದೇವಿಗೆ ಬನಶಂಕರಿ, ವನಶಂಕರಿ (ಬನದ ದೇವತೆ) ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ.

ಗರ್ಭಗುಡಿಯಲ್ಲಿ ಗರ್ಜಿಸುತ್ತಿರುವ ಸಿಂಹದ ಮೇಲೆ ವಿರಾಜಮಾನಳಾಗಿರುವ ಪಾರ್ವತಿಯ ಸುಂದರಮೂರ್ತಿ ಇದೆ. ಈ ದೇವಿಗೆ ಶರಣು ಹೋದರೆ ತಮ್ಮೆಲ್ಲ ಅಭೀಷ್ಟಗಳೂ ಈಡೇರುತ್ತವೆ ಎಂಬುದು ಭಕ್ತರ ನಂಬಿಕೆ ಪ್ರತೀ ವರ್ಷದಲ್ಲಿ ಪುಷ್ಯಮಾಸದಲ್ಲಿ ನಡೆಯುವ ಬನಶಂಕರಿ ಜಾತ್ರೆ ಜಗದ್ವಿಖ್ಯಾತವಾಗಿದೆ. ಬನಶಂಕರಿ ಜಾತ್ರೆಯ ಹುಣ್ಣಿಮೆಯ 10 ದಿನ ಮುಂಚಿತವಾಗಿ ಪ್ರಾರಂಭವಾಗುತ್ತದೆ. ಈ ಜಾತ್ರೆಗೆ 700 ವರ್ಷಗಳ ಇತಿಹಾಸವಿದೆ. ಬರೀ ಕರ್ನಾಟಕವಲ್ಲದೇ ಮಹಾರಾಷ್ಟ್ರದಿಂದ ಸಾವಿರಾರು ಭಕ್ತಸಾಗರವೇ ಈ ದೇವಿಯ ದರ್ಶನಕ್ಕೆ ಹರಿದು ಬರುತ್ತದೆ. ಮನೆಯಲ್ಲಿ ಕುಲದೇವಿಯಾಗಿ ಆರಾಧಿಸುವವರು ರಥೋತ್ಸವದ ಮುನ್ನಾ ದಿನ ಪಲ್ಯದ ಹಬ್ಬ (ತರಕಾರಿ ಉತ್ಸವ)ಎಂದು ಆಚರಿಸುತ್ತಾರೆ. 108 ವಿಧದ ತಯಾರಿಸಿದ ಖಾದ್ಯ ಸಮರ್ಪಿಸುವ ಮೂಲಕ ತಮ್ಮ ಕೃತಜ್ಞತೆ ಅರ್ಪಿಸುತ್ತಾರೆ. ಇಲ್ಲಿ ನಡೆಯುವ ಇನ್ನೊಂದು ಜಾತ್ರೆಯ ವಿಶೇಷವೆಂದರೆ ದೇವಸ್ಥಾನದ ಕಲ್ಯಾಣಿಯಲ್ಲಿ ತೆಪ್ಪೋತ್ಸವ, ನವಜಾತ ಶಿಶುಗಳಿಗೆ ದೇವಿ ಆಶೀರ್ವಾದ ಸಿಗಲೆಂದು ಪಾಲಕರು ಬಾಳೇದಿಂಡಿನಿಂದ ತಯಾರಿಸಿದ ತೆಪ್ಪದಲ್ಲಿ ಮಗುವನ್ನು ಮಲಗಿಸಿ ಕಲ್ಯಾಣಿಯ ಸುತ್ತಲೂ ಪ್ರದಕ್ಷಿಣೆ ಮಾಡಿಸುತ್ತಾರೆ. ಈ ಬನದ ಬನಶಂಕರಿ ಹುಣ್ಣಿಮೆಯು ಕರ್ನಾಟಕದವರಿಗೆ ಅತ್ಯಂತ ವಿಶೇಷ ಹಬ್ಬವಾಗಿದೆ.

ಇಲ್ಲಿರುವ ತೀರ್ಥಗಳು ದೇಹ ಶುದ್ಧಿಗಳೂ, ಮನುಃ ಶುದ್ಧಿಗೂ ಪ್ರಸಿದ್ಧವಾದವು. ತೀರ್ಥಸ್ನಾನ ಮಾಡುವುದರಿಂದ ಮಾನವನ ಸಕಲ ದುರಿತಗಳಿಂದ ದೂರವಾಗಿ ಇಹಪರಗಳಲ್ಲಿ ಸುಖ ಪಡೆಯುತ್ತಾನೆಂದು ಶಂಖಸ್ಮೃತಿಯಲ್ಲಿ ಹೇಳಿದೆ.

**ಬನಶಂಕರಿ ದೇವಾಲಯ, ಬೆಂಗಳೂರು -**

ಈ ದೇಗುಲ ಸುಂದರ ದೇವಾಲಯ ಇಲ್ಲಿಯ ಬನಶಂಕರಿಯ ಮೂರ್ತಿ 5 ಅಡಿ ಎತ್ತರವಿದ್ದು ಕಪ್ಪು ಶಿಲೆಯಿಂದ ನಿರ್ಮಿತವಾಗಿದೆ. ಶ್ರೀದೇವಿಯ ಮೂಲ ವಿಗ್ರಹದಲ್ಲಿ ಶ್ರೀಲಕ್ಷ್ಮಿ ಶ್ರೀಸರಸ್ವತಿದೇವಿ ಇರುವರು ಶುಂಬ, ನಿಶುಂಬ ರಾಕ್ಷಸರನ್ನು ಕಾಲಿನಿಂದ ಮೆಟ್ಟಿರುತ್ತಾಳೆ. ಎಡ ಭಾಗದಲ್ಲಿ ಸಖಿಯರು ಇದ್ದಾರೆ. ದೇವಿ ಅಷ್ಟ ಭುಜಗಳನ್ನು ಹೊಂದಿರುವಳು ಹಾಗೂ ಶಾಂತ ಸ್ವರೂಪಿಣಿ, ಬನಶಂಕರಿಯ ಉತ್ಸವಮೂರ್ತಿ ಶ್ರೀಶಾಕಾಂಬರಿದೇವಿ, ಗಣಪ ಮತ್ತು ಪರ್ವತ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಪರಿವಾರ ದೇವತೆಗಳನ್ನು ದೇವಾಲಯದ ಪಕ್ಕದಲ್ಲಿ ಪ್ರತಿಷ್ಠಾಪಿಸಿದೆ. ದೇವಿಯ ದೃಷ್ಟಿಯು ನೇರವಾಗಿ ಭಕ್ತಾದಿಗಳ ಮೇಲೆ ಬೀಳಬಾರದು ಎಂದು ದೇವಿಯ ಎದುರು ಆಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪ ಮತ್ತು ಪ್ರಾಕಾರದ ಮಂಟಪದ 65 ವಿಶೇಷ ರೀತಿಯ ಕಲ್ಲಿನ ಕೆತ್ತನೆಯುಳ್ಳ ಕಂಬಗಳನ್ನು ನಿರ್ಮಿಸಿದೆ. ದೇವಾಲಯದ ಮೇಲ್ಭಾಗದಲ್ಲಿ 65 ದೇವತೆಗಳು ಸಿಮೆಂಟಿನ ಹಾಗೂ ದೇವಾಲಯದ ನಾಲ್ಕು ವಿಶೇಷ ಕೆತ್ತನೆ ಇರುವ ಸ್ತಂಭ ನಿಲ್ಲಿಸಲಾಗಿದೆ. ಶ್ರೀದುರ್ಗಾಪರಮೇಶ್ವರಿ, ಚೌಡೇಶ್ವರಿ ಅಮ್ಮನವರ ಉಪದೇವತೆಗಳನ್ನು ದೇವಾಲಯದಲ್ಲಿ ಸ್ಥಾಪಿಸಲಾಗಿದೆ.

ರಾಹುಕಾಲದ ಸಮಯದಲ್ಲಿ 16 ವಾರ ಲಿಂಬೇಹಣ್ಣಿನ ಆರತಿಯನ್ನು ದೇವಿಗೆ ಬೆಳಗಿದರೆ ತಮ್ಮ ಇಷ್ಟಾರ್ಥ ನೆರವೇರುವುದು ಎಂಬ ನಂಬಿಕೆ ಜನರಲ್ಲಿದೆ. ಪ್ರತಿದಿನ ಮಧ್ಯಾಹ್ನ ಪ್ರಸಾದದ ವ್ಯವಸ್ಥೆ ಇಲ್ಲಿದೆ. ಈ ದೇವಸ್ಥಾನದ ಸಂಸ್ಥಾಪಕರು ಶ್ರೀಬಸಪ್ಪ ಶೆಟ್ಟರು. ಇವರು ಪ್ರತಿವರ್ಷ ಬಾದಾಮಿಯ ಬನಶಂಕರಿ ದೇವಸ್ಥಾನಕ್ಕೆ ಹೋಗಿ ಬರುತ್ತಿದ್ದರು. ಇವರಿಗೆ ವಯಸ್ಸಾದ ಕಾರಣ

ದೇವಾಲಯಕ್ಕೆ ಹೋಗಲು ಆಗದಿರಲು ದೇವಾಲಯದ ಅರ್ಚಕರಿಗೆ ಕನಸಿನಲ್ಲಿ ದೇವಿ ಬಂದು ನಾನು ಬೆಂಗಳೂರಿನಲ್ಲಿ ನೆಲೆಸುವೆ ಎಂದಳಂತೆ ಅದರಂತೆ ಬಸಪ್ಪ ಶೆಟ್ಟರು ಹಾಗೂ ಕುಟುಂಬಸ್ಥರು ಸೇರಿ ಬೆಂಗಳೂರಿನಲ್ಲಿ 1915 ರಲ್ಲಿ ಬನಶಂಕರಿ ದೇವಿಯನ್ನು ಪ್ರತಿಷ್ಠಾಪಿಸಿದ್ದಾರೆ.

### ಬನಶಂಕರಿ ದೇವಸ್ಥಾನ, ಮಲ್ಲೇಶ್ವರಂ

ಮಲ್ಲೇಶ್ವರಂನಲ್ಲಿ ಮಹಾಗಣಪತಿ ಆವರಣದಲ್ಲಿ ಶ್ರೀ ಬನಶಂಕರಿ ದೇವಸ್ಥಾನ 1999 ರಲ್ಲಿ ಪ್ರತಿಷ್ಠಾಪನೆಯಾಗಿದೆ. ಅಲ್ಲಿಯ ಅರ್ಚಕರಿಗೆ ದೇವಿಯು ನಾನು ಬಂದು ಇಲ್ಲಿ ನೆಲೆಸುತ್ತೇನೆ ಎಂದು ಕನಸಿನಲ್ಲಿ ಹೇಳಿದಾಗ ಇಲ್ಲಿ ದೇವಾಲಯ ಪ್ರತಿಷ್ಠಾಪಿಸಲ್ಪಟ್ಟಿತು. ಇಲ್ಲಿ ದೇವಿಯ ವಿಗ್ರಹ ಕಪ್ಪು ಶಿಲೆ 5 ಅಡಿ ಎತ್ತರವಾಗಿದೆ. ಪ್ರತಿ ತಿಂಗಳ ಹುಣ್ಣಿಮೆ ಹಿಂದಿನ ದಿನ ಅಂದರೆ ಚರ್ತುದಶಿ ದಿನಗಳ ಏಳು ದಿನಗಳ ಕಾಲ (ಬನದ ಹುಣ್ಣಿಮೆ) ರಥೋತ್ಸವ ಮತ್ತು ಉತ್ಸವ ನಡೆಯುವುದು. ಹುಣ್ಣಿಮೆ ದಿನ ಸಮಂಗಲಿಯರಿಂದ ತಂಬಿಟ್ಟಿನ ಆರತಿ ಬೆಳಗುವುದು ವಿಶೇಷ ಪ್ರತೀ ಶುಕ್ರವಾರ,ಮಂಗಳವಾರ ಹಿಂದಿನ ದಿನ ದೇವಿಗೆ ತೈಲಾಭಿಷೇಕ ನಡೆಯುತ್ತದೆ. ಪ್ರತೀ ಭಾನುವಾರ, ಮಂಗಳವಾರ, ಶುಕ್ರವಾರ ರಾಹುಕಾಲದ ಸಮಯದಲ್ಲಿ ಸುಮಂಗಲಿಯರು ಲಿಂಬೇಹಣ್ಣಿನ ಆರತಿ ಬೆಳಗುವರು. ಬನದ ಹುಣ್ಣಿಮೆಯಂದು ದೇವಿಗೆ ನೂರಾರು ಕೆ.ಜಿ ಯ ಅರಿಷಿಣ ಮತ್ತು ಕುಂಕುಮ ದಿಂದ ಅಭಿಷೇಕ ನಡೆಯುತ್ತದೆ.

### ಹುಬ್ಬಳ್ಳಿ ಪಂಚಾಯತನ ಬನಶಂಕರಿ

ಕರ್ನಾಟದಲ್ಲಿ ಪ್ರಥಮ ಪಂಚಾಯತನ ಬನಶಂಕರಿ ದೇಗುಲ ಇರುವುದು ಹುಬ್ಬಳ್ಳಿಯ ವಿದ್ಯಾಗಿರಿಯ ಬನಶಂಕರಿ ಬಡಾವಣೆಯಲ್ಲಿ ಮೂರು ಅಡಿ ಎತ್ತರವಿರುವ ಕಪ್ಪುಶಿಲೆಯ ಸಿಂಹವಾಹಿನಿ ಬನಶಂಕರಿ ನೆಲೆಸಿದ್ದಾಳೆ. ಪ್ರತಿ ತಿಂಗಳ ಹುಣ್ಣಿಮೆಯಂದು ಭಕ್ತರಿಗೆ ಅನ್ನದಾನವಿದೆ. ಪ್ರತಿವರ್ಷ ಪುಷ್ಯ ಮಾಸದ ಹುಣ್ಣಿಮೆಯಂದು ರಥೋತ್ಸವ ನಡೆಯುತ್ತದೆ. ಇಲ್ಲಿಯ ವಿಶೇಷವೆಂದರೆ ಪುರುಷರು ಒಂದು ಸಲ ಇಲ್ಲಿಯ ರಥ ಎಳೆದರೆ ಮತ್ತೊಂದು ಬಾರಿ ಸ್ತ್ರೀಯರು ಎಳೆಯುತ್ತಾರೆ.

### ಬನಶಂಕರಿ, ಶಿವಮೊಗ್ಗ

ಶಿವಮೊಗ್ಗದ ರೈಲು ನಿಲ್ದಾಣದ ಸಮೀಪದಲ್ಲಿರುವ ಬನಶಂಕರಿ ದೇವಾಲಯವು 1999 ರಲ್ಲಿ ನಿಮಿಷಾಂಬ ದೇವಿಯ ಜನ್ಮದಿನದಂದು ಸ್ಥಾಪನೆಗೊಂಡಿದೆ. ಇಲ್ಲಿಯ ವಿಗ್ರಹವನ್ನು ಬಾದಾಮಿ ಬನಶಂಕರಿ ದೇವಾಲಯದಲ್ಲಿ ಪೂಜೆ ಮಾಡಿಸಿ ಪ್ರತಿಷ್ಠಾಪನೆ ಮಾಡಲಾಗಿದೆ. 4 ಅಡಿ ಎತ್ತರವಿರುವ ದೇವಿ ಮೂರ್ತಿ ಕಪ್ಪುಶಿಲೆಯಲ್ಲಿ ನಿರ್ಮಿಸಲಾಗಿದೆ. ಪ್ರತಿ ರಾಹುಕಾಲದ ಸಮಯದಲ್ಲಿ (ಭಾನುವಾರ,ಶುಕ್ರವಾರ, ಮಂಗಳವಾರ) ಲಿಂಬೆಹಣ್ಣಿನ ದೀಪದಿಂದ ಆರತಿಯನ್ನು ದೇವಿಗೆ ಬೆಳಗುತ್ತಾರೆ. ರಥೋತ್ಸವದಂದು ದೇವಿಗೆ ಶಾಕಾಂಬರಿ ಅಲಂಕಾರ ಮಾಡಲಾಗುತ್ತದೆ. ದೇವಿಯ ಬಲಗಡೆ ಈಶ್ವರ, ಎಡಗಡೆ ಗಣಪತಿ ವಿಗ್ರಹವಿದೆ. ಇಲ್ಲಿಯ ವಿಶೇಷವೆಂದರೆ ದೇವಿಯು ಹೂವಿನ ಪ್ರಸಾದ ನೀಡುವ ಮೂಲಕ ಭಕ್ತರ ಇಷ್ಟಾರ್ಥ ನೆರವೇರುವ ಬಗ್ಗೆ ತಿಳಿಸುತ್ತಾಳೆ.

ಬನಶಂಕರಿ ದೇವಿಯನ್ನು ಭಕ್ತಿಯಿಂದ ಪೂಜಿಸಿದವರಿಗೆಲ್ಲಾ ಭಕ್ತಿ, ಮುಕ್ತಿ ನೀಡಲಿ. "ಸರ್ವಮಂಗಳ ಮಾಂಗಲ್ಯ ಶಿವೇ ಸಾರ್ವಾರ್ಥ ಸಾಧಿಕೆ ಶರಣ್ಯೇತ್ರಯಂಬಕೇ ಗೌರಿ ಬನಶಂಕರೀ ತಾಯೇ ನಮೋಸ್ತುತೇ." ಸಕಲರಿಗೂ ಶುಭವಾಗಲಿ.

ಅದ್ರೋಹಃ ಸರ್ವಭೂತಾನಾಂ
ಕರ್ಮಣಾ ಮನಸಾ ಗಿರಾ ।
ಅನುಗ್ರಹಶ್ಚ ದಾನಂ ಚ
ಶೀಲಮೇತದ್ವಿದುರ್ಬುಧಾಃ॥

(ಮನುಸ್ಮೃತಿ)

ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕೆಲಸದಿಂದಾಗಲೀ ಯಾರಿಗೂ ದ್ರೋಹ ಮಾಡದೇ ಇರುವುದು, ಅನುಗ್ರಹ ಮಾಡುವುದು ಮತ್ತು ದಾನ ಮಾಡುವುದು ಇವನ್ನು ಶೀಲವೆಂದು ಪಂಡಿತರು ತಿಳಿಯುತ್ತಾರೆ.

# ಪದಬಂಧ – 1

**ಎಡದಿಂದ ಬಲಕ್ಕೆ**

01. ಆಹ್ವಾನಕ್ಕೆ ಓ ಗೊಟ್ಟು ಬರುವಿಕೆ ...(4)
02. ಆಹಾರವನ್ನು ಸ್ವೀಕರಿಸುವವ (ಖಾರದ ಧ್ವನಿ) ...(3)
03. ಒಳಗಿನ ಮನಸ್ಸನ್ನು ತಟ್ಟುವಿಕೆ ...(5)
04. ಒಳ್ಳೆಯ ಫಲ ...(3)
05. ಅತ್ತಿಂದಿತ್ತ ತಿರುಗುವುದು ಆತಂಕಕ್ಕೊಳಪಟ್ಟು ...(4)

**ಬಲದಿಂದ ಎಡಕ್ಕೆ**

06. ಒಳ್ಳೆಯ ಅಥವಾ ಗೌರವಯುತ ..(2)
07. ದಾಖಲೆಯ ಮತ್ತೊಂದು ಹೆಸರು 'ಷ' ಯಿಂದಾರಂಭ ...(2)
08. ಹಟ ಸಾಧನೆಯ ಪ್ರವೃತ್ತಿ ...(2)
09. ಭೋಜನಕ್ಕೆ ಹೀಗೆನ್ನುತ್ತಾರೆ. ...(2)
10. ಹೆಚ್ಚಿನದಕ್ಕೆ ಇನ್ನೊಂದು ರೂಪ ...(3)

**ಮೇಲಿಂದ ಕೆಳಕ್ಕೆ**

11. ನೀರಾವಳಿಯ ಒಂದು ರೂಪ 'ಏ' ಯಿಂದಾರಂಭ ...(2)
12. ಆತಂಕಕ್ಕೊಳಪಡುವ ಒಂದು ಸ್ಥಿತಿ 'ಕ' ಯಿಂದಾರಂಭ ...(4)
13. ಈ ಲೋಕದಲ್ಲಿನ ಜೀವನಕ್ಕೆ ಹೀಗೆನ್ನುತ್ತಾರೆ. ...(2)
14. ಬಲ ಭಾಗದ ವ್ಯತಿರಿಕ್ತ ರೂಪ ...(2)
15. ಊಟಕ್ಕೆ ಅಥವಾ ಭೋಜನಕ್ಕೆ ಕರೆದು ಸತ್ಕರಿಸುವಿಕೆ ...(3)
16. ಒಡೆಯನನ್ನು, ದೇವರನ್ನು ಈ ರೀತಿ ಸಂಬೋಧಿಸುತ್ತಾರೆ. ...(2)

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | | | | 6 | 11 | 12 | 13 |
| 2 | 2 | | | | | | | |
| 3 | | | | | 14 | 15 | | 16 |
| 4 | | 7 | 18 | 19 | | | | |
| 5 | | 3 | | | | | | |
| 6 | 4 | | | 8 | | 20 | | 21 |
| 7 | | 9 | | 17 | 5 | | | |
| 8 | 22 | | 23 | | | 10 | 24 | |

**– ಪಿ.ಜಿ. ಶ್ರೀನಿವಾಸನ್**

-47 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.

17. ಉಷ್ಣತೆಯ ತೀಕ್ಷ್ಣತೆಗೆ ಒಂದು ಪದ ...(2)

**ಕೆಳಗಿನಿಂದ ಮೇಲಕ್ಕೆ**

18. ನೀರನ್ನು ಹೀಗೂ ಕರೆಯುತ್ತಾರೆ. ...(3)
19. ಕೂಡಿ ಬಾಳಿದರೆ ಸ್ವರ್ಗ ಸುಖ ಎನ್ನುತ್ತಾರೆ. ...(4)
20. ಒಬ್ಬರಿಂದ ಪಡೆದ ವಸ್ತು (ಬಿಟ್ಟು ಬಂದರೆ ಅದಕ್ಕೆ) ತೀರಿಸುವವರೆಗೆ ಹೀಗೆನ್ನುತ್ತಾರೆ. ...(2)
21. ಹಣ, ಐಶ್ವರ್ಯ ಸಂಪತ್ತಿಗೆ ಮತ್ತೊಂದು ಹೆಸರು ...(2)
22. ಓಡುವುದಕ್ಕೆ ಅಥವಾ ಮಾರ್ಮಿಕವಾಗಿ ಮೋಸ ಮಾಡಿ ಓಡಿ ಹೋದವನಿಗೆ ಹೀಗೆನ್ನುತ್ತಾರೆ. ...(2)
23. ಒಂದು ವಸ್ತುವನ್ನು ಪಡೆದು ಅನುಭವಿಸುವ ಆಸೆ ...(3)
24. ಸೋಲಿನ ಸಂಕೇತ ...(4)

# ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ "ಚಿಂತೆಯ ಪರಿಹರಿಸೊ ತಿಮ್ಮಯ್ಯಾ" ಆತ್ಮನಿವೇದನೆ ಕೀರ್ತನೆಯ ಒಳನೋಟ

– ಡಾ।। ಸುಭಾಸ ಕಾಖಂಡಕಿ

79754 42458

ಚಿಂತೆಯ ಪರಿಹರಿಸೊ ತಿಮ್ಮಯ್ಯಾ

ಚಿಂತಾಯಕ ಕಂತು ಕಮಲೆಯ ರಾಯಾ ।। ಪ।।

ತಿರುಪತಿ ತಿಮ್ಮಪ್ಪಾ ದಾಸರ ಆರಾಧ್ಯದೇವ, ಏನಿದ್ದರೂ ಅವನನ್ನೇ ಮೊರೆಹೋಗಿ ಆಸರೆ ಬೇಡಿ ಚಿಂತೆಗಳ ಪರಿಹರಿಸು ಎಂದು ಕೇಳುತ್ತಾರೆ.

ಹಿಂದಿನ ಸಂಚಿಕೆಯ ಕೀರ್ತನೆಯಲ್ಲಿ ಕಂಜುನಾಭನ ದಯವಿರಲು ಅಂಜಿಕ್ಯಾಕೆ ಎಂದಿರುವ ದಾಸರು, ಈ ಕೀರ್ತನೆಯಲ್ಲಿ ಭವದ ಚಿಂತೆ ಪರಿಹರಿಸೋ ಕಮಲೆಯರಾಯ ಅಂದರೆ ಲಕ್ಷ್ಮಿ ಪತಿಯಾದ ನಾರಾಯಣನೇ ಎಂದು ಕೇಳಿಕೊಳ್ಳುತ್ತಾರೆ.

ಮುಂದಿನ ನುಡಿಯಲ್ಲಿ

"ಸಾಧ್ಯವಲ್ಲದುದನ್ನು ಹಂಬಲಸಿ

ಬುದ್ಧಿ ಭ್ರಾಂತಿಲಿ ಬಲು ಸುಖ ಬಯಸಿ

ಕದ್ದ ಕಳ್ಳನಂತೆ ವೃಥಾ ಕುದಿದೆ

ಮದ್ದು ಮೆದ್ದಲಿಯಂತೆ ಬಳಲಿದೆ ।।೧।।

ಹೇ ! ಸ್ವಾಮಿ ಭವದಲ್ಲಿ ಬಳಲುತ್ತ ಸಾಧ್ಯವಿಲ್ಲದ ವಸ್ತು ಸಿಗಲಿ ಎಂದು ಹಂಬಲಿಸುತ್ತಾ, ಲೌಕಿಕ ಸುಖವೆಂಬುದು ಭ್ರಾಂತಿಯಾದರು ಮತ್ತೆ - ಮತ್ತೇ ಅದಕ್ಕಾಗಿ ಬಯಸುತ್ತ , ಹಗಲು - ರಾತ್ರಿ ಕದ್ದ ಕಳ್ಳ ಎಲ್ಲಿ ಸಿಕ್ಕಿಬೀಳುತ್ತಾನೋ ಎಂಬ ಭಯದಲ್ಲಿ ಕಳವಳ ಪಡುವಂತೆ, ಭ್ರಮಿಕನಾಗಿ ಜೀವಿಸುತ್ತಿದೇನೆ ಸ್ವಾಮಿ! ಇಂಥ ಕಳವಳ - ಚಿಂತೆ - ತೊಳಲಾಟದಲ್ಲಿ ನಿನ್ನ ನಾಮ ಸ್ಮರಣೆಯನ್ನು, ಶಾಸ್ತ್ರಾದಿ ಶ್ರವಣ ಮಾಡುವುದನ್ನು ಮರೆತು ಲೌಕಿಕ ವ್ಯಾಪಾರದ ಚಿಂತೆಯಲ್ಲಿ ಮುಳಗಿದ್ದೇನೆ ಸ್ವಾಮೀ! ಇಂಥಹ ಚಿಂತೆಗಳನ್ನು ಪರಿಹರಿಸಿ ಮುಕ್ತಿ ಮಾರ್ಗದ ಹಾದಿ ತೋರಿಸು ಎಂದಿದ್ದಾರೆ ದಾಸರು.



ಮುಂದಿನ ನುಡಿಯಲ್ಲಿ

"ತಿಳಿದು ಮಾಯದ ಬಲೆಗೆ ಮೈಗೊಟ್ಟೆ

ಬೆಲೆಗಟ್ಟಿ ವೃಥಾ ಹುಚ್ಚು ದೈನ್ಯ ಬಟ್ಟೆ

ಆಲಿಸಿ ಮೋಕ್ಷದ ನೆಲೆಯ ಕೇಳದೆ ನಾ

ಕಳವಳಗೊಂಬೆ ಕರುಣಾ ಸಂಪನ್ನ ।।೨।।

ಈ ಜಗತ್ತು, ಜೀವನ - ಬದುಕು , ಎಲ್ಲ ಮಾಯೆಯೆಂದು ತಿಳಿದರೂ ಮತ್ತೆ, ಮತ್ತೆ ಅದೇ ಮಾಯದ ಬಲೆಗೆ ಸಿಕ್ಕು ಬಿಡಿಸಿಕೊಳ್ಳಲಾರದೆ ಹುಚ್ಚನಂತೆ ತೊಳಲಾಡುತ್ತಿರುವೇ ಸ್ವಾಮೀ! ನಿನ್ನಲ್ಲಿ ಬಂದು ಮೋಕ್ಷದ ಹಾದಿ ತೋರಿಸು, ಮುಕ್ತಿ ತೋರೋ ಎಂದು ಕೇಳದೆ ಮತ್ತೆ - ಮತ್ತೆ ಲೌಕಿಕದ ಸುಖಗಳನ್ನು ಕೇಳುತ್ತ, ಆ ಭ್ರಮೆಗೆ ಸಿಲುಕಿ ಕಳವಳಗೊಳ್ಳುತ್ತಿರುವೆ ಶ್ರೀಹರಿ ... ಅಂಥಹ ಕಳವಳವನ್ನು ತೊಡೆದು ನಿನ್ನ ಪಾದದಲ್ಲಿ ಭಕ್ತಿ ಕೊಡೊ, ನನ್ನ ಮೇಲೆ ಕರುಣೆ ದೋರಿ ನಿನ್ನ ಕೃಪಾಕಟಾಕ್ಷ ನನಗೆ ಒದುಗುವಂತೆ ಮಾಡೋ ಶ್ರೀಹರಿ ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ.

ಇನ್ನು ಕೊನೆಯ ನುಡಿಯಲ್ಲಿ

ಚಿಂತೆಗೆ - ಚಿಂತೆ ಸಹಾಯವಾಗಿ

ಅಂತರಂಗದ ಕ್ಲೇಶ ಹೇಸಿತು ಬಾಗಿ

ಕಾಂತ ಮೂರ್ತಿ ಪ್ರಸನ್ನ ವೆಂಕಟೇಶ ಏ

ಕಾಂತದಾಸರ ನೆಳುನೇ ತೋರಿಸೋ ।।3।।

ಹಗಲು - ರಾತ್ರಿ ಅದು ಬೇಕು ಇದು ಬೇಕು ಎಂಬ ಚಿಂತೆಗಳಲ್ಲಿ ನನ್ನನ್ನೆ ನಾನು ಕಳೆದುಕೊಂಡು - ಮನಸ್ಸಿನ ತುಂಬಾ ಕ್ಲೇಶ ತುಂಬಿ, ನನ್ನ ಚಿಂತೆಯ ಮಾರ್ಗಕ್ಕೆ ನಾನೇ ಹೇಸಿಕೊಂಡು ಜರ್ಜರಿತನಾಗುತ್ತಿದ್ದೇನೆ ಸ್ವಾಮಿ.... ಇದೆಲ್ಲವನ್ನು ನನ್ನ ಮನಸ್ಸಿನಿಂದ ತೊಳೆದು ಹಾಕಿ, ನಿನ್ನ ಅಂತರಂಗ ಭಕ್ತರ ಸಾನಿಧ್ಯ ತೋರಿ ಅವರ ನೆರಳಿನಲ್ಲಿ ನನ್ನನ್ನು, ನಾನು ಉದ್ಧಾರ ಮಾಡಿಕೊಳ್ಳುವ ದಾರಿ ತೋರಿಸೋ ಪ್ರಭು ಎಂದು ದಾಸರು, ಲೋಕದ ಜನ ಈ ಚಿಂತನೆಯಲ್ಲಿ, ತಮ್ಮನ್ನು ಮುಕ್ತಿ ಮಾರ್ಗಕ್ಕೆ ಹಚ್ಚಿಕೊಳ್ಳಲಿ ಎಂದು ಉಪದೇಶ ನೀಡಿದ್ದಾರೆ.

ಧಾರಾವಾಹಿ - 7

# ಆಳ್ವಾರರ ಭಗವದನುಭವ

ಡಾ॥ ಸಿ. ಎಸ್. ಊರ್ಮಿಳಾ
93804 26830

### ಮಧುರಕವಿ ಆಳ್ವಾರ್

ಇವರು ನಮ್ಮಾಳ್ವಾರರ ಪರಿಪೂರ್ಣ ಅನುಗ್ರಹಕ್ಕೆ ಪಾತ್ರರಾದರು. ''ವೇರೊನ್ರುಂ ನಾನರಿಯೇನ್ ವೇದಂ ತಮಿಳ್ ಶೆಯ್ದ, ಮಾರನ್ ಶಡಗೋಪನ್ ವಣ್‌ಕುರುಹೂರ್ - ಏರುಎಙ್ಗಳ್ ವಾಳ್ವಾಮೆನ್‌ರ್ರೇತ್ತುಮ್ ಮಧುರಕವಿಯಾರ್ ಎಮ್ಮೈ ಆಳ್ವಾರವರೇ ಯರಣ್''.

ಕಣ್ಣಿನುಣ್ ಶಿರುತ್ತಾಂಬಿನಾಲ್ ಕಟ್ಟುಣ್ಣ
ಪ್ಪಣ್ಣಿಯ ಪೆರುಮಾಯನ್, ಎನ್ನಪ್ಪನಿಲ್
ನಣ್ಣಿತೆನ್‌ಕುರುಹೂರ್ ನಂಬಿ ಎನ್ರಕ್ಕಾಲ್
ಅಣ್ಣಿಕ್ಕುಮ್ ಅಮುದೂರುಮ್ ಎನ್ನಾವುಕ್ಕೆ

(ಕಣ್ಣಿನುಣ್ ಶಿರುತ್ತಾಂಬು 1 ನೇ ಪಾಶುರ)

ಎಂದು ಮಧುರಕವಿಆಳ್ವಾರರು -ಆ ಮಾಯಾವಿ ದಾಮೋದರನ ಸಹವಾಸವೇ ಬೇಡ. ನನ್ನ ಗುರುಗಳ ಪಾದಾರವಿಂದವೇ ನನಗೆ ಸಾಕು. ಗುರುವಿನ ಅನುಗ್ರಹವೇ ಸಾಕು-ಎಂದು ಹೇಳಿ ಗುರುಪರಂಪರೆಗೆ ಮಹತ್ವವನ್ನು ಕೊಟ್ಟ ಮಹಾಯೋಗಿ ಮಧುರಕವಿಯಾಳ್ವಾರ್.

ಮಧುರಕವಿ ಆಳ್ವಾರರ ಆಚಾರ್ಯನಿಷ್ಠೆ ಶ್ರೀವೈಷ್ಣವರಲ್ಲಿ ಅಸ್ತಿತ್ವದಲ್ಲಿದೆ. ಮಧುರಕವಿಯ ಜೀವನವೇ ಶ್ರೀವೈಷ್ಣವರಿಗೆ ಆದರ್ಶಪ್ರಾಯವಾದದು. ಶುಭಕಾರ್ಯಗಳಲ್ಲಿ ಗುರುಪರಂಪರೆಯನ್ನು ಸ್ಮರಿಸುತ್ತಾ ಸಂಭಾವನೆಯನ್ನು ಗುರುಮಠಗಳಿಗೆ ಸಲ್ಲಿಸುವ ಪರಿಪಾಠ ಇಂದಿಗೂ ಉಳಿದು ಬಂದಿದೆ.

''ಗುರುವಿನ ಗುಲಾಮನುನಾಗುವ ತನಕ ದೊರೆಯದಣ್ಣ ಮುಕುತಿ'' ಎಂದು ನುಡಿದ ಪುರಂದರ ದಾಸರನ್ನೂ ಇಲ್ಲಿ ಸ್ಮರಿಸಬಹುದು.



## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೇಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪ ಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗ ವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.


### ತೊಂಡರಡಿಪ್ಪೊಡಿ ಆಳ್ವಾರ್ - ಭಕ್ತಾಂಘ್ರಿರೇಣು:

ಇವರೂ ಸಹ ಭಗವದಾರಾಧನೆಗಿಂತ ಭಾಗವತರ ಆರಾಧನೆಯೇ ಉತ್ತಮವೆಂದು ಸ್ವಾನುಷ್ಠಾನದಿಂದ ತೋರಿಸಿ ಕೊಟ್ಟ ಮಹಾಭಕ್ತರು ಇವರೂ ಸಹ ಶ್ರೀರಂಗನಾಥನ ಸೌಂದರ್ಯವನ್ನು ಕಂಡು ಈ ಪ್ರಪಂಚದಲ್ಲಿ ಮತ್ತಾವುದೂ ನನಗೆ ಬೇಡ. ನಿನ್ನ ಅನುಗ್ರಹ ಒಂದಿದ್ದರೆ ಸಾಕು ಎಂದು ಪ್ರಾರ್ಥಿಸಿದ್ದಾರೆ. ಇವರು ತಮ್ಮನ್ನು ಭಾಗವತರ ಪಾದಧೂಳಿ ಎಂದು ಹೇಳಿಕೊಳ್ಳುತ್ತಿದ್ದರು. ಆದ್ದರಿಂದಲೇ 'ತೊಂಡರಡಿಪ್ಪೊಡಿ' ಎನ್ನುವ ಹೆಸರನ್ನೇ ಪಡೆದರು. ಇವರು 'ತಿರುಮಾಲೈ' ಎಂದೂ ತಿರುಪ್ಪಳಿಯೆಳುಚ್ಚಿ'' ಎಂಬ ಪ್ರಬಂಧಗಳನ್ನು ರಚಿಸಿದರು. ನಲವತ್ತೈದು ಪಾಶುರಗಳಿಂದ ಕೂಡಿದ ತಿರುಮಾಲೈ ಭಗವದನುಭವಗಳನ್ನು ತಮ್ಮ ಪಾಶುರಗಳಲ್ಲಿ ಹಾಡಿ ಕೊಂಡಾಡಿದ್ದಾರೆ. ''ತಿರುಪ್ಪಳಿಯೆಳುಚ್ಚಿ'' ಪ್ರಬಂಧವು ಹತ್ತು ಪಾಶುರಗಳಿಂದ ಕೂಡಿದೆ. ಇದು ಶ್ರೀರಂಗನಾಥನಿಗೆ ಸ್ತುತಿಸಿದ ಸುಪ್ರಭಾತದ ಹಾಡು ಇವರು ತಮ್ಮ 'ತಿರುಮಾಲೈ'' ಪ್ರಬಂಧದಲ್ಲಿ ಭಗವದನುಭವವನ್ನು ಹೀಗೆ ಕೊಂಡಾಡಿದ್ದಾರೆ.

ಪಚ್ಚೈಮಾಮಲೈ ಪೋಲ್ ಮೇನಿ ಪ್ಪವಳವಾಯ್ ಕಮಲ ಚೆಂಗಣ್
ಅಚ್ಚುತಾ ಅಮರರೇರೇ ಆಯರ್‌ತಮ್‌ಕೊಳುಂದೇ ಯೆನ್ನುಮ್
ಇಚ್ಚುವೈ ತವಿರಯಾನ್ ಪೋಯ್ ಇನ್ದಿರ ಲೋಕಮಾಳುಮ್
ಅಚ್ಚುವೈ ಪೆರಿನುಮ್ ವೇಂಡೇನ್ ಅರಂಗಮಾನಹರುಳಾನೇ

ಶ್ರೀರಂಗನಾಥನಿಗೆ ನಾನು ಪುಷ್ಪಕೈಂಕರ್ಯವನ್ನು ಮಾಡುವುದನ್ನು ಬಿಟ್ಟು ಮತ್ತಾವುದಕ್ಕೂ ಆಸೆ ಪಡುವುದಿಲ್ಲ. ಸದಾ ನಿನ್ನ ಹವಳದಂತೆ ಬಾಯನ್ನು ಹೊಂದಿದ ಆ ಭಗವಂತನನ್ನೇ ಸದಾ ಕಾಲವು ಪ್ರಾರ್ಥಿಸುತ್ತೇನೆ ಎಂದಿದ್ದಾರೆ.

ಹೀಗೆ ಆಳ್ವಾರರ ದೃಷ್ಟಿಯಲ್ಲಿ 'ದೇವರು ಧರ್ಮ'' ಎಂದರೆ ಶ್ರೇಯಸ್ಸಿನ ಮಾರ್ಗ. ಆಳ್ವಾರರ ಅಭಿಪ್ರಾಯಗಳು ಸ್ವಾನುಭವದ ನುಡಿಗಳು, ಅರಿವಿನ ಕಿರಣಗಳು , ಅನುಕಂಪೆಯ ಅಲೆಗಳು ಧೀಮಂತಿಕೆಯ ಘೋಷಣೆಗಳು ಸಾಂತ್ವನದ ಸಂದೇಶಗಳು.ಈ ಎಲ್ಲ ಕಾರಣಗಳಿಂದ ಆಳ್ವಾರರು ಪ್ರತಿ ಪಾದಿಸಿರುವ ಧರ್ಮವಾಗಲಿ, ಆಚರಣೆಯಾಗಲಿ, ಅನುಭವಗಳು ವ್ಯಕ್ತಿಗೆ ಭಾರವಾಗದೆ ಆಚರಣೆಗೆ ಫಲಕಾರಿಯಾಗಿದೆ. ವಿಶ್ವದ ಎಲ್ಲ ಹಿತಚಿಂತಕರು ತೋರಿಸಿರುವ ವಿಶಿಷ್ಟ ಹಾದಿಯಂತೆ ಆಳ್ವಾರರ ಧಾರ್ಮಿಕ ಚಿಂತನೆಯೂ ವೈಶಿಷ್ಟ್ಯ ಪೂರ್ಣವಾಗಿದೆ. ದೇವರ ಅಸ್ತಿತ್ವವನ್ನು ಸಮರ್ಪಕವಾಗಿ ತಮ್ಮ ಅನುಭವಗಳ ಮೂಲಕ ಮನುಕುಲಕ್ಕೆ ಹಂಚಿದ್ದಾರೆ. ಈದೃಷ್ಟಿಯಲ್ಲಿ ಆಳ್ವಾರರು ಕೇವಲ ತಮಿಳು ಸಂಸ್ಕೃತಿಗಷ್ಟೇ ಅಲ್ಲ, ಅಥವಾ ಭಾರತೀಯ ಸಂಸ್ಕೃತಿಗಷ್ಟೇ ಅಲ್ಲ ವಿಶ್ವ ಸಂಸ್ಕೃತಿಗೂ ಒಂದು ಹೊಸ ಜೀವನ ಮಾರ್ಗವನ್ನು ತೋರಿಸುವುದರ ಮೂಲಕ ಒಂದು ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ.



14

**ಕರ್ನಾಟಕದ ವೈಷ್ಣವ ದೇವಾಲಯಗಳು**

# ಕೆಂಬಾಳಿನ ಲಕ್ಷ್ಮೀನರಸಿಂಹ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886



ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು,ಕೆಂಬಾಳು ಎಂಬ ಗ್ರಾಮವು ಈಗ ತೀರ ಸಣ್ಣ ಗ್ರಾಮದಂತೆ ಕಂಡರೂ ಒಂದಾನೊಂದು ಕಾಲದಲ್ಲಿ ಬಹಳ ಪ್ರಸಿದ್ಧವಾದ ಪ್ರದೇಶವಾಗಿತ್ತು ಎಂಬುದು ಕೆಂಬಾಳಿನಲ್ಲಿ ದೊರೆತ ಶಾಸನಗಳಿಂದ ತಿಳಿದು ಬರುತ್ತದೆ. ಹೊಯ್ಸಳರ ಅರಸನಾದ 2ನೇ ಬಲ್ಲಾಳನ ಹಿರಿಯರಾಣಿ ಚೋಳಮಹಾದೇವಿಯು ಕೆಂಬಾಳನ್ನು ಆಳುತ್ತಿರುತ್ತಾಳೆ.ಕೆಂಬಾಳಿನಲ್ಲಿ ಹೊಯ್ಸಳರ ಕಾಲದ ಲಕ್ಷ್ಮೀನರಸಿಂಹ, ಕಲ್ಲೇಶ್ವರ ದೇವಾಲಯಗಳಿವೆ. ಶ್ರೀಲಕ್ಷ್ಮೀನರಸಿಂಹ ದೇವಾಲಯವು ಊರ ನಡುವೆ ಇದ್ದು ಮೇಲ್ನೋಟಕ್ಕೆ ತೀರ ಇತ್ತೀಚಿನ ದೇವಾಲಯದಂತೆ ಕಂಡು ಬಂದರೂ, ಒಳಗೆ ಪ್ರವೇಶಿಸಿದರೆ ಹೊಯ್ಸಳರ ದೇವಾಲಯದ ವಾಸ್ತುವು ಗೋಚರಿಸುತ್ತದೆ ದೇವಾಲಯದ ನವರಂಗದಲ್ಲಿ ತಿರುಗಣೆಯಿಂದ ಮಾಡಿದ ದುಂಡಾದ ನಾಲ್ಕು ಕಂಬಗಳಿವೆ.ನವರಂಗದ ಮಧ್ಯದ ಭುವನೇಶ್ವರಿಯು ಆಕರ್ಷಕವಾಗಿ ಮೂಡಿ ಬಂದಿದೆ. ಗರ್ಭಗುಡಿಯಲ್ಲಿ ಸುಮಾರು 5ಅಡಿ ಎತ್ತರವಿರುವ ಲಕ್ಷ್ಮೀನರಸಿಂಹನ ಸೊಗಸಾದ ಮೂರ್ತಿಯಿದೆ. ಅಲಂಕೃತ ಪ್ರಭಾವಳಿಯ ಕೆಳಗೆ ಶ್ರೀಲಕ್ಷ್ಮೀಯನ್ನು ತನ್ನ ವಾಮಭಾಗದಲ್ಲಿ ಕೂಡಿಸಿ ಕೊಂಡಿರುವ ಕಮಲ, ಗದಾ,ಶಂಖ, ಚಕ್ರಧಾರಿಯಾದ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯು ತನ್ನ ಎಂದಿನ ಹೊಯ್ಸಳ ಶೈಲಿಯಲ್ಲಿ ವಿರಾಜಮಾನವಾಗಿದೆ.ಕೀರಿಟ ಮಕುಟವನ್ನು ಧರಿಸಿರುವ ಸ್ವಾಮಿ ಸೌಮ್ಯವದನನಾಗಿದ್ದು, ಇಂದು ಸ್ಥಳೀಯ ಜನ ಗಳ ಇಷ್ಟಾರ್ಥವನ್ನು ನೆರವೇರಿಸುವ ಕಾಮಧೇನುವಾಗಿ ರುತ್ತಾನೆ.

ಕೆಂಬಾಳಿನ ಶ್ರೀಲಕ್ಷ್ಮೀನರಸಿಂಹ ದೇವಾಲಯವನ್ನು ಹೊಯ್ಸಳರ 2 ನೇ ನರಸಿಂಹನ ಬಹಳ ಅಪ್ತ ಲೆಕ್ಕಾಧಿ ಕಾರಿ, ಶ್ರೀಕರಣ ವಿಶ್ವನಾಥದೇವನು ದೊರೆಯು ಚೂಡ ವಾದಿ ಕೊಪ್ಪ ಎಂಬ ಸ್ಥಳದಲ್ಲಿ ತನ್ನ ಆತ್ಮೀಯರಿಗೆ ಸಂತೋಷ ಕೂಟವನ್ನು ಏರ್ಪಡಿಸಿರುವಾಗ ಕೆಂಬಾಳನ್ನು ಧಾರಾಪೂರ್ವಕವಾಗಿ ಪಡೆದು ವೀರನರಸಿಂಹಪುರವೆಂದು ಪುನರ್ ನಾಮಕರಣ ಮಾಡಿ ದಿನಾಂಕ 21-10-1223 ರಂದು ಶ್ರೀ ವೀರನರಸಿಂಹ ದೇವಾಲಯವನ್ನು ನಿರ್ಮಿಸಿ ಸ್ವಾಮಿಯ ಪ್ರತಿಷ್ಠಾಪನೆಯನ್ನು ಮಾಡಿಸಿದನು.

ಶ್ರೀಕರಣ ವಿಶ್ವನಾಥನು ಪ್ರಕಾಂಡ ಪಂಡಿತನಾಗಿದ್ದು,ಎರಡು ಹಸ್ತಗಳಲ್ಲೂ ಒಮ್ಮೆಲೆ ಬರೆಯುವ ಚಾಣಾಕ್ಯ ಹಾಗೂ ವಿದ್ವಜ್ಜನರ ಮುಂದೆ ಶತಾವಧಾನವನ್ನು ಯಶಸ್ವಿಯಾಗಿ ಪ್ರದರ್ಶಿಸಿದ ಪಂಡಿತನೆಂದು ಕೆಂಬಾಳಿನ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ದೊರೆತಿರುವ ಶಾಸನದಿಂದ ತಿಳಿದುಬರುತ್ತದೆ.ಜಗದ್ವಿಖಾತ ಶ್ರವಣಬೆಳಗೊಳದ ಮೂಲದವನಾದ ವಿಶ್ವನಾಥನ ಹಿರಿಯ ಸಹೋದರನಾದ ಈಶ್ವರದೇವನು ಹೊಯ್ಸಳರ ದೊರೆ ನರಸಿಂಹನಿಗೆ ಪತ್ರಗಳ ಹಾಗೂ ಲೆಕ್ಕದ ವ್ಯವಹಾರವನ್ನು ಹೇಳಿ ಕೊಡುತ್ತಿದ್ದ ಅಪ್ತನಾಗಿದ್ದನು.

ವಿಶ್ವನಾಥದೇವನು ವೀರನರಸಿಂಹ ಸ್ವಾಮಿಯನ್ನು ಪ್ರತಿಷ್ಠಾಪಿಸಿದುದಲ್ಲದೇ ಕೆರೆಯನ್ನು ಕಟ್ಟಿಸಿ

ದೇವರಿಗೆ ಅಲಂಕಾರದ ಆಭರಣಗಳನ್ನೂ ಸಹ ನೀಡಿರುತ್ತಾನೆ. ಕ್ರಿ.ಶ.1235ರಲ್ಲಿ ವಿಶ್ವನಾಥನ ವಂಶದವರೇ ಆದ ಹಿರಿಯ ಮಾಣಿಕ್ಯ ಭಂಡಾರದ ಅಧ್ಯಕ್ಷರುಗಳಾದ ಈಚಣ್ಣ-ರಾಯಣ್ಣರುಗಳು ಸ್ವಾಮಿಯ ಪೂಜಾ ಕಾರ್ಯಕ್ಕೆ ತೊಂದರೆಯಿದೆಯೆಂದು ಹೊಯ್ಸಳರ ದೊರೆ ಸೋಮೇಶ್ವರನನ್ನು ಪ್ರಾರ್ಥಿಸಿ ಲಕ್ಷ್ಮೀನರಸಿಂಹದೇವರ ನಂದಾದೀವಿಗೆಗೆ ಚೈತ್ರ ಪವಿತ್ರ ಖಂಡ ಸ್ಫುಟಿತ ಜೀರ್ಣೋರ್ದ್ವಾರಕ್ಕೆ ಕೆಂಬಾಳಿನ ಸಿದ್ಧಾಯದಲ್ಲಿ ಸ್ವಲ್ಪ ಭಾಗವನ್ನು ಪಡೆದುಕೊಂಡು ದೇವರ ಸೇವಾಕಾರ್ಯಗಳು ನಿರಂತರವಾಗಿ ನಡೆಯುವಂತೆ ನೋಡಿಕೊಂಡಿರುತ್ತಾರೆ.

ಕೆಂಬಾಳು ಗ್ರಾಮದ ಬಗ್ಗೆ ತಿಳಿದುಕೊಳ್ಳುವಾಗ ಹೊಯ್ಸಳರ ಕಾಲದಲ್ಲಿ ನಡೆದ ಮನಮಿಡಿಯುವ ಘಟನೆಯನ್ನು ಪ್ರಸ್ತಾಪಿಸಿದರೆ ಅದು ಅಪ್ರಸ್ತುತವೆನಿಸದು.ಕೆಂಬಾಳ ಗ್ರಾಮವು ಮೊದಲೇ ತಿಳಿಸಿದಂತೆ ಹೊಯ್ಸಳರ ಕಾಲದ ಪ್ರಮುಖ ಗ್ರಾಮವಾಗಿದ್ದಿತ್ತು.ಪ್ರಸ್ತುತ ಗ್ರಾಮವನ್ನು 2ನೇ ಬಲ್ಲಾಳನ ಹಿರಿಯ ರಾಣಿ ಚೋಳಮಹಾದೇವಿಯು ಆಳುತ್ತಿದ್ದಳು. ಆಗ ಆಕೆಯ ಜೀವನದಲ್ಲಿ ಒಂದು ಮಹತ್ತರವಾದ ಪ್ರಸಂಗವೊಂದು ಜರುಗಿತು.ಆಕೆಯ ಬಗ್ಗೆ ನೆರೆಯ ಬೇವೂರಿನ ಜನರಿಂದ ಕೆಟ್ಟ ಮಾತುಗಳನ್ನು ಕೇಳಿ. ರಾಣಿಯು ಕುಪಿತಳಾಗಿ ಬೇವೂರಿನ ಮೇಲೆ ಆಕ್ರಮಣವನ್ನು ಮಾಡಿಸುತ್ತಾಳೆ. ಆಗ ನಡೆದ ಹೋರಾಟದಲ್ಲಿ ಶತ್ರುಪಕ್ಷಗಳೊಡನೆ ಸೆಣಸುವಾಗ ರಾಣಿಯ ಕಡೆಯ ಕೇತಮಲ್ಲನೆಂಬ ವೀರನು ಹಲವು ಜನರನ್ನು ಕೊಂದು ಸ್ವರ್ಗಸ್ಥನಾಗುತ್ತಾನೆ. ಕೇತಮಲ್ಲನ ಮರಣದ ವಾರ್ತೆಯನ್ನು ಕೇಳಿನೊಂದ ಮಹಾರಾಣಿಯು ತನ್ನ ಭಂಡಾರಿಗಳಾದ ರಾಯಣ್ಣ-ಈಚಣ್ಣರನ್ನು ಕರೆದು “ಯಮ್ಮ ಮಕ್ಕಳ ನಾವು ನೋಯಿಸಿದೆವು.ನೀವು ಹೋಗಿ ಯಮ್ಮ ಶ್ರೀವಚನದಲ ಭೆಯವಂ ಕೊಟ್ಟು ಕೆಂಬಾಳೂರವತ್ತೊಕಲು ಮುಂತಾಗಿ ಕೇತಮಲ್ಲನಾಯಕನ ಮಗ ನರಸಿಂಹನಾಯಕನಂ ಕರೆದು ಸಂತವಿಟ್ಟುಡೆ ಕೊಟ್ಟು ಬಿಡಿಲಿ ಕೊಡುಗಿಯ”ಎಂದು ಆಜ್ಞಾಪಿಸಿರುವುದು ಕೆಂಬಾಳಿನ ಶಾಸನದಿಂದ ತಿಳಿಯುತ್ತದೆ. ಹೀಗೆ ಆ ಸಾಕ್ಷಾತ್ ಒಬ್ಬ ಮಹಾರಾಣಿ ತನ್ನ ವೀರಯೋಧನ ಮರಣಕ್ಕೆ ಸ್ಪಂದಿಸಿ ಮಾನವೀಯತೆಯನ್ನು ಮೆರೆದಿರುವುದು ಪ್ರಶಂಸನೀಯ ಸಂಗತಿ.

**ಹೀಗೆ ಬನ್ನಿ :**

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ಕೆಂಬಾಳಿನ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯನ್ನು ದರ್ಶಿಸಲು ತಿಪಟೂರು-ಹಾಸನ ರಸ್ತೆಯಲ್ಲಿ ತಿಪಟೂರಿನಿಂದ 16ಕಿ.ಮೀ. ದೂರದಲ್ಲಿ ಬಿದರೆಗೇಟ್ ಸಿಗುತ್ತದೆ. ಅಲ್ಲಿ ಎಡಕ್ಕೆ ತಿರುಗಿ ಬಿದರೆ-ವಳಗೆರೆಹಳ್ಳಿ ಮಾರ್ಗವಾಗಿ ಕೆಂಬಾಳನ್ನು ಸೇರಬಹುದು. ಚನ್ನರಾಯಪಟ್ಟಣದ ಕಡೆಯಿಂದ ಬರುವವರು ಚನ್ನರಾಯ ಪಟ್ಟಣದಿಂದ ಬಾಗೂರಿಗೆ ಬಂದು ನಂತರ ಮರಗೂರು ಶಿವರದ ಮಾರ್ಗವಾಗಿ ಕೆಂಬಾಳಿಗೆ ಬರಬಹುದು.(ದೂರ 24 ಕಿ.ಮೀ.)



## ಸಪ್ತಗಿರಿ ಓದುಗರಿಗೆ, ಏಜಂಟರಿಗೆ, ಚಂದಾದಾರರಿಗೆ

## ಮಕರ ಸಂಕ್ರಾಂತಿಯ ಶುಭಾಶಯಗಳು

**2022 ರಲ್ಲಿ ತಮ್ಮ ಅಭೀಷ್ಟಗಳನ್ನು ನೆರವೇರಿಸಿ ತಿರುಮಲೆಯ ಸ್ವಾಮಿಯು ಸುಖ ಶಾಂತಿಗಳನ್ನು ಸರ್ವತ್ರ ಸಮಾನವಾಗಿ ಹರಡಲೆಂದು ಹೃತ್ಪೂರ್ವಕ ಹಾರೈಕೆ.**

- ಪ್ರಧಾನ ಸಂಪಾದಕರು



ಧಾರಾವಾಹಿ -9

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ


- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಬಿ.ಎನ್. ಶ್ರೀನಿವಾಸನ್


ಸಾಳುವ ನರಸಿಂಹನ ಪಟ್ಟಾಭಿಷೇಕದಿಂದಾಗಿ ವಿಜಯನಗರದಲ್ಲಿ ಎರಡನೇ ರಾಜವಂಶ-ಸಾಳುವವಂಶ ಅಧಿಕಾರಕ್ಕೆ ಬಂದಿತು.ಸಾಳುವ ನರಸಿಂಹನು ಕ್ರಿ.ಶ.1490ರ ವರೆಗೆ ಆಳಿದ ಮೇಲೆ ಅವನ ಮಗ ಇಮ್ಮಡಿ ನರಸಿಂಹನು ಉತ್ತರಾಧಿಕಾರಿಯಾಗಿ ನರಸ ನಾಯಕನು ರಾಜಪ್ರತಿನಿಧಿಯಾದ.ಈ ಕಾಲದಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮೀಸಲಾಗಿಟ್ಟ, ಕಂದಾಡೈ ರಾಮಾನುಜಯ್ಯಂಗಾರ್ಯನು ಪ್ರಮುಖನಾಗಿದ್ದ. ಸಾಳುವ ನರಸಿಂಹನಿಗೆ ಈತ ಗುರುವಾಗಿದ್ದಿರಬೇಕು ಹಾಗೂ ತಿರುಪತಿ-ತಿರುಮಲೆಗಳಲ್ಲಿ ಸಾಳುವ ನರಸಿಂಹನಿಂದ ಸ್ಥಾಪಿತವಾದ ಉಚಿತಾನ್ನ ಸತ್ರಗಳನ್ನು ನೋಡಿಕೊಳ್ಳುವುದರಲ್ಲಿ ನೆರವು ನೀಡಿರಬೇಕು. ಈತನ ನೆರವಿನಿಂದ ಸಂತುಷ್ಟನಾದ ಸಾಳುವನರ ಸಿಂಹನು ಈ ರಾಮಾನುಜ ಕೂಟಗಳಿಗಾಗಿ ತಾನು ದಾನ ನೀಡಿದ ಹಳ್ಳಿಗಳ ನಿರ್ವಹಣೆಯಲ್ಲಿ ಈತನಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಿದ. ನರಸ ನಾಯಕನು ಕ್ರಿ.ಶ.1503 ರಲ್ಲಿ ಮರಣ ಹೊಂದಿ, ರಾಜ್ಯವನ್ನು ಹಾಗೂ ರಾಜ್ಯತ್ವವನ್ನು ಮಹತ್ವಾಕಾಂಕ್ಷಿಯಾದ ತನ್ನ ಮಗ ವೀರನರಸಿಂಹನಿಗೆ ಬಿಟ್ಟು ಹೋದ. ವೀರನರಸಿಂಹನು ಇಮ್ಮಡಿ ನರಸಿಂಹನನ್ನು ಸಿಂಹಾಸನಚ್ಯುತನನ್ನಾಗಿಸಿ ತಾನೇ ರಾಜನೆಂದು ಘೋಷಿಸಿಕೊಂಡು ಕ್ರಿ.ಶ. 1505 ರಲ್ಲಿ ಪಟ್ಟಾಭಿಷಿಕ್ತನಾಗಿ ತುಳುವ ವಂಶವನ್ನು ಆರಂಭಿಸಿದ. ಕ್ರಿ.ಶ.1509 ರ ವರೆಗಿನ ಹಲವು ಶಾಸನಗಳು ಇವನ ಆಳ್ವಿಕೆಯನ್ನು ಗುರುತಿಸುತ್ತದೆ.

ವೀರನರಸಿಂಹನ ಮರಣಾನಂತರ ಅವನ ಮಲ ಸಹೋದರ ಕೃಷ್ಣದೇವರಾಯನು ವಿಜಯನಗರದ ಸಿಂಹಾಸನವನ್ನೇರಿದ. ಈ ಪ್ರದೇಶದಲ್ಲಿ ಕಂಡುಬರುವ ಶಾಸನಗಳಲ್ಲಿ ಸುಮಾರು 85 ಇವನ ಆಳ್ವಿಕೆಯ ಕಾಲದವು. ಇವು ಶಕ ವರ್ಷ 1432 (ಕ್ರಿ.ಶ.1510) ರಿಂದ ಶಕ ವರ್ಷ 1451 (ಕ್ರಿ.ಶ.1529) ರ ವರೆಗಿನವು, ಇವುಗಳಲ್ಲಿ ಹಲವು, ರಾಯ ಮತ್ತವನ ಇಬ್ಬರು ರಾಣಿಯರು ತಿರುಮಲದೇವಿ, ಚಿನ್ನಾದೇವಿಯರು,ತಿರುಮಲೆಗೆ ಹಲವು ಬಾರಿ ಬಂದಾಗ (ಶ್ರೀ ವೆಂಕಟೇಶ್ವರಸ್ವಾಮಿ ಇವರ ಮನೆದೇವರು) ದೇವಾಲಯಕ್ಕೆ ನೀಡಿದ ದಾನಗಳನ್ನು ದಾಖಲಿಸುತ್ತವೆ. ಹಲವು ಶ್ರೀಕಾಳಹಸ್ತಿಯ ದೇವಾಲಯಕ್ಕೆ

ನೀಡಿದ ದಾನಗಳನ್ನೂ,ಹಲವು ಶಾಸನಗಳು ಅವನ ಒಡೆತನವನ್ನು ಒಪ್ಪಿದ ಅವನ ಅಧಿಕಾರಿಗಳು ಹಲವು ದೇವಾಲಯಗಳಿಗೆ ನೀಡಿದ ದತ್ತಿಗಳನ್ನೂ ದಾಖಲಿಸುತ್ತವೆ. ಕೃಷ್ಣದೇವರಾಯನು ತಿರುಮಲೆಗೆ ಏಳು ಬಾರಿ ಆಗಮಿಸಿದ್ದು, ತನ್ನ ಕೃತಿಯಾದ-ಆಮುಕ್ತ ಮಾಲ್ಯವನ್ನು ಸ್ವಾಮಿಗೆ ಸಮರ್ಪಿಸಿದ್ದಾನೆ.

ಏನೇ ಆದರೂ ಅವನ ತಿರುಮಲೆಯ ಯಾತ್ರೆಗಳು ದೇವರನ್ನು ದರ್ಶಿಸಲೆಂದೇ ಮಾಡಿದ ತೀರ್ಥ ಯಾತ್ರೆಗಳಾಗಿರಲಿಲ್ಲ.ವಿಶೇಷವಾದ ಧಾರ್ಮಿಕ ಅವಧಾರಣೆಯನ್ನು ಹೊಂದಿದ ಕಡೆಯ ಎರಡು ಮೂರು ಯಾತ್ರೆಗಳ ಹೊರತು ಮಿಕ್ಕ ನಾಲ್ಕೂ ಅವನು ಗಜಪತಿ ರಾಜ್ಯದ ಮೇಲೆ ದಂಡೆತ್ತಿ ಹೋಗುವ ಕಾಲದಲ್ಲಿ ನೀಡಿದ ಭೇಟಿಗಳು. ಕ್ರಿ.ಶ.1413 ರ ಫೆಬ್ರವರಿ 10 ರಂದು ಅವನು ತನ್ನ ಇಬ್ಬರು ರಾಣಿಯರೊಡನೆ ತಿರುಮಲೆಗೆ ಬಂದ. ಅಲ್ಲಿಂದ ಮುಂದಕ್ಕೆ ಶ್ರೀಕಾಳಹಸ್ತಿಗೆ ಬಂದು ಅಲ್ಲಿನ ದೇವರಿಗೆ ಆಭರಣಗಳನ್ನು ಅರ್ಪಿಸಿದ.

ಕ್ರಿ.ಶ.1513 ರ ಮೇ ತಿಂಗಳ ಎರಡರಂದು ಮತ್ತೆ ತಿರುಮಲೆಗೆ ಬಂದಿದ್ದ. ತಿರುಮಲೆಯಿಂದ ಹೊರಟ ಅವನು ಕ್ರಿ.ಶ.1513 ರ ಮೇ ತಿಂಗಳ 11 ರಂದು ಶ್ರೀಕಾಳಹಸ್ತಿಯಲ್ಲಿದ್ದ. ಅದೇ ವರ್ಷದ ಜೂನ್ 8 ರಂದು ಮೂರನೆಯ ಬಾರಿಗೆ ವಿಜಯನಗರದಿಂದ ತಿರುಮಲೆ, ಶ್ರೀಕಾಳಹಸ್ತಿಗಳಿಗೆ ಹೊರಟು ರಾಜಧಾನಿಗೆ ಸೆಪ್ಟೆಂಬರ್ 20 ರಂದು ಹಿಂದಿರುಗಿದ.ತಿರುಮಲೆ, ಕಾಳಹಸ್ತಿಗಳ ಈ ವಾಯು ವೇಗದ ಯಾತ್ರೆಗಳು ಕೆಲಕಾಲದಲ್ಲಿಯೇ ಕೊನೆಯಾದವು.ಕೃಷ್ಣದೇವರಾಯನ ಕೊನೆಗಾಲದಲ್ಲಿ ಉತ್ತರಾಧಿಕಾರಿಯ ಸಮಸ್ಯೆ ಅವನ ಕಾಲವನ್ನೂ, ಗಮನವನ್ನೂ ಸೆಳೆದಿರಬೇಕು. ಅವನು ತಾನೇ ಸೆರೆಗೊಳಿಸಿದ್ದ ತನ್ನ ಮಲಸಹೋದರ ಅಚ್ಯುತರಾಯನನ್ನು ಚಂದ್ರಗಿರಿಯ ಸೆರೆಯಿಂದ ಬಿಡುಗಡೆಗೊಳಿಸಿ,ಅವನನ್ನು ತನ್ನ ಉತ್ತರಾಧಿಕಾರಿಯೆಂದು ಘೋಷಿಸಿದ. ಅಚ್ಯುತರಾಯನ ಪಟ್ಟಾಭಿಷೇಕ ಸರಳ ಸುಸೂತ್ರವೇನಾಗಲಿಲ್ಲ.ಕೃಷ್ಣದೇವರಾಯನ ಅಳಿಯ ರಾಮರಾಯನು ಕೃಷ್ಣದೇವರಾಯನ ಚಿಕ್ಕ ಮಗನನ್ನು ಸಾಮ್ರಾಟನೆಂದು ಘೋಷಿಸಿ, ತಾನೇ ಸಿಂಹಾಸನವನ್ನಾಕ್ರಮಿಸಲು ಪ್ರಯತ್ನಿಸಿದ.ಅದರೆ ಅಚ್ಯುತರಾಯನ ಆಪ್ತನೂ, ಸಾಮ್ರಾಜ್ಯದಲ್ಲಿಯೇ ಅತಿಪ್ರಭಾವಶಾಲಿಯೂ ಆಗಿದ್ದ ಸಾಳುವ ನಾಯಕನ ವಿರೋಧದಿಂದಾಗಿ ಈ ಪ್ರಯತ್ನ ನೆರವೇರಲಿಲ್ಲ. ಸಾಳುವ ನಾಯಕನು ರಾಜಧಾನಿಯನ್ನು ಆಕ್ರಮಿಸಿ ಚಂದ್ರಗಿರಿಯಿಂದ ಅಚ್ಯುತರಾಯನು ರಾಜಧಾನಿಗೆ ಬರುವವರೆಗೆ ಅದನ್ನು ರಕ್ಷಿಸಿದ.

ರಾಮರಾಜನ ವಿರೋಧವೇ ಅಚ್ಯುತರಾಯನನ್ನು ಒಂದು ಅಸಾಧಾರಣ ಕಾರ್ಯದಲ್ಲಿ ತೊಡಗಿಸಿರಬೇಕು. ತನ್ನ ಮಲಸಹೋದರನ ಮರಣ ವಾರ್ತೆಯನ್ನು ಕೇಳಿದ ಕೂಡಲೇ ಅಚ್ಯುತರಾಯನು ರಾಜಧಾನಿಗೆ ಪ್ರಯಾಣವಾಗುವ ಬದಲಿಗೆ ತಿರುಮಲೆಗೆ ನಡೆದು ಅಲ್ಲಿ ತನ್ನ ಪಟ್ಟಾಭಿಷೇಕವನ್ನು ನೆರವೇರಿಸಿಕೊಂಡ. ನಂತರ ಶ್ರೀಕಾಳಹಸ್ತಿಗೆ ಹೋಗಿ ಮತ್ತೊಮ್ಮೆ ಕಿರೀಟಧಾರಣ ಮಹೋತ್ಸವವನ್ನು ನಡೆಸಿಕೊಂಡ. ವಿಜಯನಗರದ ಅರಸರಲ್ಲಿ ಅಚ್ಯುತರಾಯನೇ ರಾಜಧಾನಿಯ ಹೊರಗೆ ಪಟ್ಟಾಭಿಷಿಕ್ತನಾದ ಮೊದಲ ರಾಜ ಎಂಬುದನ್ನು ಗಮನಿಸಬೇಕು. ಜೊತೆಗೇ ಒಂದಕ್ಕಿಂತ ಹೆಚ್ಚು ಬಾರಿ ಪಟ್ಟಾಭಿಷಿಕ್ತನಾದ ಮೊದಲ ರಾಜನೂ ಇವನೇ. ರಾಜಧಾನಿಯಲ್ಲಿ ತನ್ನ ವಿರೋಧಿಗಳು ಪ್ರಬಲರಾಗಬಹುದೆಂಬ ಅನುಮಾನದಿಂದ ಸಾಮ್ರಾಜ್ಯದ ಮೇಲೆ ತನ್ನ ಹಕ್ಕುದಾರಿಯನ್ನು ಬಲಗೊಳಿಸಲೆಂದು ಉದ್ದೇಶಪೂರ್ವಕವಾಗಿ ಎರಡು ಪುಣ್ಯಕ್ಷೇತ್ರಗಳಲ್ಲಿ ಅವನು ಪಟ್ಟಾಭಿಷಿಕ್ತನಾಗಿರಬೇಕು. ಸಾಮ್ರಾಜ್ಯದ ನಿರ್ವಹಣೆಯಲ್ಲಿ ರಾಮರಾಜರೊಡನೆ ಒಂದು ರೀತಿಯ ರಾಜಿಯನ್ನೂ ಏರ್ಪಡಿಸಿಕೊಂಡ. ನಂತರ ರಾಜಧಾನಿಗೆ ಬಂದು ಮೂರನೆಯ ಬಾರಿ ಪಟ್ಟಾಭಿಷಿಕ್ತನಾದ ಮೇಲೆ ಅವನ ಅಧಿಕಾರವನ್ನು ಎಲ್ಲರೂ ಗುರುತಿಸುವಂತಾಯಿತು. ಅಚ್ಯುತರಾಯನು ರಾಮರಾಜನೊಡನೆ ರಾಜಿಯಾದದ್ದು ಸಾಳುವ ನಾಯಕನಿಗೆ ಸರಿಬರದೆ ಅವನು ದಂಗೆಯೆದ್ದ. ಈ ದಂಗೆಯನ್ನು ಅಡಗಿಸಲು ಒಂದು ದೊಡ್ಡ ಸೈನ್ಯದೊಡನೆ ಅಚ್ಯುತರಾಯನು ದಕ್ಷಿಣಕ್ಕೆ ಬಂದ. ಚಂದ್ರಗಿರಿಯಲ್ಲಿ ಸೈನ್ಯವನ್ನು ಬಿಟ್ಟು ತಿರುಮಲೆ ಕಾಳಹಸ್ತಿಗಳಿಗೆ ಹೋಗಿ ಅಲ್ಲಿನ ದೇವರುಗಳನ್ನು ಅರ್ಚಿಸಿ, ಬೆಲೆಬಾಳುವ ಆಭರಣಗಳನ್ನು ಅರ್ಪಿಸಿದ. ದಂಗೆಯನ್ನು ಅಡಗಿಸಿ, ಹಿಂದಿರುಗುವಾಗಲೂ ಈ ಆಲಯಗಳನ್ನು ದರ್ಶಿಸಿದ. ಅವನ ಈ ತಿರುಗು ಪ್ರಯಾಣದಲ್ಲಿ ಅವನೊಡನೆ ತಿರುವೆಂಗಡ ನಾಯಕನ ಆಲಯಕ್ಕೆ ಅವನ ಮಹಾರಾಣಿ ವರದಾದೇವಿಯೂ, ಕುಮಾರ ವೆಂಕಟಾದ್ರಿಯೂ ಇದ್ದರು. ಅವನು ಮಹಾದಾನಗಳನ್ನು-ಕಪಿಲ ಪಶುದಾನ-ಹಾಗೂ -ಸ್ವರ್ಣ ವರ್ಷಗಳನ್ನು-ಮಾಡಿ ಮುತ್ತು,ರತ್ನ,ವಜ್ರ ವೈಢೂರ್ಯಗಳಿಂದ ಕೂಡಿದ ಕಾಪು (ಕವಚ) ವನ್ನೂ ನಾಲ್ಕು ಚಿನ್ನದ

ಬಳೆಗಳನ್ನೂ,ಶಿರೋಭೂಷಣವಾದ ವಜ್ರಗಳ ಜೋಡಿ ಉಚ್ಚಿಪ್ಪುಗಳನ್ನೂ,ವಜ್ರಕಿರೀಟದ ಮೌಳಿಮಣಿಯನ್ನೂ ವೆಂಕಟೇಶ್ವರಸ್ವಾಮಿಗೆ ಅರ್ಪಿಸಿದ. ಅವನ ಸಮರ್ಪಣೆ ಯಲ್ಲಿ -ಹವಳಗಳ ಮುತ್ತುಗಳ ಹಾರಗಳೂ ಇದ್ದವು.

ಅಚ್ಯುತರಾಯನು ರಾಜಧಾನಿಯಲ್ಲಿ ಬಹುಕಾಲ ವಿರಲಾಗಲಿಲ್ಲ. ಅನಂತಪುರದ ಬಳಿಯ ಗುತ್ತಿಯು ದಂಗೆ ಕೋರರ ಕೈವಶವಾಗಿ ಅವರ ವಿರುದ್ಧ ಸೈನ್ಯ ನಡೆಸ ಬೇಕಾಯಿತು. ಸಮರ ಸಂಚಾರದ ಈ ಅವಕಾಶವನ್ನು ಅವನು ಮತ್ತೆ ತಿರುಮಲೆಯ ಯಾತ್ರೆಗಾಗಿ ಬಳಸಿ ಕೊಂಡು, ವರ್ಷದಲ್ಲಿ ಐದು ದಿನಗಳ ಕಾಲ ತಿರುವೆಂಕಟ ಮುಡೈಯಾನ್ ಹಾಗೂ ಅಲರ್‌ಮೇಲ್‌ಮಂಗೈಯರಿಗೆ, ಲಕ್ಷ್ಮೀದೇವಿ ಮಹೋತ್ಸವವೆಂಬ ಉತ್ಸವವನ್ನು ಪುನ ರ್ವಸು ತಿರುನಾಳ್ ಎಂಬ ಉತ್ಸವವನ್ನು ಪುನರ್ವಸು ನಕ್ಷತ್ರದ ದಿನಗಳ (ವರ್ಷದಲ್ಲಿ ಹದಿಮೂರು ದಿನ) ರಘು ನಾಥ (ಶ್ರೀರಾಮ) ನಾಚ್ಚಿಯಾರ್ (ಸೀತೆ) ಹಾಗೂ ಇಳಯಪೆರುಮಾಳ್ (ಲಕ್ಷ್ಮಣ)ರಿಗೆ ನಡೆಸಬೇಕೆಂದೂ, ಎರಡು ಹೊಸ ಉತ್ಸವಗಳನ್ನು ಸ್ಥಾಪಿಸಿದ. ವಿಜಯ ನಗರಕ್ಕೆ ಶಕ ವರ್ಷ 1458 (ಕ್ರಿ.ಶ.1536) ರಲ್ಲಿ ಅವನು ಹಿಂದಿರುಗಿರಬೇಕು.

ಕ್ರಿ.ಶ.1542 ರಲ್ಲಿ ಅಚ್ಯುತರಾಯನ ಆಳ್ವಿಕೆ ಕೊನೆ ಯಾಗಿ,ಅವನ ಮಗ ವೆಂಕಟನೂ,ಅವನ ಭಾವಮೈದುನ ಸಲಕರಾಜು ತಿರುಮಲನೂ ಸ್ವಲ್ಪಕಾಲ ಸಿಂಹಾಸನಕ್ಕೆ ಬಂದಿರಬೇಕು.ಅಚ್ಯುತರಾಯನ ಮರಣವು ವೆಂಕಟ ನನ್ನು ಬೆಂಬಲಿಸಿದ ಸಲಕರಾಜು ತಿರುಮಲನಿಗೂ, ಸದಾಶಿವರಾಯನನ್ನು (ಅಚ್ಯುತರಾಯನ ತಮ್ಮನಾದ ನಿಧನ ಹೊಂದ ರಂಗರಾಯನ ಮಗ, ಬೆಂಬಲಿಸಿದ (ಅಳಿಯ) ರಾಮರಾಜನಿಗೂ ಪುನಃ ಘರ್ಷಣೆಯಲ್ಲಿ ತೊಡ ಗಲು ಬಾವುಟ ಬೀಸಿದಂತಾಯಿತು. ಆದರೆ ತುಮುಲವು ಸದಾ ಶಿವರಾಯನ ಗೆಲುವಿನಲ್ಲಿ ಕೊನೆಗೊಂಡಿತು. ಕ್ರಿ.ಶ.1543ರಲ್ಲಿ ಸದಾಶಿವರಾಯನು ಸಿಂಹಾಸನ ವನ್ನೇರಿ,ರಾಮರಾಯನು ರಾಜಪ್ರತಿನಿಧಿಯಾದ.

ರಾಮರಾಜನ ಶತ್ರುಗಳು ತಮ್ಮ ವಿರೋಧಿಯು ಶಾಶ್ವತ ವಾಗಿ ಅಧಿಕಾರ ಪಡೆಯುವದನ್ನು ಸಹಿಸಲಾಗದೆ ಅವನ ಅಧಿಕಾರವನ್ನು ಕೀಳ್ಗಳೆಯಲು ಪ್ರಯತ್ನಿಸಿದರು.ಅವರು ಗಳು ಚಂದ್ರಗಿರಿ ಕೋಟೆ ಹಾಗೂ ಅವರ ಆ ಪ್ರಾಚೀನ ಪ್ರಾಂತ್ಯಗಳನ್ನು ಆಕ್ರಮಿಸಿದರು.ಇನ್ನೂ ದಕ್ಷಿಣದ ಸಾಮಂತರು ಕಪ್ಪಕಾಣಿಕೆಗಳನ್ನು ನೀಡದೆ ಹೋದರು. ಈ ದಂಗೆಯನ್ನು ಸೈನಿಕ ಕಾರ್ಯಾಚರಣೆಯಿಂದ ಅಡಗಿಸಲಾಯಿತು. ರಾಮರಾಜನ ನಿರಂತರ ಬೆಳೆಯುತ್ತಿದ್ದ ಪ್ರಭಾವ ಹಾಗೂ ತಮ್ಮೊಳಗಿನ ಅಂತರಂಗ ವ್ಯವಹಾರದಲ್ಲಿ ಅವನು ಕೈಹಾಕುವುದನ್ನು ದಕ್ಷಿಣದ ಬಹಮನಿ ಸುಲ್ತಾನರು ಸಹಿಸಲಾರದಾದರು. ಅವನ ಅಧಿಕಾರ ಅತ್ಯುನ್ನತ ವಾದಾಗ ಈ ಸುಲ್ತಾನರು ಒಂದಾಗಿ ಕ್ರಿ.ಶ.1565 ರಲ್ಲಿ ರಕ್ಕಸತಂಗಡಿ ಯುದ್ಧ ಮಾಡಿ ರಾಮರಾಜನನ್ನು ಮುಗಿಸಿ ದರು.

ಅಳಿಯ ರಾಮರಾಜನ ಮರಣಾನಂತರ ಅವನ ಸೋದರ ತಿರುಮಲನು ಸಾಮ್ರಾಟ ಸದಾಶಿವನ ಏಕ ಮಾತ್ರ ರಾಜಪ್ರತಿನಿಧಿಯೂ ರಾಜ್ಯ ರಕ್ಷಕನೂ ಆದ. ತನ್ನ ಅಪೇಕ್ಷೆಯಂತೆ ರಾಜ ಮುದ್ರೆಯನ್ನೂ ಲಾಂಛನ ಗಳನ್ನೂ ಹೊಂದುವಲ್ಲಿ ಅವನಿಗೆ ರಾಜಧಾನಿಯ ಅಂದಿನ ವಾತಾ ವರಣ ಅನುಕೂಲವಾಗಿಲ್ಲವೆನ್ನಿಸಿತು. ಹೀಗಾಗಿ ವಿಜಯ ನಗರವನ್ನು ತ್ಯಜಿಸಿ ಅನಂತಪುರದ ಪೆನುಗೊಂಡೆಗೆ ಆಗಮಿಸಿದ.ನಂತರ ತನ್ನ ಸಾಮ್ರಾಜ್ಯವನ್ನು ಅದರ ಮೂರು ಪ್ರಧಾನ ಭಾಷೆಗಳಿಗನುಣವಾಗಿ ಮೂರು ಭಾಗ ಮಾಡಿ ಒಂದೊಂದನ್ನೂ ತನ್ನ ಒಬ್ಬೊಬ್ಬ ಮಗನಿಗೆ ನೀಡಿದ. ಇದರಿಂದಾಗಿ ಅವನ ಕಿರಿಯಮಗ ವೆಂಕಟನು ತಮಿಳು ಭಾಷೆಯ ರಾಜ್ಯದ ರಾಜ್ಯಪಾಲನಾಗಿ ಚಂದ್ರಗಿರಿ ಕೋಟೆಯಿಂದ ಆಡಳಿತ ನಡೆಸಿದ. ಕ್ರಿ.ಶ. 1570 ರಲ್ಲಿ ಸದಾಶಿವನನ್ನು ಪದಚ್ಯುತಗೊಳಿಸಿ ತಿರುಮಲನು ತಾನೇ ಸಾಮ್ರಾಟನಾದ. ಆದರೆ ಕೆಲ ತಿಂಗಳಲ್ಲೆ ಮೃತನಾದ. ನಂತರ ಅವನ ಮಗ ಒಂದನೇ ಶ್ರೀರಂಗನು ರಾಜನಾದ. ಇವನ ಕಾಲದಲ್ಲಿ ಕ್ರಿ.ಶ.1576 ರಲ್ಲಿ ಬಿಜಾಪುರದ ಸುಲ್ತಾನ ಅಲಿ ಅದಿಲ್‌ಶಹನ ಧಾಳಿಯನ್ನೆದುರಿಸಬೇಕಾಯಿತು. ಸುಲ್ತಾನನ ಧಾಳಿಯಾದಾಗ ರಾಜನು ಸಮಸ್ತ ಸಂಪತ್ತಿ ನೊಡನೆ ಚಂದ್ರಗಿರಿ ಕೋಟೆಗೆ ಹಿಂದಿರುಗಿದ. ರಾಯ ನೊಡನೆ ಸಂಧಿಯನ್ನು ಮಾಡಿಕೊಳ್ಳಲು ಸುಲ್ತಾನನು ಘಜಲ್‌ಖಾನನ್ನು ಚಂದ್ರಗಿರಿಯ ಕೋಟೆಗೆ ಕಳುಹಿಸಿದ. ಘಜಲ್ ಖಾನನು ಶ್ರೀರಂಗರಾಯನನ್ನು ತನ್ನೊಡನೆ ಅಲಿ ಅದಿಲ್‌ಷಹನ ಬಳಿ ಬಂದು ಸಂಧಿಯನ್ನು ಮಾಡಿಕೊಳ್ಳಲು ಒಡಂಬಡಿಸಿದ. ಶ್ರೀರಂಗರಾಯನು ಕ್ರಿ.ಶ.1584 ರ ವರೆಗೆ ಆಳ್ವಿಕೆ ನಡೆಸಿ ಅಪುತ್ರನಾಗಿ ಮರಣಹೊಂದಿದ.

(-ಮುಂದುವರೆಯುತ್ತದೆ.)

# ತಿರುಮಲೆ ತಿರುಪತಿ ದೇವಸ್ಥಾನಗಳು

## ಜನವರಿ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |

## ಫೆಬ್ರವರಿ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | | | | | |

## ಮಾರ್ಚ್ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |



## ಜನವರಿ 2022

01 ಆಂಗ್ಲ ಹೊಸ ವರ್ಷಾರಂಭ
07 -13 ಶ್ರೀ ಆಂಡಾಳ್ ನೀರಾಟೋತ್ಸವ
13 ವೈಕುಂಠ ಏಕಾದಶಿ
14 ಭೋಗಿ, ಭೋಗಿತೇರು
15 ಮಕರ ಸಂಕ್ರಾಂತಿ
16 ಕನುಮ, ಶ್ರೀ ಗೋದಾದೇವಿ ಪರಿಣಯೋತ್ಸವ.
17 ಶ್ರೀ ರಾಮಕೃಷ್ಣ ತೀರ್ಥ ಮುಕ್ಕೋಟಿ
18 ತಿರುಮಲೆ ಸ್ವಾಮಿಯವರ ಸನ್ನಿಧಿಯಲ್ಲಿ ಪ್ರಣಯಕಲಹ ಮಹೋತ್ಸವ
26 ಗಣತಂತ್ರ ದಿನೋತ್ಸವ

## ಫೆಬ್ರವರಿ 2022

01 ಶ್ರೀಪುರಂದರದಾಸರ ಆರಾಧನೆ.
02-10 ದೇವುನಿ ಕಡಪ ಶ್ರೀಲಕ್ಷ್ಮೀವೇಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
05 ವಸಂತ ಪಂಚಮಿ
08 ರಥಸಪ್ತಮಿ, ಭೀಷ್ಮಾಷ್ಟಮಿ
12 ಭೀಷ್ಮ ಏಕಾದಶಿ
16 ಶ್ರೀ ಕುಮಾರಧಾರ ತೀರ್ಥ ಮುಕ್ಕೋಟಿ
20-28 ಶ್ರೀನಿವಾಸಮಂಗಾಪುರಂ ಶ್ರೀ ಕಲ್ಯಾಣ ವೇಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
22 ರಿಂದ ಮಾರ್ಚ್- 03 ರ ವರೆಗೆ ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

## ಮಾರ್ಚ್ 2022

01 ಮಹಾಶಿವರಾತ್ರಿ
10-18 ತರಿಗೊಂಡ ಶ್ರೀಲಕ್ಷ್ಮಿನರಸಿಂಹ ಸ್ವಾಮಿಯವರ ಬ್ರಹ್ಮೋತ್ಸವಗಳು
17 ಹೋಳಿ ಹಬ್ಬ
18 ಶ್ರೀಲಕ್ಷ್ಮೀ ಜಯಂತಿ, ತುಂಬುರು ತೀರ್ಥ ಮುಕ್ಕೋಟಿ
29 ಅನ್ನಮಾಚಾರ್ಯ ವರ್ಧಂತಿ
30 ರಿಂದ ಏಪ್ರಿಲ್ 07 ರ ವರೆಗೆ ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

# ತಿರುಮಲೆ ತಿರುಪತಿ ದೇವಸ್ಥಾನಗಳು



## ಏಪ್ರಿಲ್ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## ಮೇ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ಜೂನ್ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

## ಏಪ್ರಿಲ್ 2022

02 ಶ್ರೀ ಶುಭಕೃತ್ ನಾಮಸಂವತ್ಸರ.....ಯುಗಾದಿ
03 ಮತ್ಸ್ಯ ಜಯಂತಿ,
06-14 ಶ್ರೀ ಪಟ್ಟಾಭೀರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
10-18 ಒಂಟಿಮಿಟ್ಟ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
10 ಶ್ರೀರಾಮನವಮಿ
14 ತಮಿಳು ಹೊಸ ವರ್ಷಾರಂಭ,ಅಂಬೇಡ್ಕರ್ ಜಯಂತಿ
14-16 ತಿರುಮಲೆ ಸ್ವಾಮಿಯವರ ವಸಂತೋತ್ಸವ
16- 24 ನಾಗುಲಾಪುರಂ ಶ್ರೀ ವೇದನಾರಾಯಣ ಸ್ವಾಮಿಯವರ ಬ್ರಹ್ಮೋತ್ಸವಗಳು

## ಮೇ 2022

03 ಅಕ್ಷಯ ತೃತೀಯ, ಶ್ರೀ ಪರಶುರಾಮ ಜಯಂತಿ
05 ಶ್ರೀ ರಾಮಾನುಜ ಜಯಂತಿ
06 ಶ್ರೀ ಶಂಕರಾಚಾರ್ಯ ಜಯಂತಿ
10-12 ತಿರುಮಲೆ ಶ್ರೀ ಪದ್ಮಾವತಿ ಶ್ರೀನಿವಾಸ ಪರಿಣಯೋತ್ಸವ
13- 21 ಹೃಷೀಕೇಶ್/ ನಾರಾಯಣವನಂ ಶ್ರೀ ಕಲ್ಯಾಣ ವೇಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
14-17 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ವಸಂತೋತ್ಸವಗಳು
14 ಶ್ರೀ ನೃಸಿಂಹ ಜಯಂತಿ
15 ಶ್ರೀ ಕೂರ್ಮ ಜಯಂತಿ
15 ಮಾತೃಶ್ರೀ ತರಿಗೊಂಡ ವೆಂಗಮಾಂಬ ಜಯಂತಿ
16 ಶ್ರೀ ಅನ್ನಮಾಚಾರ್ಯ ಜಯಂತಿ
17 ತಿರುಪತಿ ಗಂಗಜಾತ್ರೆ
23-31 ಕಾರ್ವೇಟಿನಗರಂ ಶ್ರೀ ವೇಣುಗೋಪಾಲ ಸ್ವಾಮಿಯವರ ಬ್ರಹ್ಮೋತ್ಸವಗಳು
25 ಶ್ರೀ ಹನುಮಜಯಂತಿ

## ಜೂನ್ 2022

05-13 ತಿರುಪತಿ ಶ್ರೀಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು
10-18 ಅಪ್ಪಲಾಯಗುಂಟ ಶ್ರೀ ಪ್ರಸನ್ನವೇಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
10-14 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳು
12-14 ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ
20-22 ತಿರುಚಾನೂರು ಶ್ರೀ ಸುಂದರಾಜ ಸ್ವಾಮಿಯವರ ಅವತಾರೋತ್ಸವಗಳು

# ತಿರುಮಲೆ ತಿರುಪತಿ ದೇವಸ್ಥಾನಗಳು

## ಜುಲೈ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## ಆಗಸ್ಟ್ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ಸೆಪ್ಟೆಂಬರ್ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |



## ಜುಲೈ 2022

03-05 ಶ್ರೀನಿವಾಸಮಂಗಾಪುರಂ ಶ್ರೀ ಕಲ್ಯಾಣವೇಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರ ವೈಭವಂ
09-11 ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕ
09-12 ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು
13 ಗುರುಪೂರ್ಣಿಮ, ವ್ಯಾಸಜಯಂತಿ
17 ತಿರುಮಲೆ ಸ್ವಾಮಿಯವರ ಅಣಿವರ ಆಸ್ಥಾನಂ
29 ಶ್ರೀ ಚಕ್ರತ್ತಾಳ್ವಾರ್ ವರ್ಷತಿರುನಕ್ಷತ್ರ

## ಆಗಸ್ಟ್ 2022

01 ನಾಗಚತುರ್ಥಿ, 02 ಗರುಡ ಪಂಚಮಿ
05 ಶ್ರೀ ವರಲಕ್ಷ್ಮೀ ವ್ರತ
06 ಮಾತೃಶ್ರೀ ತರಿಗೊಂಡ ವೆಂಗಮಾಂಬ ವರ್ಧಂತಿ
07-10 ತಿರುಮಲೆ ಸ್ವಾಮಿಯವರ ಪವಿತ್ರೋತ್ಸವಗಳು
11 ಶ್ರೀ ವಿಖನಸ ಮಹಾಮುನಿ ಜಯಂತಿ
12 ಹಯಗ್ರೀವ ಜಯಂತಿ
13 ಗಾಯತ್ರಿ ಜಪಂ
15 ಸ್ವಾತಂತ್ರ್ಯ ದಿನಾಚರಣೆ
19 ಶ್ರೀ ಕೃಷ್ಣಜನ್ಮಾಷ್ಟಮಿ, ಗೋಕುಲಾಷ್ಟಮಿ
29 ಶ್ರೀ ಚಕ್ರತ್ತಾಳ್ವಾರರ ವರ್ಷತಿರುನಕ್ಷತ್ರ ಶ್ರೀ ಬಲರಾಮ ಜಯಂತಿ
30 ಶ್ರೀ ವರಾಹ ಜಯಂತಿ, 31 ಗಣೇಶ ಚತುರ್ಥಿ

## ಸೆಪ್ಟೆಂಬರ್ 2022

01 ಋಷಿ ಪಂಚಮಿ
07 ಶ್ರೀ ವಾಮನ ಜಯಂತಿ
07-10 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪವಿತ್ರೋತ್ಸವಗಳು
09 ಅನಂತಪದ್ಮನಾಭ ವ್ರತ
26 ರಿಂದ ಅಕ್ಟೋಬರ್ 05 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ನವರಾತ್ರಿ ಬ್ರಹ್ಮೋತ್ಸವಗಳು
27 ರಿಂದ ಅಕ್ಟೋಬರ್ 05 ರ ವರೆಗೆ ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

# ತಿರುಮಲೆ ತಿರುಪತಿ ದೇವಸ್ಥಾನಗಳು



## ಅಕ್ಟೋಬರ್ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |

## ನವೆಂಬರ್ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

## ಡಿಸೆಂಬರ್ 2022

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

## ಅಕ್ಟೋಬರ್ 2022

01 ತಿರುಮಲೆ ಸ್ವಾಮಿಯವರ ಗರುಡ ಸೇವೆ
02 ಸರಸ್ವತಿ ಪೂಜೆ, ಗಾಂಧಿ ಜಯಂತಿ
03 ದುರ್ಗಾಷ್ಟಮಿ
04 ಮಹಾನವಮಿ
05 ವಿಜಯದಶಮಿ
24 ನರಕ ಚತುರ್ದಶಿ, ದೀಪಾವಳಿ ಅಮಾವಾಸ್ಯೆ
25 ಶ್ರೀ ಕೇದಾರಗೌರಿ ವ್ರತ
29 ನಾಗರ ಪಂಚಮಿ

## ನವೆಂಬರ್ 2022

01 ತಿರುಮಲೆ ಸ್ವಾಮಿಯವರ ಪುಷ್ಪಯಾಗ
05 ಕೈಶಿಕದ್ವಾದಶಿ
14 ಮಕ್ಕಳ ದಿನಾಚರಣೆ
20 -28 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು
21 ಶ್ರೀ ಧನ್ವಂತರಿ ಜಯಂತಿ
24 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಗಜವಾಹನ ಸೇವೆ
28 ಪಂಚಮಿ ತೀರ್ಥ
29 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ

## ಡಿಸೆಂಬರ್ 2022

04 ಶ್ರೀ ಗೀತಾಜಯಂತಿ
05 ಚಕ್ರತೀರ್ಥ ಮುಕ್ಕೋಟಿ
06 ತಿರುಪತಿ ಶ್ರೀ ಕಪಿಲೇಶ್ವರಸ್ವಾಮಿ ಸನ್ನಿಧಿಯಲ್ಲಿ ಕೃತ್ತಿಕಾ ದೀಪೋತ್ಸವ
07 ಶ್ರೀ ದತ್ತ ಜಯಂತಿ
17 ಧರ್ನುಮಾಸ ಆರಂಭ
29 ಹನುಮದ್ ವ್ರತ

# ಸಂಭ್ರಮದ ಉಡುಪಿ ಪರ್ಯಾಯೋತ್ಸವ

## ಕಡೆಗೋಲು ಕೃಷ್ಣನ ಪೂಜಾ ಕೈಂಕರ್ಯ ಈ ಬಾರಿ ಕೃಷ್ಣಾಪುರ ಮಠಕ್ಕೆ



ಅನಂತೇಶ್ವರ ಮತ್ತು ಚಂದ್ರಮೌಳೇಶ್ವರ ಎಂಬೆರಡು ಪ್ರಾಚೀನ ಶಿವ ದೇವಾಲಯಗಳ ದಿವ್ಯ ಸಾನಿಧ್ಯದಿಂದ ಭಕ್ತಿಭಾವದ ಕೇಂದ್ರವಾಗಿ ಬೆಳಗುತ್ತಿದ್ದ ಉಡುಪಿ ಎಂಬ ಪುಟ್ಟ ಊರು 13 ನೇ ಶತಮಾನದಲ್ಲಿ ದ್ವೈತ ಮತ ಸ್ಥಾಪಕ ಶ್ರೀಮದ್ವಾಚಾರ್ಯರ ದಿವ್ಯಾನುಸಂಧಾನದಿಂದ ಇದೀಗ ವಿಶ್ವಮಾನ್ಯವಾಗಿ, ವಿಶ್ವವಂದ್ಯವಾಗಿ ಮೆರೆಯುತ್ತಿದೆ. ಉಡುಪಿಯಿಂದ ಹತ್ತು ಕಿ.ಮೀ. ದೂರದ ಪಾಜಕ ಎಂಬ ಪುಟ್ಟ ಹಳ್ಳಿಯಲ್ಲಿ ಕ್ರಿ.ಶ. 1238 ರಲ್ಲಿ ಮಧ್ಯಗೇಹ ಭಟ್ಟ ದಂಪತಿಗಳಿಗೆ ಹುಟ್ಟಿದ ವಾಸುದೇವ ಎಂಬ ಪುಟ್ಟ ಬಾಲಕ ಸಣ್ಣ ವಯಸ್ಸಿನಲ್ಲೇ ಸನ್ಯಾಸ ಸ್ವೀಕರಿಸಿ ಆಚಾರ್ಯ ಮದ್ವರಾಗಿ ಬೆಳೆದವರು. ಅನಂತೇಶ್ವರ ದೇವಸ್ಥಾನದಲ್ಲಿ ಸಂಸ್ಕೃತ,ವೇದ,ಉಪನಿಷತ್ತು ಪಾಠ, ಪ್ರವಚನ ನಡೆಸುತ್ತಿದ್ದರು. ಮಲ್ಪೆಯ ಕಡಲಲ್ಲಿ ಕರಿ ಬಂಡೆಗೆ ಬಡಿದು ನುಚ್ಚು ನೂರಾಗುವ ಅಪಾಯದಲ್ಲಿದ್ದ ನಾವೆಯೊಂದನ್ನು ಆಚಾರ್ಯಮದ್ವರು ತಮ್ಮ ತಪೋಬಲದಿಂದ ಕಾವಿ ವಸ್ತ್ರಬೀಸಿ ರಕ್ಷಿಸಿದರಂತೆ. ಇದಕ್ಕೆ ಪ್ರತಿಯಾಗಿ ನಾವಿಕ ಕೊಟ್ಟು ಎರಡು ಗೋಪಿ ಚಂದನದ ಹೆಂಟೆಗಳಲ್ಲಿ ಇದ್ದದ್ದು ಒಂದು ಬಲರಾಮ, ಇನ್ನೊಂದು ಕುಡುಗೋಲು ಕೃಷ್ಣನ ಮೂರ್ತಿ. ಬಲರಾಮನನ್ನು ವಡಭಾಂಡೇಶ್ವರದಲ್ಲಿ ಪ್ರತಿಷ್ಠಾಪಿಸಿದ ಮದ್ವರು, ಸುಂದರ ಪದಗಳ ದ್ವಾದಶ ಸ್ತೋತ್ರ ಪಠಿಸುತ್ತಾ ಕೌಪೀನಧಾರಿ ಕಡಗೋಲು ಶ್ರೀಕೃಷ್ಣನನ್ನು ಕರೆ ತಂದದ್ದು ಉಡುಪಿಯ ರಥಬೀದಿಗೆ, ಅಲ್ಲೆ ಮಠದಲ್ಲಿ ಸುಂದರ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಅವನ ಪೂಜೆಗಾಗಿ ಎಂಟು ಮಂದಿ ಬಾಲ ಸನ್ಯಾಸಿಗಳನ್ನು ನೇಮಕ ಮಾಡುವಲ್ಲಿಗೆ ಉಡುಪಿ ಶ್ರೀ ಕೃಷ್ಣ ಚರಿತೆಯ ಮಹಾಧ್ಯಾಯದ ಆರಂಭ. ಶ್ರೀಕೃಷ್ಣನ ಪ್ರತಿಷ್ಠೆ ಎನ್ನುವುದು ಕೇವಲ ವಿಗ್ರಹದ ಸ್ಥಾಪನೆಯಾಗದೆ ಅಂತರಾಳದಿಂದ ಹೊರಹೊಮ್ಮಿದ್ದ ಭಕ್ತಿಯ ಮಹಾಸಂಕೇತ. ಕೃಷ್ಣನ ವಿದ್ಯೋಪಾಸನೆ ಮತ್ತು ಅತ್ಯಪೂರ್ವ ಅಧ್ಯಯನದಿಂದ ಮದ್ವರ ಮೂಲಕ ಹೊರಹೊಮ್ಮಿದ್ದು ಜಾಗತಿಕ ಧಾರ್ಮಿಕವಾದದಲ್ಲಿ ಮಹಾ ಕ್ರಾಂತಿಯನ್ನೇ ಮಾಡಿದ ಮದ್ವರ ದ್ವೈತ ಸಿದ್ಧಾಂತ.

ಅಷ್ಟ ಬಾಲ ಸನ್ಯಾಸಿಗಳ ನಡುವೆ ಭಕ್ತಿಯ ಪೂಜೆಗಾಗಿ ಮಧ್ವಾಚಾರ್ಯರು ರೂಪಿಸಿದ ಸೂತ್ರ ಎರಡು ತಿಂಗಳ ಪೂಜಾಧಿಕಾರದ ಪರ್ಯಾಯ. 16 ನೇ ಶತಮಾನದಲ್ಲಿ ಕ್ರಾಂತಿಕಾರಿ ಶ್ರೀವಾದಿರಾಜ ತೀರ್ಥ ಶ್ರೀಪಾದರು ಎರಡು ವರ್ಷಗಳ ಪರ್ಯಾಯ ಚಕ್ರಕ್ಕೆ ಶ್ರೀಕಾರ ಹಾಡಿ ಮೊದಲ ದ್ವೈವಾರ್ಷಿಕ ಪರ್ಯಾಯ ಪೀಠಾಧಿಪತಿಯಾದದ್ದು ಮತ್ತೊಂದು ಮೈಲುಗಲ್ಲು (1522). ಕ್ರಮವಾಗಿ ಫಲಿಮಾರು ಅದಮಾರು, ಕೃಷ್ಣಾಪುರ, ಪುತ್ತಿಗೆ ಶೀರೂರು, ಸೋದೆ, ಕಾಣಿಯೂರು, ಪೇಜಾವರ ಮಠಗಳಿಗೆ ಪೂಜಾಧಿಕಾರ ಹಸ್ತಾಂತರವಾಗುತ್ತದೆ.

## ಪರ್ಯಾಯ ಎಂದರೇನು?

ಉಡುಪಿ ಶ್ರೀ ಕೃಷ್ಣನ ಪೂಜೆಗಾಗಿ ಮಾಡಿಕೊಂಡ ಶತಮಾನಗಳ ಇತಿಹಾಸವಿರುವ ಅಪೂರ್ವ ವ್ಯವಸ್ಥೆಯ ಅಧಿಕಾರ ಹಸ್ತಾಂತರ ಪ್ರಕ್ರಿಯೆಯೇ ಪರ್ಯಾಯ. ಮಧ್ವಾಚಾರ್ಯರ ಕಾಲದಲ್ಲಿ ಅಷ್ಟಮಠಗಳ ನಡುವೆ ಎರಡು ತಿಂಗಳಿಗೊಮ್ಮೆ ಪೂಜಾಧಿಕಾರ ಹಸ್ತಾಂತರವಾಗುತ್ತಿದ್ದರೆ ಶ್ರೀವಾದಿರಾಜ ತೀರ್ಥರು ಅದನ್ನು ಎರಡು ವರ್ಷಕ್ಕೆ ವಿಸ್ತರಿಸಿದರು.

ಇದು ಆರಂಭವಾಗುವುದು ಮಕರ ಸಂಕ್ರಾಂತಿಯ ಮೂರು ದಿನ ಬಿಟ್ಟು ಸಾಮಾನ್ಯವಾಗಿ ಜ.14 ರಂದು ಸಂಕ್ರಾಂತಿ ಜ.15 ರಂದು ಚೂರ್ಣೋತ್ಸವ, ಒಂದು ದಿನದ ಬಳಿಕ ಪರ್ಯಾಯ ಬಿಟ್ಟುಕೊಡುವ ಮಠದ ಕೊನೆಯ ಮಹಾ ಪೂಜೆ, ಅನ್ನ ಸಂತರ್ಪಣೆ ನಡೆದು ಜ.18 ರ ಮುಂಜಾನೆ ಪೂಜೆಯ ಅಧಿಕಾ ರವನ್ನು ಅಕ್ಷಯ ಪಾತ್ರೆ, ಸಟ್ಟುಗ, ಗರ್ಭಗುಡಿಯ ಕೀಲಿಕೈ ನೀಡಿ ಸರ್ವಜ್ಞ ಪೀಠದಲ್ಲಿ ಕುಳ್ಳಿರಿಸಿ ಹಸ್ತಾಂತರಿಸಲಾಗುತ್ತದೆ.

ಒಂದು ಮಠದ ಸರದಿ ಬಳಿಕ ಇನ್ನೊಂದು ಮಠಕ್ಕೆ ಅಧಿಕಾರವನ್ನು ಬಿಟ್ಟುಕೊಡುವುದೇ ಪರ್ಯಾಯ ಮಹೋತ್ಸವ. ಒಂದು ಮಠದ ಶ್ರೀಗಳು ಪೂಜಾಧಿಕಾರ ವಹಿಸಿಕೊಂಡು ಸುಮಾರು ಒಂದು ವರ್ಷದಲ್ಲಿ ಇನ್ನೊಂದು ಮಠದ ಪರ್ಯಾಯಕ್ಕೆ ಸಿದ್ಧತೆ ಶುರುವಾಗುತ್ತದೆ.

## ಪರ್ಯಾಯ ಯತಿಗಳ ಜವಾಬ್ದಾರಿ

- ನಿತ್ಯ ನಿರ್ಮಾಲ್ಯ ವಿಸರ್ಜನೆಯಿಂದ ಏಕಾಂತ ಶಯನೋತ್ಸವ ತನಕ 14 ಪೂಜೆ ಸಮರ್ಪಣೆ.
- ಪರ್ಯಾಯ ಕಾಲದಲ್ಲಿ ಕೃಷ್ಣಪೂಜೆ ಮಾಡುವ ಯತಿ ರಥ ಬೀದಿಯ ಗಡಿ ದಾಟುವಂತಿಲ್ಲ.
- ಅಷ್ಟಮಠಗಳ ನಡುವೆ ದ್ವಂದ್ವ ಮಠ ವ್ಯವಸ್ಥೆಯನ್ನು ಶಿಷ್ಯ ಸ್ವೀಕಾರ, ಪೂಜೆ ಸಹಿತ ಪರಸ್ಪರ ನೆರವಾಗುತ್ತವೆ.

## ಕೃಷ್ಣನ ಆಡುಂಬೋಲ ಉಡುಪಿ:

ದಕ್ಷಿಣ ಭಾರತದ ಪ್ರಮುಖ ಯಾತ್ರಾ ಸ್ಥಳಗಳಲೊಂದಾದ, ಜಗದ್ವಿಖ್ಯಾತ ಉಡುಪಿ ಶ್ರೀಕೃಷ್ಣ ಮಠಕ್ಕೆ ವಿಶೇಷ ಮನ್ನಣೆ. ದ್ವೈತ ಸಿದ್ಧಾಂತ ಪ್ರತಿಪಾದಿಸಿದ ಶ್ರೀಮನ್ಮಧ್ವಾಚಾರ್ಯರಿಂದ 750 ವರ್ಷಗಳ ಹಿಂದೆ ಪ್ರತಿಷ್ಠಾಪಿ

ಡಾ।। ಗುರುರಾಜಪ್ಪೋಶೆಟ್ಟಿ ಹಳ್ಳಿ
90356 18076

ಸಲ್ಪಟ್ಟು ಶ್ರೀ ಕೃಷ್ಣಾಮೂರ್ತಿ ಇಲ್ಲಿದೆ. ಶ್ರೀಕೃಷ್ಣನ ಪೂಜಾಕೈಂಕರ್ಯಕ್ಕೆ ಅನುಕೂಲವಾಗಲೆಂದು, ಮಧ್ವಾಚಾರ್ಯರು ಎಂಟು ಬಾಲ ಯತಿಗಳನ್ನು ನಿಯೋಜಿಸಿದರು.ಇವುಗಳೇ ಅಷ್ಟ ಮಠಗಳಾಗಿದ್ದು,ವರ್ಷದಲ್ಲಿ ಎರಡು ತಿಂಗಳಿಗೊಮ್ಮೆ ಈ ಮಠಗಳಿಗೆ ಪರ್ಯಾಯ ಪೂಜಾವಿಧಿಯನ್ನು ನಿಗದಿಗೊಳಿಸಲಾಗಿದುತ್ತು. ಕಾಲಾನಂತರದಲ್ಲಿ ಅಷ್ಟ ಮಠಗಳಲ್ಲೊಂದಾದ ಶ್ರೀಸೋದೆ ಮಠದ ಪರಂಪರೆಯಲ್ಲಿ ಬಂದ ಶ್ರೀವಾದಿರಾಜ ಗುರುಸಾರ್ವಭೌಮರು (1481-1601) ಶ್ರೀರಾಮಚಂದ್ರನ ಜನ್ಮಸ್ಥಳ ಅಯೋಧ್ಯೆಯಿಂದ ತರಲಾಗಿದೆ ಎಂಬ ಐತಿಹ್ಯದ ಆಂಜನೇಯನನ್ನು ಪ್ರತಿಷ್ಠಾಪಿಸಿ ದ್ವೈವಾರ್ಷಿಕ ಪೂಜಾ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಅದರಂತೆ ಈಗ ನಡೆಯುತ್ತಿರುವುದು 251 ನೇ ಪರ್ಯಾಯ.

### ಅಷ್ಟ ಮಠಗಳು

ಪಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ, ಶಿರೂರು, ಸೋದೆ, ಕಾಣಿಯೂರು, ಪೇಜಾವರ ಹೆಸರಿನ ಅಷ್ಟಮಠಗಳು ಇಲ್ಲಿದೆ. ಕೃಷ್ಣನ ಅರ್ಚಿಸುವ ಪರ್ಯಾಯ ಪೂಜಾಕ್ರಮವು ಪಲಿಮಾರು ಮಠದಿಂದ ಆರಂಭಗೊಂಡು ಅದಮಾರು, ಕೃಷ್ಣಾಪುರ, ಪುತ್ತಿಗೆ,ಶೀರೂರು, ಸೋದೆ, ಕಾಣಿಯೂರು ಅನಂತರ ಪೇಜಾವರ ಮಠದಲ್ಲಿ ಕೊನೆಗೊಳ್ಳುತ್ತದೆ. ಪರಂಪರೆಯ ಅದ್ಯ ಯತಿಗಳ ಆಶ್ರಮ ಜ್ಯೇಷ್ಠತ್ವವನ್ನು ಆಧರಿಸಿ ಜಾರಿಗೆ ಬಂದಿದೆ. ಹಿಂದೆ ಆಯಾ ಮಠಗಳ ಅದ್ಯ ಯತಿಗಳ ಹೆಸರಿನಿಂದ ಆ ಮಠವನ್ನು ಕರೆಯಲಾಗುತ್ತಿತ್ತು ಉದಾಹರಣೆಗೆ ಅಧೋಕ್ಷಜ ಸಂಸ್ಥಾನ, ರಾಮತೀರ್ಥ ಸಂಸ್ಥಾನ ಇತ್ಯಾದಿ. ಅನಂತರ ಒಂದೊಂದು ಊರುಗಳಲ್ಲಿ ಮಠಗಳನ್ನು ಸ್ಥಾಪಿಸಲಾಯಿತು. ಮುಂದೆ ಇದೇ ಊರಿನ ಹೆಸರಿನಲ್ಲಿ ಮಠಗಳ ಚಾಲ್ತಿಗೆ ಬಂತು.

### ಪರ್ಯಾಯ ಉಪಾಸನೆ

ಜಗದೊಡೆಯ ಶ್ರೀಕೃಷ್ಣನನ್ನು ದೀಕ್ಷಾ ಬದ್ಧವಾಗಿ ಪೂಜಿಸುವುದು ಪರ್ಯಾಯ ಪೂಜೆಯ ಮುಖ್ಯ ಉದ್ದೇಶ. ಇದರೊಂದಿಗೆ ಶ್ರೀಮನ್ಮಧ್ವಾಚಾರ್ಯರ ತತ್ವ, ಭಕ್ತಿ ಸಿದ್ಧಾಂತವನ್ನು ಜನತೆಗೆ ತಲುಪಿಸುವುದೂ ಮುಖ್ಯ ಉದ್ದೇಶ.ನಿತ್ಯ ಶ್ರೀಕೃಷ್ಣನನ್ನು ಷೋಡಶೋಪಚಾರಗಳಿಂದ ಪೂಜಿಸಲಾಗುತ್ತದೆ. ಜೊತೆಗೆ ಅನ್ನದಾನಾದಿಗಳ ಮೂಲಕ ಸಕಲ ದೇವರಾಶಿಗಳಲ್ಲಿ ಭಗವಂತನನ್ನೂ ಕಾಣು ವುದೂ ಪೂಜೆ. ಇದಕ್ಕಾಗಿಯೇ ಉಡುಪಿ ಕ್ಷೇತ್ರಕ್ಕೆ ಅನ್ನಬ್ರಹ್ಮನ ಕ್ಷೇತ್ರ ಎಂಬ ಹೆಸರಿದ್ದು ನಿರಂತರ ಅನ್ನದಾನಕ್ಕೆ ಹೆಸರಾಗಿದೆ. ಪರ್ಯಾಯ ಸಂದರ್ಭ ಅನ್ನದಾನಕ್ಕೂ ಇಲ್ಲಿ ಬಹಳಷ್ಟು ಮಹತ್ವವಿದೆ.

### ಸರ್ವಜ್ಞ ಪೀಠಾರೋಹಣ

ಮಧ್ವರು ಕುಳಿತುಕೊಂಡ ಸ್ಥಳ ಸರ್ವಜ್ಞಪೀಠ ಪರ್ಯಾಯ ಮೆರವಣಿಗೆ ಬಳಿಕ ನಿರ್ಗಮನ ಶ್ರೀಗಳು,ಪರ್ಯಾಯ ನಡೆಸಲಿರುವ ಶ್ರೀಗಳನ್ನು ಬರಮಾಡಿಕೊಂಡು ಶ್ರೀಕೃಷ್ಣದರ್ಶನ ಮಾಡಿ ಸರ್ವಜ್ಞಪೀಠಕ್ಕೆ ಕರೆದೊಯ್ದು ಕುಳ್ಳಿರಿಸಿ ಯಶಸ್ಸಿಗೆ ಹಾರೈಸುತ್ತಾರೆ.ಇದಕ್ಕೂ ಮುನ್ನ ಮಧ್ವರ ಕಾಲದಿಂದ ಬಂದ ಅಕ್ಷಯಪಾತ್ರೆ,ಸಟ್ಟುಗವನ್ನು ನಿರ್ಗಮನ ಪೀಠಾಧೀಶರು ಆಗಮನ ಪೀಠಾಧೀಶರಿಗೆ ಹಸ್ತಾಂತರಿಸುತ್ತಾರೆ. ಅಕ್ಷಯಪಾತ್ರೆ, ಸಟ್ಟುಗಕ್ಕೂ ನಿತ್ಯ ಪೂಜೆ ಸಲ್ಲುತ್ತದೆ. ಅನ್ನದಾನಕ್ಕೆ ಕೊರತೆಯಾಗಬಾರದು ಎಂಬ ಸದಾಶಯದಿಂದ ಮಧ್ವರು ಕೊಟ್ಟ ಪಾತ್ರೆ ಇದು.

### ಪುರಪ್ರವೇಶ, ಪರ್ಯಾಯ , ಮೆರವಣಿಗೆ

ಪರ್ಯಾಯ ನಡೆಸಲಿರುವ ಶ್ರೀಗಳು ಉಡುಪಿ ಕೃಷ್ಣ ಮಠವಿರುವ ಪುರಕ್ಕೆ ಆಗಮಿಸುವುದು ಪುರ ಪ್ರವೇಶ. ಪರ್ಯಾಯ ಯತಿಗಳು ಕನಕನ ಕಿಂಡಿಯಲ್ಲಿ ದೇವರ ದರ್ಶನಗೈದು ಕ್ರಮವಾಗಿ ಮುಖ್ಯ ಮಠದ ಪಕ್ಕದಲ್ಲೇ ಇರುವ ಚಂದ್ರೇಶ್ವರ, ಅನಂತೇಶ್ವರ ದೇವರನ್ನು ಪ್ರಾರ್ಥಿಸಿ ಬಳಿಕ ಶ್ರೀಕೃಷ್ಣ ಮಠವನ್ನು ಪ್ರವೇಶಿಸುತ್ತಾರೆ. ಆಗ ಉತ್ತಮ ಮೂಹೂರ್ತದಲ್ಲಿ ಅವರ ಮಠದ ಮುಂಭಾಗ ನವಗ್ರಹ ದಾನ, ಪ್ರಾರ್ಥನೆ ಸಲ್ಲಿಸಲಾಗುತ್ತದೆ.ಬಳಿಕ ನಾಗರೀಕರು ಸನ್ಮಾನಿಸುತ್ತಾರೆ. ಪರ್ಯಾಯ ದೀಕ್ಷೆಗೂ ಮುನ್ನ ಉಡುಪಿಯಲ್ಲಿ ಪರ್ಯಾಯ ಮೆರವಣಿಗೆ ಕಳೆಕಟ್ಟುತ್ತದೆ. ಇದಕ್ಕೂ ಮುನ್ನ ಕಾಪು ಸಮೀಪದ ದಂಡತೀರ್ಥದಲ್ಲಿ ಸ್ನಾನ ಮಾಡಿ ಪರ್ಯಾಯ ಪೀಠಾಧೀಶರು ಆಗಮಿಸು ತ್ತಾರೆ. ಮೆರವಣಿಗೆಯಲ್ಲಿ ಆಕರ್ಷಕ ಟ್ಯಾಬ್ಲೋಗಳು, ಕಲಾಪ್ರಕಾರಗಳು, ವಾದನ ತಂಡಗಳಿದ್ದು, ಇಡೀ ಉಡುಪಿ ಸಂಭ್ರಮಿಸುತ್ತದೆ.

### ಪರ್ಯಾಯ ದರ್ಬಾರ್

ಪರ್ಯಾಯ ಮೆರವಣಿಗೆ ಒಂದು ಪರ್ಯಾಯ ಯತಿಗಳು ಸರ್ವಜ್ಞಪೀಠಾರೋಹಣ ಮಾಡಿದ ಬಳಿಕ ನಡೆಯುವ ಸಭೆ ದರ್ಬಾರ್ ಸಭೆ.ಇಲ್ಲಿ ಅಷ್ಟಮಠಾಧೀಶರು ಪಾಲ್ಗೊಂಡು ಆಶೀರ್ವಚನ ನೀಡಿ ಪರ್ಯಾಯ ಮಠಾಧೀಶರಿಗೆ ಸಹಕಾರ ನೀಡುವ ಬಗ್ಗೆ ಹೇಳುತ್ತಾರೆ ಇದರೊಂದಿಗೆ ನಾಡಿನ ಜನಪ್ರತಿನಿಧಿಗಳು.ಗಣ್ಯರು, ಧರ್ಮಾಧಿಕಾರಿಗಳು,ವಿದ್ವಾಂಸರು, ನ್ಯಾಯವೇತ್ತರೂ ಪಾಲ್ಗೊಳ್ಳುವುದು ವಿಶೇಷ. ಸಾಧಕರಿಗೆ ಸಮಾನವೂ ಇದೇ ವೇಳೆ ಮಠದವತಿಯಿಂದ ನಡೆಸಲಾಗುತ್ತದೆ.

### ಬಾಳೆ ಮೂಹೂರ್ತ

ಪರ್ಯಾಯ ಕಾಲದಲ್ಲಿ ತುಳಸಿ, ಬಾಳೆಯಎಲೆ, ಬಾಳೆಹಣ್ಣು,ಅಗತ್ಯವಿರುವುದರಿಂದ ಇದಕ್ಕೆ ಪೂರ್ವಭಾವಿ ತಯಾರಿ ಬಾಳೆ ಮುಹೂರ್ತ ಆಯಾ ಮಠದ ಜಾಗದಲ್ಲಿ ಇವುಗಳು ನೆಟ್ಟು ಸಿದ್ಧ ಮಾಡಿಟ್ಟುಕೊಳ್ಳುವುದು ಉದ್ದೇಶ. ಆದರೆ ಕಾಲ ಬದಲಾದಂತೆ, ಜನಸಂಖ್ಯೆ ಹೆಚ್ಚಿದಂತೆ ಬಾಳೆ ಎಲೆ, ಹಣ್ಣುಗಳನ್ನು ಖರೀದಿಸ ಬೇಕಾದ ಅನಿವಾರ್ಯತೆ ಇರುವುದರಿಂದ ಇದು ಸಾಂಕೇತಿಕವಾಗಿದೆ.

### ಅಕ್ಕಿ ಮೂಹೂರ್ತ

ಎರಡನೆಯ ಮುಹೂರ್ತ ಅಕ್ಕಿ ಮುಹೂರ್ತ. ಅನ್ನಸಂತರ್ಪಣೆಗೆ ಅಗಾಧ ಪ್ರಮಾಣದ ಅಕ್ಕಿ ಬೇಕಾಗಿರುವುದರಿಂದ ಅಕ್ಕಿ ಸಂಗ್ರಹಣೆಯ ಮುಹೂರ್ತವಿದು. ಸಾಂಕೇತಿಕವಾಗಿ ಅಕ್ಕಿ ಮುಡಿ ಮೆರವಣಿಗೆ ನಡೆದು ಪ್ರಾರ್ಥನೆ ಮಾಡುತ್ತಾರೆ. ಪರ್ಯಾಯ

ಪೀಠವೇರುವ ಯತಿಗಳ ಉಪಸ್ಥಿತಿಯಲ್ಲೇ ಈ ಕಾರ್ಯಕ್ರಮ ನೆರವೇರುತ್ತದೆ.

**ಭತ್ತ ಮೂಹೂರ್ತ:**

ನಾಲ್ಕನೆಯ ಮುಹೂರ್ತ ಭತ್ತ ಮುಹೂರ್ತ. ಪರ್ಯಾಯ ಮೊದಲು ಕೊಯ್ಲು ಆಗಿ ಬಂದ ಹೊಸ ಭತ್ತದ ಸಂಗ್ರಹ ವನ್ನು ಮಾಡಲಾಗುತ್ತದೆ. ಅಕ್ಕಿ ಸಂಗ್ರಹಕ್ಕೆ ಇದು ಪೂರ್ವಭಾವಿ ತಯಾರಿ. ಶ್ರೀಕೃಷ್ಣಮಠದ ಕಾರ್ಯಾಲಯವನ್ನು ಬಡಗು ಮಾಳಿಗೆ ಎಂದು ಕರೆಯುತ್ತಾರೆ. ಮುಂದೆ ಪರ್ಯಾಯ ಪೀಠವೇರುವ ಮಠದವರು ಬಡಗು ಮಾಳಿಗೆಯನ್ನು ಪ್ರವೇಶಿಸುವುದು. ಈ ಕೊನೆಯ ಮುಹೂರ್ತದಲ್ಲಿ ಭತ್ತದ ಮುಡಿಗಳನ್ನು ಬಡಗು ಮಾಳಿಗೆಯಲ್ಲಿಟ್ಟು ಪುರೋಹಿತರು ಪೂಜೆ ಸಲ್ಲಿಸುತ್ತಾರೆ.ಇದೇ ದಿನ ಕಟ್ಟಿಗೆ ರಥ ನಿರ್ಮಾಣ ಮುಗಿದು ಅದಕ್ಕೆ ಕಲಶ ವನ್ನು ಇಡುತ್ತಾರೆ. ಇದನ್ನು ಶಿಖರ ಮುಹೂರ್ತವೆಂದೂ ಕರೆಯುತ್ತಾರೆ. ಈ ಎಲ್ಲಾ ಮುಹೂರ್ತಗಳೂ ಇದೀಗ ಕೇವಲ ಸಾಂಕೇತಿಕ ಆಚರಣೆಯಾಗಿ ಉಳಿದುಕೊಂಡಿವೆ.ಇತ್ತೀಚೆಗೆ ಅಡುಗೆ ಚಪ್ಪರ,ಸಭಾಂಗಣ ಚಪ್ಪರ,ಹೊರೆಕಾಣಿಕೆ ಚಪ್ಪರ ಹೀಗೆ ಮುಹೂರ್ತ ಗಳೂ ಹುಟ್ಟಿಕೊಂಡಿವೆ.

**ಪರ್ಯಾಯ ಪೂರ್ವ - ಸಂಚಾರ**

ಪರ್ಯಾಯೋತ್ಸವಕ್ಕಿಂತ ಸುಮಾರು 4-5 ತಿಂಗಳ ಮೊದಲು ಭಾವಿ ಪರ್ಯಾಯದ ಶ್ರೀಪಾದರು ತೀರ್ಥಕ್ಷೇತ್ರಗಳ ಯಾತ್ರೆಗೆ ಹೊರಡುತ್ತಾರೆ.ಇದನ್ನು ಪರ್ಯಾಯ ಪೂರ್ವ ಸಂಚಾರ ಅಥವಾ ಪರ್ಯಾಯ ಸಂಚಾರ ಎಂದು ಕರೆಯುತ್ತಾರೆ. ಪರ್ಯಾಯ ಪೀಠವನ್ನೇರಿದ ಅನಂತರ ಎರಡು ವರ್ಷಗಳ ಕಾಲ ಶ್ರೀಪಾದರು ಶ್ರೀಕೃಷ್ಣ ಸನ್ನಿಧಿಯಿಂದ ಬೇರೆಡೆಗೆ ಹೋಗುವಂತಿಲ್ಲ. ಅದರ ಪೂರ್ವಭಾವಿಯಾಗಿ ಎಲ್ಲೆಡೆ ಸಂಚರಿಸಿ, ಶಿಷ್ಯ ವೃಂದವನ್ನು ಕಂಡು ಹರಸುವುದು, ಪರ್ಯಾಯಕ್ಕೆ ಅವರನ್ನೆಲ್ಲ ಆಹ್ವಾನಿ ಸುವುದು,ಎಲ್ಲಕ್ಕಿಂತ ಮುಖ್ಯವಾಗಿ ಕನ್ಯಾಕುಮಾರಿ ಯಿಂದ ಬದರಿಯ ತನಕ ಸಮಗ್ರ ಭಾರತದ ಎಲ್ಲ ತೀರ್ಥಗಳಲ್ಲಿ ಮಿಂದು ಕ್ಷೇತ್ರ ದೇವತೆಗಳನ್ನು ಸಂದರ್ಶಿಸಿ ಪರ್ಯಾಯ ಕಾಲದ ಪೂಜೆ ಸಂತರ್ಪಣೆಗಳು ನಿರ್ವಿಘ್ನವಾಗಿ ನಡೆಯುವಂತೆ ಸಮಸ್ತ ಕ್ಷೇತ್ರ ದೇವತೆಗಳನ್ನು ಪ್ರಾರ್ಥಿಸಿ ವಿಶೇಷ ಶಕ್ತಿ ಸನ್ನಿಧಾನವನ್ನು ಪಡೆಯುವುದು ಈ ಸಂಚಾರದ ಉದ್ದೇಶ.

ಒಂದು ಶುಭ ದಿನದಂದು ಶುಭ ಮುಹೂರ್ತದಲ್ಲಿ ದೇವತಾ ಪ್ರಾರ್ಥನೆ ಮಾಡಿ ಉಡುಪಿಯ ಮಠದಿಂದ ತನ್ನ ಆರಾಧ್ಯ ದೇವತೆಗಳ ಜೊತೆಗೆ ಶ್ರೀಪಾದರು ಪರ್ಯಾಯ ಸಂಚಾರಕ್ಕೆ ಹೊರಡುತ್ತಾರೆ. ಕನ್ಯಾ ಕುಮಾರಿ,ರಾಮೇಶ್ವರ,ತಿರುಪತಿ,ಮಧುರಾ,ಬೃಂದಾವನ,ದ್ವಾರಕೆ, ಗಯಾ,ಕಾಶೀ,ಪ್ರಯಾಗ,ಹೃಷಿಕೇಶ, ಹರಿದ್ವಾರ ಬದರಿ ಮುಂತಾದ ಪುರಾಣ ಪ್ರಸಿದ್ಧ ಪುಣ್ಯ ಕ್ಷೇತ್ರಗಳನ್ನೆಲ್ಲ ಸಂದರ್ಶಿಸುತ್ತಾರೆ. ಹೀಗೆ ದಕ್ಷಿಣೋತ್ತರ ಭಾರತ ಗಳ ಯಾತ್ರೆಯನ್ನು ಪೂರೈಸಿ ಜಿಲ್ಲೆಗೆ ಮರಳುತ್ತಾರೆ. ಅನಂತರ ಜಿಲ್ಲೆಯ ಪ್ರಸಿದ್ಧ ಕ್ಷೇತ್ರಗಳನ್ನು ಸಂದರ್ಶಿಸಿ ಒಂದು ನಿಶ್ಚಿತವಾದ ಮೂಹೂರ್ತದಂದು ಮತ್ತೆ ಉಡುಪಿಗೆ ಮರಳಿ ಪುರಪ್ರವೇಶ ಮಾಡುತ್ತಾರೆ. ಈ ಸಂಚಾರದ ಸಮಯದಲ್ಲಿ ಬೇರೆ ಬೇರೆ ನಗರಗಳಿಗೆ ಶ್ರೀಪಾದರಿಗೆ ಕರೆದು ವೈಭವದಿಂದ ಸತ್ಕರಿಸುತ್ತಾರೆ. ಪರ್ಯಾಯ ಪೂಜೆಯ ವಿನಿಯೋಗಕ್ಕಾಗಿ ಶ್ರೀಪಾದರಿಗೆ ವೃಷ್ಟಿಯಾಗಿ ಮತ್ತು ಸಮಷ್ಟಿಯಾಗಿ ಕಾಣಿಕೆಗಳನ್ನು ಸಮರ್ಪಿಸುತ್ತಾರೆ. ಮಂಗಲ ಮುಹೂರ್ತದಲ್ಲಿ ಪವಿತ್ರ ಸರ್ವಜ್ಞ ಪೀಠವನ್ನು ಶ್ರೀಪಾದರು ಅಲಂಕರಿಸುವ ಮೂಲಕ ಪರ್ಯಾಯ ಆರಂಭವಾಗುತ್ತದೆ.



**ಚತುರ್ಥಪರ್ಯಾಯ ವಿಶೇಷ**

**ಕೃಷ್ಣಾಪುರ ಮಠದ ಶ್ರೀವಿದ್ಯಾಸಾಗರತೀರ್ಥ ಶ್ರೀಪಾದರು ನಾಲ್ಕನೇ ಬಾರಿಗೆ ಸರ್ವಜ್ಞಪೀಠಾರೋಹಣ ಮಾಡುತ್ತಿರುವುದು ನಿಜಕ್ಕೂ ಚಾರಿತ್ರಿಕ. ಪರ್ಯಾಯ ಎನ್ನುವುದು ಒಂದು ಮಠಕ್ಕೆ 16 ವರ್ಷಗಳಿಗೊಮ್ಮೆ ಸಿಗುವ ಭಾಗ್ಯ. ಅಂದರೆ ಅಷ್ಟಮಠಗಳ 16 ವರ್ಷಗಳ ಚಕ್ರ ತಿರುಗಬೇಕು. ಪೂಜ್ಯರು 1971 ರಲ್ಲಿ ಆಶ್ರಮ ಸ್ವೀಕರಿಸಿ ಸೋದೆ ಮಠದ ಶ್ರೀವಿಶ್ವೋತ್ತಮ ತೀರ್ಥರಲ್ಲಿ ಸುಧಾದಿ ಗ್ರಂಥ ಅಧ್ಯಯನ ಮಾಡಿದ್ದಾರೆ. ಎಲೆ ಮರೆಕಾಯಿಯಂತೆ ಪ್ರಚಾರಕ್ಕೆ ಬಾರದೆ ಏಕಾಂತ ಜಪ ಪಾರಾಯಣ ನಿರತ ಶ್ರೀಗಳು ಈ ಪೀಠದ 35 ನೇ ಯತಿವರರು,ಶ್ರೀಕೃಷ್ಣಾಪುರ ಮಠದ ಮೂಲ ಪುರುಷರು ಶ್ರೀಜನಾರ್ಧನ ತೀರ್ಥರು, ಆಚಾರ್ಯ ಮದ್ವರು ಅನುಗ್ರಹಿಸಿದ ದ್ವಿಭುಜ ಕಾಲೀಯಮರ್ಧನ ಕೃಷ್ಣ ಈ ಮಠದ ಪ್ರಧಾನ ಆರಾಧ್ಯ ಮೂರ್ತಿ, ಈ ಪರಂಪರೆಯಲ್ಲಿ ಅನೇಕ ಸಾಧು ತಪಸ್ವಿಗಳು ಕೃಷ್ಣನಿಗೆ ಸೇವೆ ಸಲ್ಲಿಸಿದ್ದಾರೆ. ಪುತ್ತಿಗೆ ಮಠ ಮತ್ತು ಕೃಷ್ಣಾಪುರ ಮಠಗಳು ದ್ವಂದ್ವ ಮಠಗಳು.**

# ಶ್ರೀ ತ್ಯಾಗರಾಜ ಸ್ವಾಮಿಗಳು

- ಶ್ರೀಮತಿ. ಕೆ.ವಿ. ಲತಾ



ಭಾರತಭೂಮಿ ಹಲವು ಧರ್ಮಗಳ ಸಂಗಮಸ್ಥಾನ ಭವ್ಯಕಲಾ ಪರಂಪರೆಯ ಕೇಂದ್ರ, ಹಲವು ಪುಣ್ಯ ಪುರುಷರ, ಸಾಧಕರ, ಕರ್ಮಯೋಗಿಗಳ ಜನ್ಮಭೂಮಿ . ಇಂತಹ ಮಹಾನ್ ವ್ಯಕ್ತಿಗಳು ಇಲ್ಲಿನ ಧರ್ಮ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಸಾಧನೆ ಗೈದಿದ್ದಾರೆ ಇಂತಹ ಮಹಾನ್ ವ್ಯಕ್ತಿಗಳ ಪೈಕಿ ಸಂಗೀತಲೋಕದ ಧೃವತಾರೆ, ಕರ್ನಾಟಕ ಸಂಗೀತದ ಪಿತಾಮಹರಲ್ಲೊಬ್ಬರಾದ ನಾದಬ್ರಹ್ಮ ಶ್ರೀತ್ಯಾಗರಾಜರ ಹೆಸರು ಅಜರಾಮರ.

ತ್ಯಾಗರಾಜರು ಇದ್ದ ಕಾಲ ತುಂಬಾ ಹಿಂದಿನದ್ದೇನಲ್ಲ. ಆದರೂ ಸಾವಿರಾರು ವರ್ಷಗಳ ಹಿಂದಿದ್ದ ಋಷಿಗಳಂತೆ ಅವರ ವಿಚಾರವಾಗಿ ನಮ್ಮ ಕಲ್ಪನೆಯಿದೆ. ದೇವಲೋಕದ ಋಷಿ ನಾರದರ ಅವತಾರವೆಂದೇ ಅವರ ಶಿಷ್ಯ ಪರಂಪರೆಯ ನಂಬಿಕೆ. ರಾಮಾಯಣವನ್ನು ರಚಿಸಿದ ವಾಲ್ಮೀಕಿ ಋಷಿಗಳೇ ತ್ಯಾಗರಾಜರಾಗಿ ಅವತರಿಸಿದರೆಂದೂ ಸಹ ಹೇಳುತ್ತಾರೆ. ಪುರಂದರದಾಸರನ್ನು ಕರ್ನಾಟಕ ಸಂಗಿತಕ್ಕೆ "ಪಿತಾಮಹ" ಅಂದರೆ ತಾತ ಎಂದು ಕರೆಯುತ್ತಾರೆ. ಅವರ ನಂತರ ಸಂಗೀತದಲ್ಲಿ ಅಷ್ಟು ಹೆಸರು ವಾಸಿಯಾದವರು ತ್ಯಾಗರಾಜರು. ಅವರು ಪುರಂದರದಾಸರ ಪರಂಪರೆಗೇ ಸೇರಿದವರು. ಪುರಂದರದಾಸರು ತಮ್ಮ ಹಾಡುಗಳನ್ನೆಲ್ಲ ಕನ್ನಡದಲ್ಲಿ ಹಾಡಿದ್ದಾರೆ. ತ್ಯಾಗರಾಜರ ಹಾಡುಗಳು ಬಹುಮಟ್ಟಿಗೆ ತೆಲುಗು ಭಾಷೆಯಲ್ಲಿದೆ. ಕೆಲವು ಸಂಸ್ಕೃತದಲ್ಲಿದೆ. ತ್ಯಾಗರಾಜರಿದ್ದ ಕಾಲದಲ್ಲಿಯೇ ಅದೇ ಪ್ರಾಂತ್ಯದಲ್ಲಿ ಇನ್ನಿಬ್ಬರಿದ್ದರು ಅವರು ಸಹ ತ್ಯಾಗರಾಜರಂತೆ ಸಂತರು, ಕವಿಗಳು ಸಂಗೀತ ಪದ್ಧತಿಯನ್ನು ಬೆಳಸಿ,ನೂರಾರು ಕೀರ್ತನೆಗಳನ್ನು ರಚಿಸಿದವರು.ಅವರಲ್ಲಿ ಒಬ್ಬರು ಶ್ಯಾಮಶಾಸ್ತ್ರಿಗಳು ಇನ್ನೊಬ್ಬರು ಮುತ್ತು ಸ್ವಾಮಿದೀಕ್ಷಿತರು. ನಮ್ಮ ಸಂಗೀತಕ್ಕೆ ಈ ಮೂವರೂ ಮೂರು ಕಣ್ಣುಗಳ ಹಾಗೆ, ಮೂವರು ದೇವತೆಗಳ ಹಾಗೆ, ಅದಕ್ಕಾಗಿಯೇ ಇವರನ್ನು ಕರ್ನಾಟಕ ಸಂಗೀತದ ತ್ರಿಮೂರ್ತಿಗಳು ಎಂದು ಕರೆಯುತ್ತಾರೆ.

ತ್ಯಾಗರಾಜರ ಪೂರ್ವಿಕರು ಮೂಲತಃ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಗೆ ಸೇರಿದ ಕಾರ್ಕರ್ಲ ಎಂಬ ಹಳ್ಳಿಯವರು. ತ್ಯಾಗರಾಜರ ಮುತ್ತಾತ ಪಂಚನಾದಬ್ರಹ್ಮ ಎನ್ನುವವರು ಈ ಹಳ್ಳಿಯನ್ನು ಬಿಟ್ಟು ಕ್ರಿ.ಶ.1600ರ ಸುಮಾರಿಗೆ ತಂಜಾವೂರಿನ ಬಳಿಯಿರುವ ತಿರುವಾರೂರು ಎಂಬ ಹಳ್ಳಿಗೆ ಬಂದು ಅಲ್ಲಿ ನೆಲೆಸಿದರು ಅವರು ಮಗ ಎಂದರೆ ತ್ಯಾಗರಾಜರ ತಾತ ಗಿರಿರಾಜಬ್ರಹ್ಮ ಸಹ ದೊಡ್ಡ ಪಂಡಿತರು ಹಾಗೂ ಕವಿಗಳು. ತಂಜಾವೂರು ದೊರೆ ಅವರನ್ನು ತನ್ನ ಆಸ್ಥಾನಕ್ಕೆ ಕರೆಸಿಕೊಂಡು ಸನ್ಮಾನ ಮಾಡಿದ್ದ ಇಂಥವರ ಮಗ ರಾಮಬ್ರಹ್ಮ ಅವರೂ ಸಹ ಒಳ್ಳೆಯ ವಿದ್ವಾಂಸರು ಹೀಗೆ ತ್ಯಾಗರಾಜರ ವಂಶವೇ ವಿದ್ವನ್ಮಣಿಗಳ ಸಾಲು.

ರಾಮ ಬ್ರಹ್ಮ ಪಂಡಿತರು ಮಾತ್ರವಲ್ಲ, ರಾಮಭಕ್ತರು ಮನೆಯಲ್ಲಿ ರಾಮಪಂಚಾಯತನ (ಎಂದರೆ ರಾಮನ ಐವರು ಪರಿವಾರ ಲಕ್ಷ್ಮಣ,ಭರತಸ, ಶತ್ರುಘ್ನ ಹನುಮಂತ ಮತ್ತು ಸೀತೆ ನಾವು ಕಾಣುವ ತ್ಯಾಗರಾಜರ ಪೋಟೋದಲ್ಲಿ ಅವರು ಪೂಜೆ ಮಾಡುತ್ತಿರುವ ವಿಗ್ರಹ )ವನ್ನು ದಿನವೂ ಭಕ್ತಿಯಿಂದ ಪೂಜೆ ಮಾಡುವವರು ರಾಮನವಮಿಯ ಸಂದರ್ಭದಲ್ಲಿ ಸಡಗರದಿಂದ ಉತ್ಸವ ಮಾಡುವರು. ತಂಜಾವೂರು ದೊರೆ ತುಲಜಾಜಿ ಮಹಾರಾಜ ಇವರನ್ನು ತನ್ನ ಅರಮನೆಗೆ ಕರೆಸಿಕೊಂಡು ಅವರಿಂದ ರಾಮಾಯಣವನ್ನು ಓದಿಸುತ್ತಿದ್ದ. ರಾಮ ಬ್ರಹ್ಮನ ಹೆಂಡತಿ ಸೀತಮ್ಮ ಆಕೆಯೂ ಗಂಡನಂತೆಯೇ ಸಾಧು ದೈವಭಕ್ತೆ.

ರಾಮಬ್ರಹ್ಮ ಸೀತಮ್ಮ ದಂಪತಿಗಳಿಗೆ ಮೂವ್ವರು ಮಕ್ಕಳು ಪಂಚನದ ಬ್ರಹ್ಮ (ಅಥವಾ ಜಪ್ಯೇಶ). ಪಂಚಾಪಕೇಶಬ್ರಹ್ಮ ಮತ್ತು ತ್ಯಾಗಬ್ರಹ್ಮ ಎಂದು. ಮೊದಲ ಇಬ್ಬರು ಮಕ್ಕಳು ತುಂಬ ದುಷ್ಟರಾಗಿ ಬೆಳೆದರು. ಹಳ್ಳಿಯಲ್ಲೆಲ್ಲ ಪಟಿಂಗರೆಂದು ಹೆಸರಾದರು.ತಂದೆ,ತಾಯಿಯವರಿಗೆ ತುಂಬ ದುಃಖವಾಯಿತು. ಏನು ಮಾಡಬೇಕೆಂದು ತೋಚದೆ ಊರಿನ ದೇವರಾದ ತ್ಯಾಗರಾಜ ಸ್ವಾಮಿಯಲ್ಲಿ ಮೊರೆಯಿಟ್ಟರು. ಹುಟ್ಟಿದ ಮಗುವಿಗೆ ಊರದೇವರ ಹೆಸರನ್ನೇ ಇಟ್ಟರು.ಮನೆತನದ ಹೆಸರಿನಲ್ಲಿ ಕಡೆ ಬ್ರಹ್ಮ ಎಂದು ವಾಡಿಕೆ ಹೀಗೆ ಮಗುವಿಗೆ ತ್ಯಾಗಬ್ರಹ್ಮ ಎಂದು ಹೆಸರಾಯಿತು. ತ್ಯಾಗಯ್ಯ ಎಂದೂ ಕರೆಯುತ್ತಿದ್ದರು. ದೇವರ ಹೆಸರಿನಿಂದ ತ್ಯಾಗರಾಜರೆಂದೇ ಪ್ರಸಿದ್ಧರಾದರು.

### ನಾದ ಬ್ರಹ್ಮ:

ಭಾರತೀಯ ಸಂಗೀತದ ಉಗಮ ವೇದಗಳ ಕಾಲಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಋಗ್ವೇದದಲ್ಲಿ 'ವಾಕ್' ಎಂಬುದು ನಾದದ ಮೂಲಭೂತ ತತ್ತ್ವ ಎಂದು ತಿಳಿಸಲಾಗಿದೆ ಎನ್ನುತ್ತಾರೆ. ತತ್ಸಂಬಂಧಿತ ವಿದ್ವಾಂಸರು. ವೇದಾಂತ, ಉಪನಿಷತ್ ಹಾಗೂ ತಾಂತ್ರಿಕ ಅಖಂಡಭಾವ ಪ್ರವಾಹದಲ್ಲಿ 'ನಾದಬ್ರಹ್ಮ' ಎಂಬ ಪರಿಕಲ್ಪನೆ, ನಾದ ಬ್ರಹ್ಮ ಎಂಬುದು ಅದ್ಭುತವಾದ ಪಾರಮಾರ್ಥಿಕ ಪರಿಕಲ್ಪನೆ, ಬ್ರಹ್ಮನ ಪತ್ನಿ, ಸರಸ್ವತಿ ಅಥವಾ ಭಾರತಿ ವಾಕ್ ದೇವತೆ ಎಂದು ಪರಿಗಣಿಲಸಲ್ಪಟ್ಟು ಎಲ್ಲ ಕಲಾರಾಧಕರ ಆರಾಧ್ಯ ದೇವತೆಯಾಗಿದ್ದಾಳೆ.ನಾದಬ್ರಹ್ಮ ಎಂದರೆ ಬ್ರಹ್ಮನನ್ನು ಸಂಬೋಧಿಸುವ ಇನ್ನೊಂದು ಹೆಸರೆಂದು ನಾದಯೋಗಿಗಳ ನಂಬಿಕೆ.

ನಾದಬ್ರಹ್ಮ ಪರಿಕಲ್ಪನೆ ಹಾಗೂ ಪವಿತ್ರವಾದ ಓಂಕಾರಗಳು ಭಾರತೀಯ ಸಂಗೀತ ಶಾಸ್ತ್ರದ ಕಲೆ ಹಾಗೂ ವಿಜ್ಞಾನಗಳಿಗೆ ತಳಹದಿ ಯಾಗಿದೆ.ಭಾರತೀಯ ಸಂಗೀತವು ಚತುರ್ವಿಧ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷ, ಸಾಧನೆಗೆ ಮಾಧ್ಯಮ ಎಂದು ಕೂಡ ಸಂಗೀತ ಸಾಧಕರಿಂದ ಪರಿಗಣಿಸಲ್ಪಟ್ಟಿದೆ.ಆದರೆ ಆ ಮಾರ್ಗದಲ್ಲಿ ಯಶಸ್ಸನ್ನು ಗಳಿಸಬೇಕಾದರೆ ಆ ಕುರಿತ ಸಾಧಕನ ಭಾವನೆ, ಪ್ರಯತ್ನ ಹಾಗೂ ಅದರಲ್ಲಿ ಅವನ ತಾದಾತ್ಮತೆಗಳ ಮೇಲೆ ಅವಲಂಭಿತವಾಗಿದೆ. ಜನರಂಜನೆ ಹೇಗೆ ಸಂಗೀತದ ಒಂದು ಭಾಗವೋ ಹಾಗೆಯೇ ಭವ ಭಂಜ ನೆಯೂ ಅದರ ಒಂದು ಗುರಿ. ಭವಭಂಜನೆ ಎಂದರೆ ಲೌಕಿಕದ ಬಂಧನ ಗಳನ್ನೆಲ್ಲ ಕಡಿದುಕೊಂಡು ಮೋಕ್ಷಸಾಧನೆ ಎಂದು ಅರ್ಥ.

ಶ್ರೀತ್ಯಾಗರಾಜರು ನಾದಯೋಗಿಗಳು ಯೋಗ ಎಂಬ ಪದಕ್ಕೆ ಹಲವು ಅರ್ಥಗಳುಂಟು. ಯೋಗ ಎಂಬ ಸಂಸ್ಕೃತ ಶಬ್ದ 'ಯುಚ್' ಎಂಬ ಧಾತುವಿನಿಂದ ಹುಟ್ಟಿದೆ. ಯುಜ್ ಎಂದರೆ ಸೇರಿಸುವುದು ಎಂದರ್ಥ. ನಮ್ಮ ಪರಂಪರೆಯಲ್ಲಿ ಜೀವಾತ್ಮನು ಪರಮಾತ್ಮನೊಂದಿಗೆ ಸೇರುವುದೇ ಯೋಗ ಸಾಧನೆಯ ಅಂತಿಮ ಗುರು ಎಂಬ ನಂಬಿಕೆ ಉಂಟು. ಅದರ ಅರ್ಥ ಸಂಕುಚಿತವೂ ಸೀಮಿತವೂ ಆದ ಅಹಂಕಾರ ತುಂಬಿದ ವ್ಯಕ್ತಿತ್ವವನ್ನು ವಿಶಾಲಗೊಳಿಸುತ್ತಾ ಹೋಗಿ ಸರ್ವವ್ಯಾಪಕವೂ ಶಾಶ್ವತವೂ ಆನಂದ ಕರವೂ ಆದ ಸತ್ಯ ಸ್ಥಿತಿಗೆ ಸೇರಿಸುವುದು ಎಂಬುದೇ ಆಗಿದೆ.

ಯೋಗ ಎಂಬುದನ್ನು ಅನೇಕ ಮಹಾನುಭಾವರು ಅರ್ಥೈಸಿ ದ್ದಾರೆ. ಅರವಿಂದ ಮಹರ್ಷಿಗಳ ಪ್ರಕಾರ ವ್ಯಕ್ತಿಯಲ್ಲಿನ ಸುಪ್ತ ಸಾಮರ್ಥ್ಯ ಗಳನ್ನು ವಿಕಾಸಗೊಳಿಸುವುದರ ಮೂಲಕ ಪರಿಪೂರ್ಣತೆಯ ಕಡೆಗೆ ಕರೆ ದೊಯ್ಯುವ ಕ್ರಮಬದ್ಧ ಪ್ರಯತ್ನವೇ ಯೋಗ. ಶಾರೀರಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಸರ್ವಾಂಗೀಣ ಬೆಳವಣಿಗೆಗೆ ರಾಜಮಾರ್ಗವೇ ಯೋಗ.

ಅದ್ವೈತವು ಜೀವಾತ್ಮ ಮತ್ತು ಪರಮಾತ್ಮರ ಐಕ್ಯತೆಯೇ ಯೋಗ ಎಂದು ಯೋಗದ ಪರಮೋದ್ದೇಶವನ್ನು ಸಾರಿದೆ. ನಮ್ಮ ಪೂರ್ವಿಕರು ಸತ್ಯಸಾಕ್ಷಾತ್ಕಾರಕ್ಕೆ ನಾಲ್ಕು ಯೋಗಗಳನ್ನು ಸಾಧನಗಳನ್ನಾಗಿ ಹೇಳಿದ್ದಾರೆ. ಅವೇ ಜ್ಞಾನ, ಕರ್ಮ, ರಾಜ ಹಾಗೂ ಭಕ್ತಿ ಯೋಗಗಳು. ಶ್ರೇಷ್ಠ ಸಂಗೀತ ಸಾಧಕರು ಇದಕ್ಕೆ ಮತ್ತೊಂದು ಯೋಗವನ್ನು ಸೇರಿಸುತ್ತಾರೆ. ಅದೇ ನಾದಯೋಗ. ಶ್ರೀ ತ್ಯಾಗರಾಜರು ಈ ನಾದಯೋಗ ಮಾರ್ಗಿಗಳಾಗಿ ಸಂಚ ರಿಸಿ ಮೋಕ್ಷ ಪಡೆದವರು.

ತ್ಯಾಗರಾಜರ ಪ್ರಕಾರ ಭಗವಂತನು ನಾದಾತ್ಮ, ನಾದ ಸ್ವರೂಪಿ, ನಾದಲೋಲ, ನಾದ ಶರೀರ ಹಾಗೂ ನಾದಮಯಪ್ರಾಣ. ತ್ಯಾಗರಾಜರು ತಮ್ಮ ಆರಾಧ್ಯ ದೈವ ಶ್ರೀರಾಮನನ್ನು ತಮ್ಮ ಕೀರ್ತನೆಗಳಲ್ಲಿ ಸಂಗೀತ ಲೋಲ, ಗಾನಲೋಲ, ಗೀತ ಪ್ರಿಯ, ಸಾಮಗಾನಲೋಲ ಮುಂತಾಗಿ ಸಂಬೋಧಿಸಿದ್ದಾರೆ.


### ತ್ಯಾಗರಾಜರ ಹಿರಿಮೆ

ಶ್ರೀತ್ಯಾಗರಾಜರ ಹೆಸರು ಭಗವದ್ಭಕ್ತವಲಯದಲ್ಲಿ ಮನೆ ಮಾತಾ ಗಿರುವಂಥದ್ದು. ದಕ್ಷಿಣಾದಿ ಸಂಗೀತ ಕ್ಷೇತ್ರದಲ್ಲಿ ಅವರನ್ನು ಮೀರಿಸುವ ಇನ್ನೊಬ್ಬ ಸಂಕೀರ್ತನಕಾರರಿಲ್ಲ. ಸರಳ ಜೀವನದ ಸಾಕಾರಮೂರ್ತಿಯೇ ಆಗಿದ್ದ ಅವರು, ತ್ಯಾಗ-ವೈರಾಗ್ಯಕ್ಕೆ ಮತ್ತೊಂದು ಹೆಸರಾಗಿದ್ದರು. ಭಗವದ್ ಸಂಕೀರ್ತನೆಗಳನ್ನು ಹುಟ್ಟು ಹಾಕುತ್ತ, ಉದರಭರಣಕ್ಕಾಗಿ ಮನೆಮನೆಯಲ್ಲಿ ಭಿಕ್ಷಾಟನೆ ಮಾಡುತ್ತ ಸಂತೃಪ್ತ ಜೀವನವನ್ನು ನಡೆಸುತ್ತಿದ್ದರು. ತ್ಯಾಗರಾಜರ ಪ್ರತಿಭೆ ಮತ್ತು ವ್ಯಕ್ತಿತ್ವದಿಂದ ಪ್ರಭಾವಿತನಾದ ಶ್ರೀಮಂತನೊಬ್ಬನಿಗೆ ಅವರು ಭೀಕ್ಷಾಟನೆ ಮಾಡುವುದು ಸರಿಕಾಣಲಿಲ್ಲ. ಅವರ ಬಡತನ ನಿವಾರಣೆಗೆ ಹಣದ ಕೊಡುಗೆ ನೀಡುವ, ದವಸ ಧಾನ್ಯಗಳನ್ನು ಮನೆಗೇ ತಲುಪಿಸುವ ಪ್ರಲೋಭನೆ ಒಡ್ಡಿದರೂ ಅವೆಲ್ಲವನ್ನೂ ತಿರಸ್ಕರಿಸಿದ ತ್ಯಾಗರಾಜರು ತಮ್ಮ ಹಾಗೂ ಮಡದಿಯ ಜೀವನ ನಿರ್ವಹಣೆಗೆ ಭೀಕ್ಷಾಟನೆಯನ್ನೇ ನೆಚ್ಚಿದ್ದರು.

ಹೇಗಾದರೂ ಮಾಡಿ ತ್ಯಾಗರಾಜರ ಮನಸ್ಸು ಮತ್ತು ಜೀವನದ ಹಾದಿ ಬದಲಿಸಬೇಕೆಂದು ಪಟ್ಟುಹಿಡಿದ ಶ್ರೀಮಂತ, ಅಕ್ಕಿಯ ತದ್ರೂಪದ ಚಿನ್ನದ ಕಾಳುಗಳನ್ನು ಮಾಡಿಸಿ, ಅವರು ಭಿಕ್ಷೆಗೆಂದು ಬಂದಿದ್ದಾಗ ಅವನ್ನು ಅಕ್ಕಿಯ ಜತೆಗೆ ಬೆರೆಸಿ ಭಿಕ್ಷೆಯಾಗಿ ಜೋಳಿಗೆಗೆ ಹಾಕಿದ. ತ್ಯಾಗರಾಜರಿಗೆ ತಿಳಿಯ ದಂತೆಯೇ ಸಂಪತ್ತನ್ನು ವರ್ಗಾಯಿಸಿದ್ದಕ್ಕಾಗಿ ತೃಪ್ತಿಹೊಂದಿದ.

ಭಿಕ್ಷಾಟನೆ ಮುಗಿಸಿ ಮನೆ ಬಂದ ತ್ಯಾಗರಾಜರು ಜೋಳಿಗೆಯನ್ನು ಪತ್ನಿಗೆ ಒಪ್ಪಿಸಿ ವಿಶ್ರಾಂತಿಗೆ ತೆರಳಿದನು. ಪತ್ನಿಯು ಅದರಲ್ಲಿದ್ದ ಅಕ್ಕಿಯನ್ನು ಪಾತ್ರೆಗೆ ಸುರಿಯಲಾಗಿ ಅದರೊಳಗೆ ಸೇರಿಕೊಂಡಿದ್ದ ವಿಶಿಷ್ಟ ರೀತಿಯ ಮತ್ತಷ್ಟು ಅಕ್ಕಿಕಾಳುಗಳು ಕಂಡವು. ಅತ್ಯಂತ ಮುಗ್ಧೆಯಾಗಿದ್ದ ಆಕೆಗೆ ಅವು ಚಿನ್ನದ ಅಕ್ಕಿಕಾಳುಗಳೆಂಬುದು ತಿಳಿಯದೆ ಹೋಯಿತು. ಅದೇನೆಂದು ಪತಿಯನ್ನೇ ಕೇಳಬೇಕು ಎಂದು ಕೊಂಡಳು. ವಿಶ್ರಾಂತಿ ಮುಗಿಸಿ ಹೊರಬಂದ ತ್ಯಾಗರಾಜರಿಗೆ ಆ ಕಾಳುಗಳನ್ನು ತೋರಿಸಿದಾಗ, ಧನಿಕ ಭಕ್ತನು ಜಾಣ್ಮೆಯಿಂದ ತನ್ನ ಜೋಳಿಗೆಯಲ್ಲಿ ಚಿನ್ನದ ಅಕ್ಕಿಕಾಳುಗಳನ್ನು ಹಾಕಿರುವುದು ಅವರಿಗೆ ಗೊತ್ತಾ ಯಿತು. ತಕ್ಷಣ ಅವರು ಪತ್ನಿಗೆ, "ಅಕ್ಕಿಕಾಳುಗಳು ಹಾಳಾಗಿವೆ, ಚರಂಡಿ ಯಲ್ಲಿ ಸುರಿದುಬಿಡು'' ಎಂದಷ್ಟೇ ಹೇಳಿ ತ್ಯಾಗ-ವೈರಾಗ್ಯವನ್ನು ಮೆರೆದರು.

ಕೆಲವರು ಹಣ ಮತ್ತು ಚಿನ್ನದಲ್ಲಿ ಸುಖವನ್ನು ಕಂಡರೆ, ಮತ್ತೆ ಕೆಲವರಿಗೆ ಪದವಿ - ಅಧಿಕಾರ - ಸವಲತ್ತುಗಳಲ್ಲಿ ಸುಖ ಗೋಚರಿಸುತ್ತದೆ. ಈ ಎಲ್ಲವೂ ನಶ್ವರ, ಭಗವಂತನ ಕೃಪಾಶೀರ್ವಾದವೊಂದೇ ಶಾಶ್ವತ ಎಂದು ನಂಬಿದ ವರಿಗೆ, ಭಕ್ತಿ ಸಂಕೀರ್ತನೆ ತ್ಯಾಗ-ವೈರಾಗ್ಯಗಳಲ್ಲೇ ಸುಖ ಕಾಣುತ್ತದೆ ಎಂಬುದಕ್ಕೆ ಈ ದೃಷ್ಟಾಂತ ಒಂದು ಉದಾಹರಣೆಯಾಗಿದೆ. ಈ ಲೌಕಿಕ ಪ್ರಪಂಚದಲ್ಲಿ ದಿನದೂಡುತ್ತಿರುವವರಾದ ನಾವು ಈ ಮಟ್ಟಿಗೆ ಅಲ್ಲದಿದ್ದರೂ, ಲೋಕದ ವ್ಯಾಪಾರಕ್ಕೆ ಎಷ್ಟು ಅಂಟಿಕೊಂಡಿರಬೇಕೋ ಅಷ್ಟುಮಾತ್ರವೇ ಅದರೊಂದಿಗೆ ನಂಟು ಹೊಂದಿದ್ದು, ದೀನ-ದಲಿತರ ಸೇವೆ ಮತ್ತು ಭಗವಂತನ ನಾಮ ಸ್ಮರಣೆಗೇ ಹೆಚ್ಚಿನ ಮಹತ್ವ ನೀಡಬೇಕು ಅದೇ ನಿಜವಾದ ಬದುಕು ಎಂಬು ದನ್ನು ಮರೆಯದಿರೋಣ.




# ಧನುರ್ಮಾಸ ಪಾರಮಾರ್ಥಿಕತೆ

- ಶ್ರೀಮತಿ. ಕೆ.ವಿ. ಪದ್ಮಾವತಿ

ಶ್ರೀಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ತಿಳಿಸಿರುವಂತೆ ಶ್ರೀಕೃಷ್ಣನಿಗೆ ಮಾರ್ಗಶಿರ ಮಾಸ ಅತ್ಯಂತ ಪ್ರಿಯವಾದ ತಿಂಗಳಾಗಿದೆ. "ಬೃಹತ್ ಸಾಮತಥಾ ಸಾಮ್ನಾಂ ಗಾಯತ್ರೀ ಛಂದಸಾನಾಮಹಮ್ ಮಾಸಾನಾಂ ಮಾರ್ಗ ಶೀರ್ಷೋಹಂ ಋತೂನಾಂಕುಸುಮಾಕರಃ ಸಾಮಗಳಲ್ಲಿ ಬೃಹತ್ ಸಾಮವು ನಾನು ಛಂದಸ್ಸುಗಳಲ್ಲಿ ಅತಿ ವಿಶಿಷ್ಟವಾದ ಗಾಯತ್ರಿ ಛಂದಸ್ಸು, ಮಾಸಗಳಲ್ಲಿ ಮಾರ್ಗಶೀರ್ಷ ಮಾಸ ಋತುಗಳಲ್ಲಿ ಚಿಗರೊಡೆಯುವ ವಸಂತವೂ ನಾನೇ ಆಗಿದ್ದೇನೆಂದು ತಿಳಿಸಿದ್ದಾನೆ.

ದೇವರನ್ನು ಧ್ಯಾನಿಸಲು ಪೂಜಿಸಲು ಪ್ರೀತಿಸಲು ಮತ್ತು ಒಳ್ಳೆಯ ಕೆಲಸ ಆರಂಭಿಸಲು ಧನುರ್ಮಾಸ ಅತಿ ಶ್ರೇಷ್ಟ ಮಾಸ! ಬರುವ ಧನುರ್ಮಾಸವನ್ನು ಶೂನ್ಯಮಾಸವೆಂದು ಕೆಲವರು ತಪ್ಪು ತಿಳಿದಿದ್ದಾರೆ ಆದರೆ ಇದು ಮಾಸಗಳಲ್ಲೇ ಅತೀ ಶ್ರೇಷ್ಟವಾದ ಮಾಸ ಈ ಮಾಸದಲ್ಲಿ ಬರುವ ಪ್ರಮುಖ ಹಬ್ಬಗಳು ಮೋಕ್ಷದಾಏಕಾದಶಿ-ಗೀತಾಜಯಂತಿ ದತ್ತಾತ್ರೇಯ ಜಯಂತಿ, ಸ್ಕಂದಷಷ್ಟಿ, ಧನುರ್ಮಾಸ ಆರಂಭ, ವಿಷ್ಣು ದೀಪ್ರೋತ್ಸವ, ಹುತ್ತರೀಹಬ್ಬ, ಕಾಲಭೈರವಾಷ್ಟಮಿ, ಎಳ್ಳಮಾವಾಸ್ಯೆ.

ಧನುರ್ಮಾಸದಲ್ಲಿ ವಿಶೇಷವಾಗಿ ಪರಮಾತ್ಮನನ್ನು ಹುಗ್ಗಿ ಸಮರ್ಪಣೆ ಮಾಡಿ ಪೂಜಿಸುವುದರಿಂದ ವಿಶೇಷ ಫಲವಿದೆ ಎಂದು ಪುರಾಣಗಳು ಸಾರಿ ಹೇಳುತ್ತಿವೆ. ಆಗ್ನೇಯ ಪುರಾಣದಲ್ಲಿ ಧನುರಾಶಿಯಲ್ಲಿ ಸೂರ್ಯನಿರುವಾಗ ಶ್ರೀಹರಿಗೆ ಹುಗ್ಗಿಯನ್ನು ಒಂದು ದಿನವಾದರೂ ಸಮರ್ಪಿಸುವ ಮನುಷ್ಯನು ಒಂದು ಸಾವಿರ ವರ್ಷಗಳವರೆಗೆ ಪೂಜೆ ಮಾಡಿದ ಫಲವನ್ನು ಪಡೆಯುವನು ಎಂದಿದೆ ಧನುರ್ಮಾಸದ ಒಂದು ತಿಂಗಳ ಕಾಲ ಪ್ರತಿದಿನ ಉಷಃಕಾಲದಲ್ಲಿ ಶ್ರೀಹರಿಗೆ ಹುಗ್ಗಿಯನ್ನು ಸಮರ್ಪಿಸುವುದರಿಂದ ಶ್ರೀಹರಿಯು ಸಂಪ್ರೀತನಾಗುವನು. ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ ಚಳಿಗಾಲದಲ್ಲಿ ದೇಹ ಎಣ್ಣೆ ಅಂಶ ಕಳೆದುಕೊಳ್ಳುವುದರಿಂದ ತುಪ್ಪವು ಅದನ್ನು ದೇಹಕ್ಕೆ ಒದಗಿಸುವುದು, ಮೆಣಸು, ಜೀರಿಗೆ ಇದು ಶೀತ ತಡೆಯುವುದು, ಕಫ, ವಾಂತಿ,ಪಿತ್ತ ನಿವಾರಿಸಿ ದೇಹಕ್ಕೆ ಉಷ್ಣವನ್ನು ನೀಡುವುದು ಹಾಗೂ ಹಸಿಶುಂಠಿ ಜೀರ್ಣ ಕ್ರಿಯೆಗೆ ಶ್ರೇಷ್ಠವಾದುದು. ಇನ್ನು ಈ ಕಾಲದ ಧನುರ್ವ್ಯತೀಪಾತ ಯೋಗವು ಸಹಸ್ರ ಅದೋದಯಕ್ಕೆ ಸಮಾನ. ಈ ದಿನ ಶ್ರಾದ್ಧ. ಪಿತೃತರ್ಪಣ ನೀಡಬೇಕು. ನೈವೇದ್ಯ ಮಾಡಿ ಭಗವಂತನಿಗೆ ಅರ್ಘ್ಯವನ್ನು ನೀಡಬೇಕು.

ಈ ಆಚರಣೆಯಲ್ಲಿ ಪಾರಮಾರ್ಥಿಕತೆ, ವೈಜ್ಞಾನಿಕತೆ, ಭಾವನಾತ್ಮಕ ಸಂಬಂಧವೆಲ್ಲ ಕೂಡಿಕೊಂಡು ಒಳ್ಳೆಯದನ್ನೇ ನೀಡುತ್ತದೆ. ದೇವರನ್ನು ಧ್ಯಾನಿಸಲು, ಪೂಜಿಸಲು ಧನುರ್ಮಾಸ

ಅತಿ ಶ್ರೇಷ್ಠವಾದುದಾಗಿದೆ. ಧನುರ್ಮಾಸದ ಈ ಮೂವತ್ತು ದಿನಗಳೂ ಶ್ರೀವೈಷ್ಣವ ದೇವಾಲಯಗಳಲ್ಲಿ ದಿನಕ್ಕೊಂದರಂತೆ ಮೂವತ್ತು ಶ್ಲೋಕಗಳನ್ನು ಪಾರಾಯಣ ಮಾಡಲಾಗುವುದು. ಪ್ರತೀ ದಿನ ಸಂಜೆ ಶ್ಲೋಕಗಳನ್ನು ಕುರಿತ ವಿಸ್ತಾರ ಉಪನ್ಯಾಸಗಳನ್ನೇರ್ಪಡಿಸಲಾಗುವುದು ಧನುರ್ಮಾಸವನ್ನು ಎಲ್ಲ ಹಿಂದೂ ದೇವಾಲಯಗಳಲ್ಲಿ ಆಚರಿಸಲಾಗುವುದು.

ಈ ಕಾಲದಲ್ಲಿ ಧನುರಾಶಿಯಲ್ಲಿ ರವಿ ಸಂಚರಿಸುವ ಮಾಸವಾದ್ದರಿಂದ ಧನುರ್ಮಾಸ ಎನ್ನುವರು ಭಗವದ್ಗೀತೆಯ 10 ನೇ ಅಧ್ಯಾಯದಲ್ಲಿ ಕೃಷ್ಣನು ಅರ್ಜುನನಿಗೆ ತಾನು ಎಲ್ಲೆಲ್ಲಿ ಇದ್ದೇನೆಂದೂ ವಿವರಿಸುತ್ತಾ ಮಾಸಾನಾಂ ಮಾರ್ಗಶಿಷೋರ್ಕ"ಎಂದಿದ್ದಾನೆ.

"ಅಂದರೆ ತಿಂಗಳುಗಳಲ್ಲಿ ಮಾರ್ಗಶೀರ್ಷ,ನಾನು ಋತುಗಳಲ್ಲಿ ವಸಂತಋತು"ಎಂದಿದ್ದಾನೆ. ಹಾಗಾಗಿ ಮಾರ್ಗಶೀರ್ಷ ತಿಂಗಳಿಗೆ ಅಷ್ಟು ಪ್ರಾಮುಖ್ಯತೆ.

ಬೆಳಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ದೇವರನ್ನು ಪೂಜಿಸಿ ಅರಳಿವೃಕ್ಷ ಹಾಗೂ ನಾಗರಕಟ್ಟೆ ಪ್ರದಕ್ಷಿಣೆ ಮಾಡುವುದು ವಿಶೇಷ. ವೃಕ್ಷಗಳ ರಾಜ ಅರಳಿ ಹಾಗೂ ರಾಣಿ ಬೇವಿನ ಮರ ಬೇವು ದುರ್ಗೆಯ ಪ್ರತೀಕ.ಇದನ್ನು ಪ್ರದಕ್ಷಿಣೆ ಮಾಡಿದರೆ ಮದುವೆಯಾಗುವುದು ಹಾಗೂ ಮಕ್ಕಳಾಗುವುದೆಂಬುದು ಧಾರ್ಮಿಕ ನಂಬಿಕೆ. ಆದರೂ ವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ ಬೇವು ಹಾಗೂ ಅರಳಿ ಮರದಿಂದ ಉತ್ತಮ ಆಮ್ಲಜನಕ ದೊರೆಯುವುದು. ಬೇವಿನ ಗಾಳಿಯಿಂದ ಸಕ್ಕರೆ ಕಾಯಿಲೆ, ಕಜ್ಜಿ, ಗಾಯಗಳು ಗುಣವಾಗುತ್ತದೆ. ಜೊತೆಗೆ ಅರಳಿ ಎಲೆ ತಿನ್ನುವುದರಿಂದ ವ್ಯಾಧಿ ನಿವಾರಣೆಯಾಗುವುದು. ಇದು ಶ್ವಾಸಕೋಶವನ್ನು ಶುದ್ಧಿ ಮಾಡಿ ಮೆದುಳನ್ನು ಚುರುಕುಗೊಳಿಸುತ್ತದೆ. ಎಂಬ ವಿವರಣೆಯನ್ನು ಹಿರಿಯರು ನೀಡುತ್ತಾರೆ.

ಒಟ್ಟಿನಲ್ಲಿ ಈ ಆಚರಣೆಯಲ್ಲಿ ಪಾರಮಾರ್ಥಿಕತೆ, ವೈಜ್ಞಾನಿಕತೆ,ಭಾವನಾತ್ಮಕ ಸಂಬಂಧವೆಲ್ಲಾ ಮಿಳಿತವಾಗಿದೆ.ಅರಳಿ ಮರದ ಗಾಳಿ ಸೇವನೆಯಿಂದ ಗರ್ಭಕೋಶದ ಸಮಸ್ಯೆಗಳೂ ದೂರವಾಗುವುದೆಂಬುದು ವೈಜ್ಞಾನಿಕ ಕಾರಣವಾದರೆ ರಾಹು, ಕೇತು,ಅಂಗಾರಕ ದೋಷ ನಿವಾರಣೆಯಾಗುತ್ತದೆ ಎನ್ನುವುದು ಪುರಾಣ. ಒಟ್ಟಿನಲ್ಲಿ ಕಾಕತಾಳೀಯವೆನ್ನುವಂತೆ ಒಳ್ಳೆಯದೇ ಆಗುತ್ತದೆ ಆದ್ದರಿಂದ "ಮೂಢನೇ ಆದರೂ ನಂಬಿಕೆ ಕಳೆದುಕೊಳ್ಳಬೇಡ ಎನ್ನುವರು ಹಿರಿಯರು.

## ಪ್ರಸಾದ

"ಧನುರ್ಮಾಸದ ಪೂಜೆಗೆ ಪೊಂಗಲ್ ಪ್ರಸಾದ. ಪ್ರಸಾದವಿಲ್ಲದೇ ಪೂಜೆ ಪರಿಸಮಾಪ್ತಿಯಾಗುವುದಿಲ್ಲ. ಪ್ರಸಾದದಲ್ಲಿ ಹರ್ವಿನಿವೇಧನಕ್ಕೆ ಹೆಚ್ಚು ಒತ್ತು 'ಹವಿಸ್ಸು ಎಂದರೆ ತುಪ್ಪ' ಮೇದಸ್ಸನ್ನು ವೃದ್ಧಿಸುವ ತುಪ್ಪ ಭಗವಂತನಿಗೆ ಶ್ರೇಷ್ಠ. ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ ಚಳಿಗಾಲದಲ್ಲಿ ದೇಹ ಎಣ್ಣೆ ಅಂಶ ಕಳೆದುಕೊಂಡಿರುತ್ತದಾದ್ದರಿಂದ ತುಪ್ಪವನ್ನು ಬಳಸಲಾಗುವುದೇನೋ ಎನಿಸುತ್ತದೆ. ಮೆಣಸು ಜೀರಿಗೆ ಇದು ಶೀತ ತಡೆಯುವುದು ಕಫ,ವಾಂತಿ,ಪಿತ್ತ ನಿವಾರಿಸುವುದು ಹಾಗೂ ಹಸಿಶುಂಠಿ ಜೀರ್ಣಕ್ರಿಯಗೆ ಶ್ರೇಷ್ಠವಾದುದು ಇದು ಮೊದಲ ಬೆಳೆಯಾದುದರಿಂದ,ಭತ್ತದಲ್ಲಿ ಗಂಜಿ ಹೆಚ್ಚಿರುವುದರಿಂದ ಪೊಂಗಲ್‌ಗೆ ಬಳಸಲಾಗುವುದು. ಮೊದಲ ಬೆಳೆಯನ್ನು ದೇವರಿಗೆ ಸಮರ್ಪಿಸ ಬೇಕೆನ್ನುವುದೂ ಒಂದು ಕಾರಣವಾಗಿದೆ ಎನ್ನುತ್ತಾರೆ.

"ಬ್ರಾಹ್ಮಿ ಮೂಹೂರ್ತದಲ್ಲಿ ದೇವಸ್ಥಾನಕ್ಕೆ ಹೋಗಬೇಕೆಂದೇನೂ ಇಲ್ಲ.ಮನೆಯಲ್ಲಿಯೇ ಕುಳಿತು ಪೂಜೆ ಮಾಡಲೂಬಹುದು. ಇದರಿಂದ ಮನಸ್ಸು ಹಗುರವಾಗುತ್ತದೆ" ಎನ್ನುವರು ರಾಜಮಣಿ ಹಿಂದೂ ಸಂಸ್ಕೃತಿ ಜಪ,ತಪ,ವ್ರತಗಳ ಬುನಾದಿಯಿಂದಲೇ, ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಭಗವಂತನೇ ಹಿಂದೂ ಸಂಪ್ರದಾಯದ ಕೇಂದ್ರಬಿಂದುವಾಗಿದ್ದಾನೆ. ಈ ಆಚರಣೆಗಳ ಹಿಂದೆ ಅರ್ಥಪೂರ್ಣತೆ, ಗಹನವಾದ ಕಾರಣ ಅಡಕವಾಗಿಯೇ ಇರುತ್ತದೆ.

## ಧನುರ್ಮಾಸದಲ್ಲಿ ಬ್ರಾಹ್ಮೀ ಮುಹೂರ್ತದಲ್ಲೇ ದೇವರನ್ನು ಪೂಜಿಸಬೇಕು

ದೇವಮಾನದ ಪ್ರಕಾರ ದಕ್ಷಿಣಾಯಣ ರಾತ್ರಿಯಾಗಿದ್ದು ಅದರ ಕೊನೆಯ ಸಮಯ ಬ್ರಾಹ್ಮೀ ಮುಹೂರ್ತದಲ್ಲಿ ವೈಕುಂಠದ ಬಾಗಿಲು ತರೆದಿರುತ್ತದೆ. ಉತ್ತರಾಯಣ ಪುಣ್ಯ ಕಾಲದಿಂದ ಹಗಲು ಪ್ರಾರಂಭವಾಗುವುದರಿಂದ ಅಂದರೆ 2 ಗಂಟೆಯ ರಾತ್ರಿಯ ಕೊನೆಯ ವೇಳೆಯಾಗಿ ಧನುರ್ಮಾಸವಾಗಿರುತ್ತದೆ. ಧನುರ್ಮಾಸ ಪ್ರಕಾರ ಈ ಸಮಯ ವಿಷ್ಣು ಏಳುವ ಸಮಯ ಆಗಿರುವುದರಿಂದ ಆ ವೇಳೆಯಲ್ಲಿಯೇ ದೇವತಾ ಪೂಜೆ ಮಾಡಬೇಕು.

# ಶ್ರೀ ವೈಕುಂಠದಾಸರು

- ಡಾ ರಾಮಚಂದ್ರ ದಾಸ್ ಸಿ.ಜೆ.
94833 84584

(ಕ್ರಿ.ಶ. (ಸುಮಾರು) 1450 - 1680)

ಹರಿದಾಸ ಸಾಹಿತ್ಯವು ಪ್ರಧಾನವಾಗಿ ಭಕ್ತಿಪರವಾದದ್ದು, ಭಗವದ್ಭಕ್ತನು ತನ್ನ ಆತ್ಮಶೋಧನೆಯನ್ನು ಮಾಡುತ್ತ, ಇಷ್ಟಾರ್ಥ ಸಿದ್ಧಿಯಾದ ಮೇಲೆ ತನ್ನ ದಿವ್ಯಾನುಭವವನ್ನು ಇತರರಿಗೂ ಕೃತಿಗಳ ಮೂಲಕ ತಿಳಿಯ ಹೇಳಿ ಸಮಸ್ತರನ್ನೂ ಸಮದೃಷ್ಟಿಯಿಂದ ಸಮೀಕ್ಷಿಸಿದಾಗ, ಅಲ್ಲಿ ಆಯಾ ಹರಿದಾಸರ ಆತ್ಮಶೋಧನೆ, ಅಪರೋಕ್ಷಾನುಭವ, ಅವರು ಭಗವಂತನನ್ನು ಆರಾಧಿಸುವ ನಾನಾ ವಿಧಗಳು ಗೋಚರವಾಗುತ್ತವೆ.ಇಂತಹ ಕೀರ್ತನ ಸಾಹಿತ್ಯದ ಮೂಲಕ ಗುರುತಿಸಿಕೊಂಡವರಲ್ಲಿ ಬೇಲೂರಿನ ಶ್ರೀವೈಕುಂಠದಾಸರು ಒಬ್ಬರು. ಇವರು ಶ್ರೀವೈಷ್ಣವ ಹರಿದಾಸರು, ಭಗವಂತನಲ್ಲಿ ಭಕ್ತಿ ಮಾಡಲು ಜಾತಿ, ಮತ, ಪಂಥ,ಇತ್ಯಾದಿಗಳ ಎಲ್ಲೆಯನ್ನು ಮೀರಿ ನಿಂತ ಭಕ್ತಿ ಪಂಥವೇ "ಹರಿದಾಸ ಪಂಥ". ಇವರನ್ನು ಶ್ರೀವಾದಿರಾಜರು,ಪುರಂದರದಾಸರು (1484) ಕನಕದಾಸರು(1488) ತೆಲುಗಿನ ತಾಳ್ಳಪಾಕಂ ಮನೆತನದ ಚಿನ್ನಯ್ಯ (ಅನ್ನಮಾಚಾರ್ಯರ ಮೊಮ್ಮಗ) (1498) ಮುಂತಾದವರುಗಳಿಂದ ಸ್ತುತಿಸಲ್ಪಟ್ಟ ಪ್ರಮುಖ ಹಿರಿಯ ಹರಿದಾಸರು ಎಂಬುದಾಗಿ ಪ್ರಖ್ಯಾತರಾಗಿದ್ದಾರೆ. ಇವರು ಕನ್ನಡ ಹರಿದಾಸ ಸಾಹಿತ್ಯಕ್ಕೆ ಚಿರಪರಿಚಿತರು.

ವಿದ್ವಾಂಸರು, ವೈಕುಂಠದಾಸರ ತಂದೆ ತಾಯಿಗಳ ಬಗ್ಗೆ ನಿರ್ದಿಷ್ಟವಾದ ಮಾಹಿತಿ ದೊರೆತಿರುವುದಿಲ್ಲ. ಹಾಗಾಗಿ ಇವರಿಗೆ ತಂದೆ ತಾಯಿಗಳಿಂದ ನಾಮಕರಣವಾದ ಬೇರೆ ಹೆಸರಿರಬಹುದು ಎಂಬುದನ್ನು ಖಚಿತ ಪಡಿಸಲಾಗುವುದಿಲ್ಲ ಎಂದಿದ್ದಾರೆ ವಿದ್ವಾಂಸರುಗಳು.ಎಲ್ಲ ಗ್ರಂಥಗಳು ಕೃತಿಗಳಲ್ಲಿ ಇವರ ಹೆಸರನ್ನು "ಬೇಲೂರು ವೈಕುಂಠದಾಸರು" ಎಂದು ಹೆಸರಿಸಿಕೊಂಡು ಬಂದಿರುವುದರಿಂದ, ಇದೇ ಹೆಸರೇ ಶಾಶ್ವತವಾಗಿ ಚರಿತ್ರೆಯಲ್ಲಿ ಉಳಿದು ಹೋಗಿದೆ. ದಾಸರಿಗೆ ಗುರುಗಳು ಯಾರಾಗಿದ್ದರೆಂಬುದು ಸಂಶೋಧನೆಯಿಂದ ಇನ್ನು ಖಚಿತವಾಗಬೇಕಾಗಿದೆ ಎನ್ನಲಾಗಿದೆ.

ದಾಸರ ಕಾಲದ ಬಗೆಗೂ ಎಲ್ಲಿಯೂ ಖಚಿತವಾದ ದಾಖಲೆಗಳು ಲಭ್ಯವಿಲ್ಲ. ವಿದ್ವಾಂಸರ ಊಹೆಯ ಪ್ರಕಾರ ಸುಮಾರು ಕ್ರಿ.ಶ. 1450 - 1680 ಆಗಿರಬಹುದು ಎಂಬುದಾಗಿದೆ. ಈ ಎಲ್ಲ ಅಂಶಗಳ ಆಧಾರದ ಮೇಲೆ ಇವರನ್ನು ವ್ಯಾಸರಾಯರ (ಕ್ರಿ.ಶ. 1447-1539) ಸಮಕಾಲೀನರು ಎಂದು ನಿರ್ಧರಿಸುವುದು ಹೆಚ್ಚು ಸೂಕ್ತವೆನಿಸುತ್ತದೆ.

ವಿಶೇಷವೆಂದರೆ ಎಲ್ಲ ಹರಿದಾಸರಂತೆ ಇವರು ದೇಶ ಪರ್ಯಟನೆ ಮಾಡಿದವರಲ್ಲ, ಬೇಲೂರಿನಲ್ಲಿ ಜನಿಸಿ, ಅಲ್ಲಿಯೇ ಬೆಳೆದು, ಅಲ್ಲಿಂದಲೇ ಪರಮ ಪದವನ್ನು ಸೇರಿದವರು.ಇವರು ಅರ್ಜುನಾಂಶ ಸಂಭೂತರು ಎನ್ನುವುದು ಆಸ್ತಿಕರೆಲ್ಲರ ಅಭಿಪ್ರಾಯ.ಇದಕ್ಕೆ ಪೂರಕವೆನ್ನುವಂತೆ ಶ್ರೀ ಹರಿಯು ಮಗುವಾಗಿ ಇವರ ಜೊತೆಗೆ ಸದಾ ಆಡಿ ನಲಿಸುತ್ತಿದ್ದುದು. ಇದು ಅನೇಕ ಕೃತಿಗಳಿಂದಲೂ ದೃಢವಾಗಿದೆ.

"ಬೇಲೂರು" ಎನ್ನುವುದು ಸಂಸ್ಕೃತದ ವೇಲಾಪುರಿ ಎಂಬ ಮೂಲ ಪದದ ತದ್ಭವ ರೂಪ. ಇಲ್ಲಿನ ಕ್ಷೇತ್ರ ಸ್ವಾಮಿ ಕೇಶವನಾಗಿದ್ದು, ಗೌತಮ ಮಹಾಮುನಿಗಳ ಉಪಾಸಿತ ಮೂರ್ತಿಯೆಂದು ಸ್ಥಳ ಪುರಾಣದಲ್ಲಿ ಸೂಚಿತವಾಗಿದೆ. ಆ ಮೂರ್ತಿಯು ಚಂದ್ರದ್ರೋಣಾ ಪರ್ವತ ಪ್ರಾಂತದಲ್ಲಿ ಭೂಗತವಾಗಿತ್ತೆಂದು ಉಲ್ಲೇಖಿತವಾಗಿದೆ. ವಿಷ್ಣುವರ್ಧನ ಮಹಾರಾಜನು ಶ್ರೀರಾಮಾನುಜಾಚಾರ್ಯರ ಶಿಷ್ಯನಾಗಿ ವೈಷ್ಣವ ಮತವನ್ನು ಅವಲಂಭಿಸಿದ ಮೇಲೆ, ಬೇಲೂರಿನಲ್ಲಿ ಕಲಾವೈಶಿಷ್ಟ್ಯತೆಗೆ ಸಾಕ್ಷಿಯಾದ ಭವ್ಯ ದೇವಾಲಯವನ್ನು ನಿರ್ಮಿಸಿ ಕೇಶವನ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಷ್ಣು ಸಮುದ್ರವನ್ನೂ ನಿರ್ಮಿಸಿ, ಅನೇಕ ಜಹಗೀರುಗಳನ್ನು, ಅಪರಿಮಿತವಾದ ಅನರ್ಘ್ಯ ಆಭರಣಗಳನ್ನು ಸ್ವಾಮಿಗೆ ಕಾಣಿಕೆಯಾಗಿ ನೀಡಿದನೆಂದು ಚರಿತ್ರೆಯಲ್ಲಿ ಹೇಳಿದೆ.

ಭಕ್ತರು ಕೇಶವನ ದರ್ಶನದ ಸಮಯದಲ್ಲಿ

"ನಮಃ ಕೇಶವನಾಥಾಯ ನಯನಾನಂದ ಮೂರ್ತಯೇ।
ವೇಲಾಪುರಿ ನಿವಾಸಾಯ ಸತ್ಯ ಜ್ಞಾನಾನಿ ವಿಷ್ಣುವೇ॥

ಎಂಬುದಾಗಿ ಸ್ತುತಿಸುತ್ತಾರೆ.

ದಾಸರ ತಂದೆ, ತಾಯಿ ಪತ್ನಿಯ ಬಗ್ಗೆ ನಿಖರವಾದ ಮಾಹಿತಿಗಳಿಲ್ಲವೆಂಬುದರ ಕಾರಣದಿಂದ, ಕೆಲವರು ಕೃತಿಗಳನ್ನು ಆಧರಿಸಿ, ಶ್ರೀ ಬೇಲೂರು ಕೇಶವದಾಸರು ಪ್ರಚುರ ಪಡಿಸಿದನ್ವಯ ಇವರ ಹೆಸರು ಕೇಶವ ಅಯ್ಯಂಗಾರ್ ಎಂದೂ, ಪತ್ನಿಯ ಹೆಸರು ಸೌಮ್ಯನಾಯಕಿಯೆಂದಿದೆ. ಇವರು ವೇದಾಧ್ಯಯನ,ಕಾವ್ಯಾಭ್ಯಾಸಗಳಿಂದ ಪ್ರೌಢಿಮೆ ಹೊಂದ್ದಿದರೂ, ಮೂಕನಂತೆ ಇರುತ್ತಿದ್ದರು.

ಭಗವಂತನ ಹೆಸರೆತ್ತಿದ್ದರೆ "ನಾನು ಕೇಶವನನ್ನು ಕಂಡು, ಆತನ ಸಖ, ಶಿಷ್ಯ, ಸೇವಕನಂತೆ ನಲಿದಾಡಬೇಕು." ಎನ್ನುತ್ತಿದ್ದರು. ಕಾಲಾಂತರದಲ್ಲಿ ಸೌಮ್ಯನಾಯಕಿಯೊಡನೆ ವಿವಾಹವಾಯಿತು. ಈಕೆಯು ಉಲೂಪಿಯ ಅಂಶಜಳೆಂದು ಆಪ್ತ ವಚನಗಳಿವೆ. ಇವರಿಗೆ ಒಬ್ಬ ಹೆಣ್ಣು ಮಗಳಿದ್ದಳೆಂದು ತಿಳಿದು ಬರುತ್ತದೆ. ದಂಪತಿಗಳ ಕಠಿಣ ಸೇವೆಯಿಂದ ಕೇಶವನ ಅನುಗ್ರಹ

ಮತ್ತು ಸಾಕ್ಷಾತ್ಕಾರವಾದಂದಿನಿಂದ "ವೈಕುಂಠ ಕೇಶವ" ಮುದ್ರಿಕೆಯಿಂದ ದೇವರನ್ನು ಸ್ತುತಿಸುತ್ತಿದ್ದುದರಿಂದ "ವೈಕುಂಠದಾಸ" ರೆಂದು ಹೆಸರಾಯಿತು.

ಬೇಲೂರು ಹೊಯ್ಸಳರ ರಾಜಧಾನಿಯಾಗಿದ್ದ ಕಾರಣ ದೊಡ್ಡ ವಿದ್ಯಾಕೇಂದ್ರವಾಗಿ, ಅನೇಕ ಸತ್ಪುರುಷರು, ಕವಿಗಳೂ ಅಲ್ಲಿ ಜನ್ಮತಾಳಿದ್ದು, ಶ್ರೀವ್ಯಾಸರಾಯರು, ಶ್ರೀ ವಾದಿರಾಜರಾದಿಯಾಗಿ ಅನೇಕ ದಾಸರುಗಳು ಅಲ್ಲಿ ಭಗವಂತನೊಡನೆ ವಿಹರಿಸಿದ್ದರಿಂದ ಪಂಢರಪುರ, ತಿರುಪತಿ ಕ್ಷೇತ್ರಗಳ ಪಂಕ್ತಿಯಲ್ಲಿ ಬೇಲೂರು ಸೇರಿ "ಭೂವೈಕುಂಠವೆನಿಸಿ ಅನೇಕ ಹರಿದಾಸರುಗಳಿಗೆ ಮುಖ್ಯಸ್ಥಾನವೆನಿಸಿದ್ದರಿಂದ ಇವರ ಹೆಸರು ವೈಕುಂಠ ದಾಸ"ರೆಂಬುದು ಅನ್ವರ್ಥಕನಾಮವಾಯಿತು ಎಂದು ಭಾವಿಸಲಾಯಿತು.

ದಂಪತಿಗಳು ಕಠಿಣವ್ರತದಿಂದ ಕೇಶವನ ಸೇವೆ ಮಾಡ ತೊಡಗಿದ್ದರಿಂದ ಕೇಶವನು ವೈಕುಂಠದಾಸರ ಸಖ, ಸ್ವಾಮಿ ಮತ್ತು ಸೇವಕನಾಗಿ ನಿತ್ಯ ಅನುಗ್ರಹಿಸುತ್ತಿದ್ದನು. ಶ್ರೀವೈಷ್ಣವರಿಗೆ ಶ್ರೀರಂಗ ಮತ್ತು ಕಾಂಚೀಪುರ ಯಾತ್ರೆಯೆಂದರೆ ಭಕ್ತಿ ಭಾವದಿಂದ ಮೈಮರೆಯುತ್ತಾರೆ. ದಾಸರು ಶ್ರೀರಂಗ ಯಾತ್ರೆ ಮಾಡಬೇಕೆಂದು ಒಬ್ಬಂಟಿಯಾಗಿ ಹೊರಟ ಕೆಲವೇ ಹೊತ್ತಿನಲ್ಲಿ ಮಾರ್ಗಮಧ್ಯದಲ್ಲಿ ಅತಿಯಾದ ಮಳೆ ಗಾಳಿಯ ಜೊತೆಗೆ ವ್ಯಾಘ್ರ, ಭಲ್ಲೋಕಗಳ ರೂಪದಿಂದ ಭಗವಂತನು ಭಯ ಪ್ರದರ್ಶನ ಮಾಡಿದನು. ಆಗ ದಾಸರು "ಇದೇನು ಸ್ವಾಮಿ ನಿನ್ನ ಚಿತ್ತಕ್ಕೆ ಈ ಯಾತ್ರೆಯು ಬಂದಿಲ್ಲವೇ? ಎಂದು ಸ್ತುತಿಸಿದಾಗ, ಕೇಶವನು ಬ್ರಾಹ್ಮಣ ರೂಪದಿಂದ ದರ್ಶನವಿತ್ತು "ನಾನಿರುವ ಸ್ಥಳವು ಶ್ರೀರಂಗವಲ್ಲವೇ? ಎಂದು ನುಡಿದು ಅದೃಶ್ಯನಾದನು. ಆಗ ದಾಸರು ತಮಗುಂಟಾದ ಸಂದೇಹಕ್ಕೆ ಪಶ್ಚಾತ್ತಾಪಪಟ್ಟು ಕ್ಷಮೆಯಾಚಿಸಿದರು. ಅನಂತರ ದಾಸರು ಬೇಲೂರನ್ನು ಬಿಟ್ಟು ಪದಚಲನೆ ಮಾಡಲಿಲ್ಲ. ಆ ಯಾತ್ರೆ ನಿಮಿತ್ತ ಅವರು ಚಲಿಸಿದ 10 ಮೈಲಿ ಯಾತ್ರೆಯೇ ಮಹಾಯಾತ್ರೆಯಾಗಿ ಪರಿಣಮಿಸಿತು. ಈ ವಿಷಯ ವನ್ನು ದಾಸರು "ಶ್ರೀರಂಗಯಾತ್ರೆಯನ್ನು ಮಾಡಿ ಬಾರೆಂದೆನ್ನ" ಎಂಬ ಕೃತಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಭಗವಂತನಿಗೆ ತನ್ನನ್ನು ಹೊಗಳುವುದಕ್ಕಿಂತ ತನ್ನ ಭಕ್ತರನ್ನು ಕೊಂಡಾಡಿದರೆ ಬಹಳ ಪ್ರೀತಿಯಾಗುತ್ತದೆ ಎನ್ನುವ ಅಂಶ ಪುರಾಣಗಳಲ್ಲಿ ದೊರೆಯುತ್ತದೆ. ಎಲ್ಲ ದಾಸರಾಯರ ಜೀವನದಲ್ಲಿ ನಡೆದ ಅತಿಮಾನುಷ ಘಟನೆಗಳು ಇದಕ್ಕೆ ಸಾಕ್ಷೀಭೂತವಾಗಿವೆ. ಆ ಘಟನೆಗಳು ಲೌಕಿಕ ಕಾರಣ ಕ್ಕಾಗಿಲ್ಲದೆ, ಆಸ್ತಿಕರ ಉದ್ಧಾರಕ್ಕೆ ದಾರಿ ದೀಪವಾಗುವಂತಿರುತ್ತದೆ. ಇವುಗ ಳಿಗೆ ಶಾಸ್ತ್ರದ ಹಿನ್ನೆಲೆ, ಪೂರ್ವಾಪರ ಕಾರಣಗಳಿಂದ ಆ ಕಾರ್ಯವಾಗಿ ರುತ್ತದೆ. ದಾಸರ ಶ್ರೀರಂಗ ಯಾತ್ರೆಗೆ ವಿಘ್ನವುಂಟಾಗಿ ನಂತರದ ದಿನ ಮಾನಗಳಲ್ಲಿ ಬೇಲೂರಿನಿಂದಾಚೆ ಹೋಗಲೇ ಇಲ್ಲವೆಂದರೆ, ಭಗ ವಂತನು ಸರ್ವತ್ರ ವ್ಯಾಪ್ತ, ಭಕ್ತಿಯಿಂದ ಉಪಾಸಿಸಿದರೆ ಕರೆದಲ್ಲಿಗೇ ಬರುವ ಎಂಬ ಅಂಶವನ್ನು ನಾವು ಅರಿಯಬಹುದಾಗಿದೆ. ಇದಕ್ಕೆ ಪೂರಕವಾದಂತಹ ಅನೇಕ ಘಟನೆಗಳನ್ನು ದಾಸರ ಜೀವನದಲ್ಲಿ ಕಾಣಬಹುದಾಗಿದೆ.

ಕಾಲಾನುಕ್ರಮವಾಗಿ ದಾಸರ ಮನೆಯಲ್ಲಿ ಪಿತೃ ಶ್ರಾದ್ಧಕಾರ್ಯ ವೊದಗಿತು. ಮುಂಚಿತವಾಗಿ ಬ್ರಾಹ್ಮಣರಿಗೆ ಆಮಂತ್ರಣ ಕೊಡಲು ಪ್ರಯತ್ನಿಸಲಾಗಿ, ಕಷ್ಟ ಸಾಧ್ಯದಿಂದ ಪಕ್ಕದ ಹಳ್ಳಿಯ ಒಬ್ಬ ಬ್ರಾಹ್ಮಣರು ದೊರೆತರೂ, ಮಳೆಯ ಕಾರಣದಿಂದಾಗಿ ಅವರು ಬಾರದೆ ಇದ್ದಾಗ, ದಾಸರು ದಿಕ್ಕು ತೋಚದೆ ಕುಳಿತುಬಿಟ್ಟರು. ಭಕ್ತಾನುಕಂಪಿಯಾದ ಕೇಶವನೇ ದಕ್ಷಿಣ ದೇಶದ ಬ್ರಾಹ್ಮಣರಂತೆ ವೇಷಧರಿಸಿ ದಾಸರ ಮನೆಗೆ ಬಂದು ಶ್ರಾದ್ಧಕಾರ್ಯದ ಆತಿಥ್ಯ ಸ್ವೀಕರಿಸಿ, ದಾಸರು ಕೊಟ್ಟ ಧೋತ್ರ, ದಕ್ಷಿಣೆ ಮುಂತಾದವುಗಳನ್ನು ತೆಗೆದು ಕೊಂಡು ದೇವಾಲಯದಲ್ಲಿ ತನ್ನ ವಿಗ್ರಹದ ಪಾದದ ಬಳಿ ಇಟ್ಟು ಅದೃಶ್ಯ ನಾದನು. ಸಂಜೆಯ ಪೂಜೆಗೆಂದು ಬಾಗಿಲು ತೆಗೆದಾಗ ವಿಗ್ರಹದ ಪಾದದಡಿ ಧೋತ್ರ ದಕ್ಷಿಣೆ ಮುಂತಾದುವುಗಳನ್ನು ಕಂಡು ಮೂಕವಿಸ್ಮಿತರಾದರು.

ಇಂತಹ ವಿಚಿತ್ರ ಕಾರ್ಯಗಳು ಆಗಾಗ ನಡೆಯುತ್ತಿದ್ದುದರಿಂದ ದಾಸರನ್ನು ವಿಚಾರಿಸಲಾಗಿ,ಅವರು ಬಂದು ನೋಡಿ ಪುಳಕಾಂಕಿತರಾಗಿ ಬ್ರಾಹ್ಮಣನಾಗಿ ಶ್ರಾದ್ಧಕ್ಕೆ ನೀನೇ ಬಂದು, ದಾನ, ಧೋತ್ರ ಸ್ವೀಕರಿಸಿದ್ದೀಯೆ. ನೀನು ಸಖನಹುದು ಸ್ವಾಮಿ ಎಂದು ಭಕ್ತಿಯಿಂದ "ನೀನೇ ಶ್ರಾದ್ಧಕ್ಕೆ ಬಂದವ ದೇವರ ದೇವ ನಾನರಿಯೆ ಎನ್ನ ಗೃಹಕ್ಕೆ ವೈಷ್ಣವನಾಗಿ" ಎಂಬುದಾಗಿ ಭಕ್ತಿ ಪರವಶರಾಗಿ ಸ್ತುತಿಸಿದರು.

ದಾಸರ ಮಹಿಮೆಯನ್ನು ಕಂಡ ಅಧಿಕಾರಿಗಳು ಒಬ್ಬ ದೀವಟಿಗನು ದಾಸರಿಗೆ ಸದಾ ಸಹಾಯಕನಾಗಿರುವಂತೆ, ಗೌರವ ಪೂರ್ವಕ ನೇಮಿಸಿದ್ದರು. ಹೀಗಿರಲು ಒಮ್ಮೆ ರಾತ್ರಿ ಉತ್ಸವ ಪೂರೈಸಿಕೊಂಡು ಮನೆಗೆ ಹೋಗುವ ಸಮಯದಲ್ಲಿ ವಿಪರೀತ ಮಳೆ ಬಂದುದರಿಂದ ಆ ದೀವಟಿಗನು ಬರಲಿಲ್ಲ. ಆಗ ಕೇಶವನೇ ದೀವಟಿಗನ ವೇಷದಿಂದ ಬಂದು ದಾಸರನ್ನು ಮನೆಗೆ ತಲುಪಿಸಿ ಅದೃಶ್ಯನಾದನು. ಅಚ್ಚರಿಯಿಂದ ದಾಸರು ಧ್ಯಾನಿಸಿ ಪ್ರೇಮಾಶ್ರು ಪೂರಿತರಾಗಿ ಏನು ಕಾರಣವೆನಗೆ ತಿಳಿಯದೋ ಇದು ದೇವ ನೀನುದ್ಧರಿಸು ವುದಕೋ ಕೆಡಿಪುದಕೋ ಹರಿಯೇ" ಎಂದು ಪ್ರಾರ್ಥಿಸಿದರು. ಕೆಲಕಾಲದ ನಂತರ ಅದೇ ಪರಿಸ್ಥಿತಿಯಲ್ಲಿ ಪುನಃ ಕೇಶವನೇ ದೀವಟಿಗನ ವೇಷದಿಂದ, ದಾಸರನ್ನು ಮನೆಗೆ ತಲುಪಿಸಿ, ತನಗೆ ಹಸಿವಾಗುತ್ತಿದೆಯೆಂದು ಕೇಳಿ ದಾಸರು ಕೊಟ್ಟ ಅನ್ನ ಮತ್ತು ಕಜ್ಜಾಯ (ಸಜ್ಜಪ್ಪ)ವನ್ನು ತೆಗೆದುಕೊಂಡು ದೇವಸ್ಥಾನ ದಲ್ಲಿ,ಅದರಲ್ಲಿನ ಅರ್ಧ ಭಾಗವನ್ನು ಸೌಮ್ಯನಾಯಕಿಯ (ಅಮ್ಮನವರ ) ಮತ್ತು ಉಳಿದರ್ಧವನ್ನು ತನ್ನ ಪೀಠದ ಬಳಿ ಇಟ್ಟು ಅದೃಶ್ಯನಾದನು, ಮರುದಿನ ಈ ಕೌತುಕವನ್ನು ಕಂಡ ದಾಸರು "ಕೊಟ್ಟಕಜ್ಜಾಯ ಅನ್ನವನ್ನು ಶೆರಗೊಡ್ಡಿ" ಎಂದು ಸ್ತುತಿಸುತ್ತಾ ಭಾವ ಪರವಶರಾದರು.

ದಾಸರು ಗೋದಾನ ಮಾಡಬೇಕೆಂದು ಇಚ್ಛಿಸಿದಾಗ ಗೋವುಗಳ ಸಂಖ್ಯೆಗೆ ತಕ್ಕಷ್ಟು ಬ್ರಾಹ್ಮಣರ ರೂಪದಿಂದ ಲೀಲಾಮಾನುಷ ವಿಗ್ರಹನಾದ ಕೇಶವನೇ, ಗೋವುಗಳನ್ನು ಸ್ವೀಕರಿಸಿ ಎಲ್ಲ ಗೋವುಗಳನ್ನು ದೇವಾಲಯದ ಗರ್ಭಾರಕಣದಲ್ಲಿ ಕೂಡಿ ಹಾಕಿ ಅದೃಶ್ಯನಾದನು. ಮರುದಿನ ಅಧಿಕಾರಿ ಗಳು ದೇವಾಲಯದ ಬಾಗಿಲು ತೆರೆದಾಗ ಹಸುಗಳಿದ್ದುದನ್ನು ಕಂಡು ದಾಸ

ರನ್ನು ವಿಚಾರಿಸಲಾಗಿ "ಆಕಟಕಟ ಬಹಳ ಬಡತನ ಬಂದುದೇ ನಿನಗೆ" ಎಂದು ಅಶ್ರುಧಾರೆ ಸುರಿಸುತ್ತಾ ಪ್ರಾರ್ಥಿಸಿದರು.

ಅಚಲಾನಂದ ದಾಸರ ಶಿಷ್ಯ ಸಂತತಿಗೆ ಸೇರಿಸಿದವರಲ್ಲಿ ಅಚ್ಯುತ ದಾಸರೂ ಒಬ್ಬರು, ಇವರಿಗೆ ಭಗವದನುಗ್ರಹದ ವಿನಾ, ಇತರ ಸೌಭಾಗ್ಯ ಗಳಿಗೆ ಕೊರತೆ ಇರಲಿಲ್ಲ. ಇವರು ಪಂಡಿತರನ್ನು ಕೆಣಕಿ,ಸೋಲಿಸಿ ಜಯ ಪತ್ರಿಕೆ, ಬಿರುದಾವಳಿಗಳನ್ನು ಪಡೆಯುತ್ತಿದ್ದರು. ಇವರು ವೈಕುಂಠದಾಸ ರನ್ನು ವಾಕ್ಯಾರ್ಥಕ್ಕೆ ಕರೆದಾಗ ದಾಸರು ಇವರ ದಾರ್ಷ್ಟ್ಯತನವನ್ನು ಕಂಡು" ವಾಕ್ಯಾರ್ಥಗಳು ಕೇವಲ ಅರ್ಥಸಿದ್ದಿಗಾಗಿ, ಆದರೆ ಸಿದ್ದಾರ್ಥರಿಗೆ ವಾಕ್ಯಾ ರ್ಥದ ಅವಶ್ಯಕತೆ ಇಲ್ಲ. ನನ್ನೊಡನೆ ನಿಮ್ಮವಾಕ್ಯಾರ್ಥವೆಂದರೆ ಕಣ್ಣುಚ್ಚಿ ಬಾಯ್ಬಿಗಿದು ಕೂಡುವುದು" ಎಂದರು. ತಕ್ಷಣವೇ ಅಚ್ಯುತದಾಸರಿಗೆ ಕಣ್ಣು ಕಾಣದಂತಾಗಿ ನಾಲಿಗೆ ಚಲಿಸದೆ ಕೈಸನ್ನೆ, ಬಾಯ್ಸನ್ನೆಗಾರಂಭವಾಯಿತು. ಇದು ಸ್ವೋತ್ತಮ ದ್ರೋಹದ ಫಲವೆಂದು ಅರಿವಾಗಿ ವೈಕುಂಠದಾಸರಲ್ಲಿ ಶರಣಾದರು.

ಕರುಣಾಮಯಿಗಳಾದ ದಾಸರು ಕೇಶವನನ್ನು ಸ್ತುತಿಸುತ್ತಾ" ನನ್ನ ಬಾಯಿಯಿಂದ ಇಂತಹ ಮಾತುಗಳನ್ನು ನುಡಿಸಿದವನೂ ನೀನೆ, ಅದನ್ನು ಸತ್ಯ ಮಾಡಿದವನೂ ನೀನೇ, ಸ್ವಾಮಿ,ನಿನ್ನ ದರ್ಶನಕ್ಕೆ ಬಂದರೆ ಕಣ್ಣು ನಾಲಿಗೆ ಹೋಗುವುದೆಂಬ ಅಪಕೀರ್ತಿ ನಿನಗೆ ಬರಬಾರದಲ್ಲವೇ ಅದಕ್ಕಾಗಿ ಇವರಿಗೆ "ಪಾಲಿಸುವುದು ನಯನಗಳ ನಾಲಿಗೆಯ ನೀಗ" ಎಂದು ಆರ್ತ ರಾಗಿ ಪ್ರಾರ್ಥಿಸಿದಾಗ, ಅಚ್ಯುತದಾಸರು ಮೊದಲಿನಂತಾದಾಗ, ದಾಸರಿಗೆ ಶರಣಾಗಿ ತಮ್ಮ ಬಿರುದಾವಳಿಗಳನ್ನೆಲ್ಲಾ ಅವರಿಗೆ ಒಪ್ಪಿಸಿ "ಅರಿಯ ದಪ ರಾಧಕೊಡ್ಡಿದೆನೊಡಲನು" ಎಂದು ಸ್ತೋತ್ರ ಮಾಡಿದರು. ದಾಸರು ಆ ಬಿರುದಾವಳಿಗಳನ್ನೆಲ್ಲಾ ಕೇಶವನಿಗೆ ಒಪ್ಪಿಸಿ ಬಿಟ್ಟು ಧನ್ಯರಾದರು.

ಕುರುಕ್ಷೇತ್ರ ಯುದ್ಧದ ಸಮಯದಲ್ಲಿ, ನರಾವೇಶಯುಕ್ತನಾದ ಅರ್ಜುನನ ಪ್ರಾರ್ಥನೆಯ ಮೇರೆಗೆ ಋಜುಗಣದರಸರಾದ ವಾಯು ದೇವರು ಹನುಮಂತನ ರೂಪದಿಂದ ಅರ್ಜುನನ ರಥದ ಮೇಲೆ ಧ್ವಜ ದಲ್ಲಿದ್ದು ಶ್ರೀಕೃಷ್ಣನ ದಯದಿಂದ ಅವನನ್ನು ರಕ್ಷಿಸಿದ್ದು, ಪ್ರಸ್ತುತದಲ್ಲಿ ಅರ್ಜುನನೇ ವೈಕುಂಠದಾಸರಾಗಿ ಋಜುಗಣಸ್ಥರಾದ ಲಾತವ್ಯರೇ ವಾದಿ ರಾಜರಾಗಿ ಅವತರಿಸಿದ್ದು ಇವರಿಬ್ಬರ ಸಂಗಮದಿಂದ ಅನೇಕ ಮಹಿಮಾ ವಿಶೇಷಗಳು ನಡೆದಿದ್ದವು.

ಒಮ್ಮೆ ದಾಸರು ಕೇಶವನ ಶ್ರೀ ಕೃಷ್ಣಾವತಾರದ ಬಾಲಲೀಲೆಯ ಸುಖಾನುಭವ ಮಾಡುತ್ತ ಮನೆಯಲ್ಲಿಯೇ ನಿಂತುಬಿಟ್ಟರು. ದಾಸರನ್ನು ಬಿಟ್ಟಿರಲಾಗದೇ ವಾದಿರಾಜರೇ ದಾಸರ ಮನೆಗೆ ಬಂದಾಗ ಶ್ರೀ ಹರಿಯು ಶಿಶುವಾಗಿ ದಾಸರ ತೊಡೆಯ ಮೇಲೆ ಮಲಗಿ ಕ್ರೀಡಿಸುತ್ತಿದ್ದುದನ್ನು ಕಂಡ ವಾದಿರಾಜರು ನಸು ನಕ್ಕರು.ಆಗ ದಾಸರು ಮಗುವು ಕಾಣಯ್ಯ ಮಾಯದ ಮಗುವು ಕಾಣಯ್ಯ" ಎಂದು ಹಾಡಿದಾಗ, ವಾದಿರಾಜರು "ದಾಸೋ ತ್ತಮ ನೀನೆ ಶ್ರೀ ವೈಕುಂಠ ದಾಸೋತ್ತಮ ನೀನೆ" ಎಂದು ಹಾಡಿದಾಗ, ದಾಸರ ಮೈನಡುಗಿ "ಕೊಂಡಾಡಬಹುದೇ ಯತೀಂದ್ರ ಎನ್ನ"ಎಂದು ಸಾಷ್ಟಾಂಗ ನಮಸ್ಕಾರ ಮಾಡಿದರು.

ಹರಿದಾಸರ ವರ್ಚಸ್ಸವು ಸಮಾಜದ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿದೆ ಎಂಬುದನ್ನು ಅಚ್ಯುತದಾಸರ "ನಿನಗಲ್ಲ ದಾರಿಗಳ ವಡುವದಯ್ಯ" ಎಂಬ ಕೃತಿಯಿಂದರಿಯಬಹುದಾಗಿದೆ.

ಮಹಾಭಾರತ ಯುದ್ಧ ಕಾಲದಲ್ಲಿ ನೀನು ತೋರಿದ ವಿಶ್ವರೂಪ ವನ್ನು ಇನ್ನೊಮ್ಮೆ ನೋಡಬೇಕೆಂಬ ಬಯಕೆಯಾಗಿದೆ. ತೋರುವೆಯಾ, ಸ್ವಾಮಿ ಎಂಬ ದಾಸರ ಪ್ರಾರ್ಥನೆಯಂತೆ, ವಿಶ್ವರೂಪ ತೋರಿದಾಗ ಎರಡು ದಿನಗಳಾದರೂ ಆ ದರ್ಶನಾನಂದದಿಂದ ಹೊರಬಂದಿರ ಲಿಲ್ಲವೆಂಬ ಆಪ್ತ ವಾಕ್ಯವಿದೆ.

ಕನಕದಾಸರು ಮತ್ತು ವೈಕುಂಠದಾಸರು ಇಬ್ಬರೂ ಕೇಶವನ ಉಪಾಸಕರು. ಕೇಶವನೇ ಬಲವಂತವಾಗಿ ಕನಕದಾಸರನ್ನು ತನ್ನ ದಾಸನ ನ್ನಾಗಿ ಮಾಡಿಕೊಂಡದ್ದು, ವೈಕುಂಠ ದಾಸರು ತಾವು ಶ್ರಮದಿಂದ ಕೇಶವನನ್ನು ಒಲಿಸಿಕೊಂಡವರು. ಕನಕದಾಸರು ಬೇಲೂರಿಗೆ ಬಂದು ತಮ್ಮ ಸ್ವರೂಪ ಆಚ್ಛಾದನೆ ಮಾಡಿಕೊಂಡು ವೈಕುಂಠದಾಸರ ಸೇವೆ ಮಾಡುವಾಗ "ಬಂಟ ನಾಗಿ ಬಾಗಿಲ ಕಾಯುವೆ, ವೈಕುಂಠ ದಾಸೋತ್ತಮ ದಾಸರ ಮನೆಯ" ಎಂಬುದಾಗಿ ಹಾಡುವಾಗ "ಆದಿಕೇಶವನ" ಅಂಕಿತ ಕೇಳಿ ದಾಸರು ಹೊರ ಗಡೆ ಬಂದು ಕನಕದಾಸರನ್ನು ಆದರ ಪೂರ್ವಕವಾಗಿ ಒಳಗೆ ಕರೆದುಕೊಂಡು ಹೋಗಿ ಉಪಚರಿಸಿದರು. ಕನಕದಾಸರದು ಮಾರ್ಜಾಲ ಕಿಶೋರ ನ್ಯಾಯ. ವೈಕುಂಠದಾಸರದು ಮರ್ಕಟ ಕಿಶೋರ ನ್ಯಾಯ ಇದೇ ಇವರಿಬ್ಬರಲ್ಲಿನ ವ್ಯತ್ಯಾಸ.

ಸತ್ಯ ಸಂಕಲ್ಪನಾದ ಕೇಶವನು ತಾನಿತ್ತ ವಚನದಂತೆ ವೈಕುಂಠ ದಾಸರೊಡನೆ ಸಖನಾಗಿ, ಸ್ವಾಮಿಯಾಗಿ, ಸೇವಕನಾಗಿ, ದಾಸನಾಗಿ ವಿಹರಿ ಸಿದ್ದನು.

ವೈಕುಂಠದಾಸರ ಅವಸಾನ ಕಾಲ ನಿಖರವಾಗಿ ಯಾರಿಗೂ ತಿಳಿಯಲಿಲ್ಲ, ವೃದ್ಧಾಪ್ಯ ಅಶಕ್ತತೆಯಿಂದ ದೇವಾಲಯಕ್ಕೂ ಹೋಗಿರಲಿಲ್ಲ. ದಾಸರು ಆಹ್ನಿಕ ಪೂರೈಸಿ ತೀರ್ಥಪ್ರಾಶನ ಮಾಡುವ ಸಮಯದಲ್ಲಿ ಕೇಶವನ ಮಹಾ ಮಂಗಳಾರತಿಯ ವಾದ್ಯ ವಿಶೇಷಗಳು ಕಿವಿಗೆ ಬೀಳಲು "ಕೇಶವಾ" ಎಂದು ಉದ್ಗಾರ ತೆಗೆದು ಎರಡೂ ಕೈಗಳನ್ನು ಜೋಡಿಸಿ ಕೈ ಮುಗಿದರು. ಇದೇ ಸಮಯಕ್ಕೆ ಸರಿಯಾಗಿ ಅತ್ತ ದೇವಾಲಯದಲ್ಲಿ ಕೇಶವನ ಮೈಮೇಲಿದ್ದ ಸರ್ವಾಭರಣಗಳು ಕಳಚಿಬಿದ್ದವು.ಹೀಗೇಕೆ ಆಯಿತೆಂದು ವಿಚಾರಿಸುವಷ್ಟ ರಲ್ಲಿ ದಾಸರು ಪರಮ ಪದವನ್ನೈದಿದರೆಂಬ ವಾರ್ತೆ ಜನಜನಿತವಾಗಿ, ಅಪೂರ್ವವಾದ ದಿವ್ಯ ಚೇತನವೊಂದು ಭೂಲೋಕದಿಂದ ಕಣ್ಮರೆಯಾಗಿ ಎಲ್ಲ ಆಸ್ತಿಕರ ಕಣ್ಣುಗಳು ದುಃಖಾಶ್ರುಗಳಿಂದ ಪೂರಿತವಾಯಿತೆಂದರೆ ಅತಿ ಶಯೋಕ್ತಿಯಲ್ಲ.

ಶ್ರೀಕೃಷ್ಣಾರ್ಪಣಾಮಸ್ತು



# ಆಯುರ್ವೇದ ಮತ್ತು ನಾವು

- ಡಾ॥ ಪ್ರದೀಪ್ ಕುಮಾರ್ ಹೆಬ್ರಿ
98440 18457

7

ಸುಶ್ರುತ ಸಂಹಿತೆಯ ಶಾರೀರ ಸ್ಥಾನದಲ್ಲಿರುವ ಅಂಗರಚನಾ ಶಾಸ್ತ್ರದ ಅಂಶಗಳು ಹೀಗಿವೆ:

1. ಪಂಚಭೂತಗಳು: ವಾಯು , ತೇಜ, ಅಪ್, ಪೃಥ್ವೀ , ಆಕಾಶ.

2. ಷಡಂಗಗಳು : ಕೈಕಾಲು, ಮುಂಡ, ಶಿರಸ್ಸು.

3. ಪ್ರತ್ಯಂಗಗಳು : ಅ) ಮಸ್ತಕ, ಉದರ, ಬೆನ್ನು, ನಾಭಿ, ಲಲಾಟ, ಮೂಗು, ಗಡ್ಡ, ಮೂತ್ರಾಶಯ, ಕತ್ತು - ಇವು ಒಂದೊಂದು

ಆ) ಕಿವಿ, ಕಣ್ಣು, ಹುಬ್ಬು, ನಿತಂಬ, ಮೊಣಕಾಲು, ಮೊಳಕೈ, ತೋಳು , ತೊಡೆ ಇವು ಎರಡೆರಡು.

ಇ) ಬೆರಳುಗಳು - ಇಪ್ಪತ್ತು

ಈ) ಸ್ರೋತಗಳು - ಇಪ್ಪತ್ತೆರಡು

4. ಸಂಖ್ಯೆಗಳು : ಚರ್ಮಗಳು 7 ಕಲೆಗಳು, 7 ಆಶಯಗಳು, 7, ಧಾತುಗಳು 7 ಸಿರಗಳು 700 ಪೇಶಿಗಳು -500, ಸ್ನಾಯುಗಳು- 900 ಮೂಳೆಗಳು-300, ಸಂಧಿಗಳು-210, ಮರ್ಮಗಳು-107, ಧಮನಿಗಳು, 24, ದೋಷಗಳು-3, ಮಲಗಳು-3, ಸ್ರೋತ್ರಗಳು 9, ಕಂಡರಗಳು -16, ಜಾಲಗಳು-16, ಕೂರ್ಚಗಳು-6, ರಜ್ಜುಗಳು-6 ಸೇವನಿಗಳು, 7 ಸಂಘಾತಗಳು-14 ಸೀಮಂತಗಳು 14, ಯೋಗವಂಶ ಸ್ರೋತ್ರಗಳು 22, ಕರುಳುಹಳು-2

5. ಆಶಯಗಳು : ವಾತ. ಪಿತ್ತ, ಶ್ಲೇಷ್ಮ, ರಕ್ತ , ಆಮ, ಪಕ್ವ, ಗರ್ಭ,

6. ಕರುಳುಗಳು : ಗಂಡಸರಲ್ಲಿ ಮೂರುವರೆ ಮೊಳ, ಹೆಂಗಸರಲ್ಲಿ ಮೂರು ಮೊಳ

7. ಮೂಳೆಗಳು : ಮುನ್ನೂರು ಶಾಖೆಗಳಲ್ಲಿ 120 , ಮುಂಡದಲ್ಲಿ 117, ತಲೆಕತ್ತುಗಳಲ್ಲಿ 63.

ಸುಶ್ರುತ, ಮೂಳೆಗಳಲ್ಲಿ 5 ವಿಧ ಎಂದಿದ್ದಾನೆ. ಕಪಾಲ (ಚಪ್ಪಟೆ) ರುಚಕ (ಹುಲ್ಲಿನಂತೆ ಚೂಪು) ತರುಣ ಮೆದುಲು ಉಸಿರ್ನಾಳದಲ್ಲಿ (ಮೆದುಲು ಉಸಿರ್ನಾಳದಲ್ಲಿ ಮೆಲ್ಲುಲುಬು) ವಲಯ (ಪಕ್ಕೆಲುಬಿನಂತೆ ಬಾಗಿರುವ),ಮತ್ತು ನಲಕ (ತೋಳು,ತೊಡೆ ಮೂಳೆಗಳಂತೆ ಕೊಳವೆಯಂತಿರುವ )

8. ಸಂಧಿಕೀಲುಗಳು : ಚರಕನ ಪ್ರಕಾರ 200,

ಸುಶ್ರುತನ ಪ್ರಕಾರ 210.

9. ಪೇಶಿಗಳು (ಮಾಂಸಖಂಡಗಳು): ಸುಶ್ರುತ ಪ್ರಕಾರ 500

10. ಸ್ನಾಯುಗಳು : 900 ಶಾಖೆಗಳಲ್ಲಿ 600 ಮುಂಡದಲ್ಲಿ 230. ಶತ್ತು, ತಲೆಗಳಲ್ಲಿ 70.

| | |
|---|---|
| 11. ಕಂಡರುಗಳು | - 16 |
| 12.ಮಾಂಸಸಿರಾ ಸ್ನಾಯ್ವಸ್ಥಿ ಜಾಲಗಳು | - 4 |
| 13. ಸೀಮಂತಗಳು | - 15 |
| 14. ಧಮನಿಗಳು | - 24 |
| 15. ಸಿರಗಳು | - 700 |
| 16. ಸ್ರೋತಗಳು | -22 |
| 17. ಹೃದಯ | -01 |

18. ಒಳಅಂಗಗಳು: ಅಥರ್ವವೇದದಲ್ಲಿ ಹೃದಯ, ಶ್ವಾಸಕೋಶ, ಪಿತ್ತಕೋಶ, ಮೂತ್ರ ಜನಕಾಂಗ ಯಕೃತ್ , ಪ್ಲೀಹ, ಜಠರ, ಸಣ್ಣ ಕರುಳು, ದೊಡ್ಡಕರುಳು , ಗುದ , ಉದರ , ಹೊಕ್ಕಳು ಇವುಗಳ ವಿವರಗಳಿವೆ.

19. ಮರ್ಮಗಳು : 107 ಇವು ಸ್ನಾಯು, ಸಿರ, ಪೇಶಿ, ಮೂಳೆ ಮತ್ತು ಕೀಲುಗಳು ಸೇರುವ ಸ್ಥಳಗಳು.

ನರಮಂಡಲ, ಮಿದಳಿನ ಆಕಾರ, ಗಾತ್ರ ಇತ್ಯಾದಿಗಳ ವಿವರ ಕಾಣಿಸುತ್ತಿಲ್ಲ.

ಧಾರಾವಾಹಿ - 9

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ನರಸಿಂಹಾಚಾರ್ಯ
- ಅನುವಾದ :ಶ್ರೀಮತಿ

(ಕಳೆದ ಸಂಚಿಕೆಯಿಂದ)

ಶ್ರೀ ವೆಂಕಟೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಪ್ರತಿನಿತ್ಯ ಸ್ನಪನಬೇರ ಮೂರ್ತಿ (ಸ್ನಾನವಿಗ್ರಹ) ಯಾದ ಸುಂದರಸ್ವಾಮಿ (ಅಳಗಪ್ಪಿರಾನಾರ್) ರಾತ್ರಿ ವೇಳೆಯಲ್ಲಿ ನಿತ್ಯವೂ ಶಯನಾಮೂರ್ತಿಯಾಗಿ ದಿವ್ಯಶಯನ ಮಂಚದ ಮೇಲೆ ನಿದ್ರೆಗೈಯುವಂತೆ ಮಾಡಬೇಕೆಂದು ಶ್ರೀವೈಖಾನಸಾಗಮ ದಲ್ಲಿರುವಂತೆ ಆ ವಿಧದಲ್ಲೇ ಜರುಗಿಸಬೇಕೆಂದು ಮೊದಲು ಆಳ್ವಾರ್ ಶ್ರೀ ಪುತ್ರಿಕ (ಶ್ರೀಗೋದಾದೇವಿ) ಶ್ರೀಕೃಷ್ಣನ ಸಂಗಡ ಸುಖಾನುಭವವನ್ನು ಆಶಿಸಿ ಧನುರ್ಮಾಸದ ಮೂವತ್ತು ದಿನಗಳು ದಿನಕ್ಕೊಂದು ಪಾಶುರವನ್ನು (ದ್ರಾವಿಡ ಪದ್ಯ) ಪಠಿಸಲು, ಮೂವತ್ತು ಪಾಶುರಗಳ ಕೃತಿಯನ್ನು ಸಮ ರ್ಪಿಸಿ ಅನುಗ್ರಹಿಸಬೇಕೆನಲು ವೆಂಕಟಾಚಲಪತಿಗೆ ತನ್ನನ್ನೇ ಸಮರ್ಪಿ ಸಲು ಅರ್ಹಳಾಗಿ ಬೇರೆಯೇ ಅರ್ಚಾವತಾರವನ್ನು ತಾಳಿ ಶ್ರೀವೆಂಕಟಾ ಚಲಪತಿಯ ಪ್ರಥಮ ಪ್ರೇಮವಾಗಿರುವುದರಿಂದ ಶ್ರೀವೈಖಾನಸಾಗಮದಲ್ಲಿ ಒಂದು ಸಂಹಿತೆಯಲ್ಲಿ ಧನುರ್ಮಾಸ ಪರ್ಯಂತ ಶ್ರೀ ಕೃಷ್ಣನೇ ಶಯನಾ ಮೂರ್ತಿಯಾಗಿರಬೇಕೆಂದು ಎಂಬ ರಿವಾಜು ಕಂಡು ಬರಲು ತ್ರೈಪಕ್ಷ್ಯಾ ದ್ಯಂತ ಶ್ರೀಕೃಷ್ಣನೇ ಶಯನಾಮೂರ್ತಿಯಾಗಿ ವಿಧಿಸುವುದರ ಮೂಲಕ ಧನುರ್ಮಾಸದ ಮೂವತ್ತು ದಿನಗಳೂ ಶ್ರೀಕೃಷ್ಣನೇ ದಿವ್ಯಾ ಸನದ ಮೇಲೆ ಪವಡಿಸಿದ್ದು ಜಗತ್ತುಜೀವನಗೊಳಿಸು ವಂತೆ ಏರ್ಪಡಿಸಲಾಯಿತು.

ತಿರುಮಲನಂಬಿ (ಶ್ರೀಶೈಲಪೂರ್ಣರು)ಯಾಮುನಾ ಚಾರ್ಯರು (ಅಳವಂದಾರ್) ಅಜ್ಞಾನುಸಾರವಾಗಿ ತಿರು ಮಲೆಯ ಮೇಲೆ ನಿತ್ಯವಾಸಿಯಾಗಿ ವಾಸ ಮಾಡುತ್ತಾ, ತ್ರಿಕಾಲ ಸಂಧ್ಯದಲ್ಲೂ ಶ್ರೀನಿವಾಸನನ್ನು ಸೇವಿಸುತ್ತಾ ಪ್ರತಿ ದಿನವೂ ಆಕಾಶಗಂಗಾ ತೀರ್ಥದಿಂದ ಅಭಿಷೇಕ (ತೀರ್ಥನಯನ) ಕೈಂಕರ್ಯವನ್ನು ನೆರವೇರಿಸು ವುದರಿಂದ ಮಂಗಳಾಶಾಸನ ಪರವಾಗಿರುತ್ತಿರಲು ಶ್ರೀರಾಮಾನುಜಾಚಾರ್ಯರು, ಯಾಮುನಾಚಾರ್ಯರ ಆಣತಿಯಂತೆ ಶ್ರೀರಾಮಾನುಜರ ಪ್ರವಚನಕ್ಕಾಗಿ ಶ್ರೀರಂಗದಿಂದ ಬೆಟ್ಟದಡಿಗೆ ಸೇರಲು ಶ್ರೀಶೈಲ



ಪೂರ್ಣರನ್ನು ಇವರ (ಶ್ರೀರಾಮಾನುಜಾಚಾರ್ಯರು) ಕೋರಿಕೆಯ ಮೇರೆಗೆ ಒಂದು ವರ್ಷಕಾಲ ಪರ್ಯಂತ ಪ್ರಾತಃಕಾಲದಲ್ಲಿ ಅಭಿಷೇಕ ಕಾರ್ಯವನ್ನು ನೆರವೇರಿಸಿ,ಸ್ವಾಮಿಯನ್ನು ಸೇವಿಸಿ, ಮಹಾಪ್ರಸಾದವನ್ನು ಸ್ವೀಕರಿಸಿ ಶ್ರೀಭಗವದ್ರಾಮಾನುಜರು ಒಡನೆಯೇ ಬೆಟ್ಟವಿಳಿಯಲು ಒಂದು ಹುಣಸೇಮರದ ಕೆಳಗೆ ಒಂದು ಗುಂಡುಕಲ್ಲು ಬಳಿಯಲ್ಲಿ ಪಾಠ ಪ್ರವಚನಗಳನ್ನು ಮಾಡಿ ಮಧ್ಯಾಹ್ನ ಕಾಲಕ್ಕೆ ಯಾಗಾ ಯಜ್ಞಗಳನ್ನು (ಭಗವಂತನಿಗೆ ನಿವೇದಿಸಿದ ನೈವೇದ್ಯಾನ್ನವನ್ನು ಭುಜಿಸಿ)ನೆರವೇರಿಸಿ,ಸಾಯಂಕಾಲದ ಸೇವಾಕೈಂಕರ್ಯಕ್ಕಾಗಿ ಪುನಃ ಮೇಲೆ ಮರಳಿ ಹೋಗುತ್ತಿದ್ದರು.

ಹೀಗೆ ಸ್ವಲ್ಪದಿನ ನಡೆಯುತ್ತಿರಲು, ಶ್ರೀಶೈಲಪೂರ್ಣರೊಂದು ದಿನ ಶ್ರೀನಿವಾಸನನ್ನು ಧ್ಯಾನಿಸಿ, ತಾವು ಇಲ್ಲಿಯವರೆಗೆ ಶ್ರೀಯಾಮುನಾಚಾರ್ಯರ ಕೃಪಾಕಟಾಕ್ಷದಿಂದ ತ್ರಿಸಂಧ್ಯಾಕಾಲದಲ್ಲಿಯ ದರ್ಶನ ಭಾಗ್ಯವನ್ನು ಅನುಗ್ರಹಿಸಿದಿರಿ.ಈಗ ಶ್ರೀರಾಮಾಯಣ ಪ್ರವಚನ ಮೂಲಕ ಮಧ್ಯಾಹ್ನದ ಸೇವೆಯಿಲ್ಲದಾಗಿದೆ ಎಂದು ಹಂಬಲಿಸಲು, ಅವರ ಕನಸಿನಲ್ಲಿ ಶ್ರೀವೆಂಕಟೇಶನು ಶ್ರೀಶೈಲಪೂರ್ಣರನ್ನು (ತಿರುಮಲನಂಬಿ) ನೋಡಿ ನಿಮಗೆ ಮಧ್ಯಾಹ್ನ ಸೇವೆ ಒದಗಿಸಲಾಗಿದೆ ಎಂದು ಹೇಳಿದನು. ಅದನ್ನು ಹೆಗಲೇರಿಸಿಕೊಂಡ ಶ್ರೀಶೈಲಪೂರ್ಣರು ಸಹಜವಾಗಿ ಅಭಿಷೇಕವನ್ನು ಮುಗಿಸಿಕೊಂಡು ತಿರುಮಲೆಯಿಂದ ಕೆಳಗಿಳಿದು (ಆದಿತ್ಯವಾರದಂದು) ಯಥಾಸ್ಥಾನಕ್ಕೆ ಸೇರಲು ಅಲ್ಲೊಂದು ಸ್ಥಳದಲ್ಲಿ ಕಸ್ತೂರಿ - ಕರ್ಪೂರ ಪರಿಮಳಗಳು ಎಲ್ಲಾ ಕಡೆ ಪಸರಿಸಿರುವುದನ್ನು ಕಂಡು ಶ್ರೀಶೈಲಪೂರ್ಣರನ್ನು ಶ್ರೀರಾಮಾನುಜಾಚಾರ್ಯರನ್ನು ಇದೇನು? ಎಂದು ವಿಚಾರಿಸಲು,ನಾಲ್ಕು ದಿಕ್ಕುಗಳನ್ನು ನೋಡಿ, ಆ ತಿಂತ್ರಿಣಿ ವೃಕ್ಷ ಪ್ರದೇಶದಲ್ಲಿಯ ಗುಂಡುಕಲ್ಲಿನ ಮೇಲೆ ಶ್ರೀನಿವಾಸ ಭಗವಂತನ ದಿವ್ಯಚರಣಾಂಬುಜಗಳೆರಡನ್ನು ಕಂಡರು.ಈ ದಿವ್ಯಚರಣಾರವಿಂದಗಳನ್ನು ಕಂಡ ಶ್ರೀಶೈಲಪೂರ್ಣರು ತಾವು ಕಂಡ ಸ್ವಪ್ನವೃತ್ತಾಂತವನ್ನೆಲ್ಲಾ ಶ್ರೀರಾಮಾನುಜಾಚಾರ್ಯರಿಗೆ ಹೇಳಲು ಪೂರ್ವ ಸಂಕಲ್ಪದಂತೆ ನಡೆಯಬೇಕಾದುದನ್ನೆಲ್ಲಾ ಅವರಿಬ್ಬರೂ ಸೇರಿ ನಡೆಸುವಂತೆ, ಆ ಸ್ವಯಂಭುವ ದಿವ್ಯ ಪಾದಗಳನ್ನು ಸೇವಿಸಿ ಅದರ ಕೆಳಗೆ ಹತ್ತು ಜನ ಆಳ್ವಾರರ ದಿವ್ಯಚರಣಗಳೊಡನೆ ಒಂದೇ ಮೂರ್ತಿಯಾಗಿ (ಏಕಶಿಲಾ) ಕೆತ್ತಿಸಿ, ಪ್ರತಿಷ್ಠಾಪಿಸಿ ಶ್ರೀಚರಣಗಳಿಗೆ ಆಲಯವೊಂದನ್ನು ನಿರ್ಮಿಸಿ ಪ್ರತಿಷ್ಠ, ಅರ್ಚನ ಮುಂತಾದವುಗಳನ್ನು ಶ್ರೀವೈಖಾನಸಾಗಮ ಪ್ರಕಾರ ನಡೆಸಿ ತೀರ್ಥಪ್ರಸಾದ ಪರಿಗ್ರಹಗಳನ್ನು ಮಾಡಿಸಿ ಗ್ರಂಥ ಶೇಷವನ್ನು ಶ್ರೀಪಾದ ಸನ್ನಿಧಾನದಲ್ಲಿ ಅನು ಸಂಧಾನ ಮಾಡಿ ಪೂರ್ಣಗೊಳಿಸಿದ್ದಾರೆ. ಆ ಹುಣಸೆಮರ ಮುದಿಯಾಗಿ ಒಣಗಿದುದರಿಂದ ಅದು ಶ್ರೀಆದಿಶೇಷನ ಅಂಶವೆಂದು ನಿರ್ಣಯಿಸಿ "ಕಲೌ ವೆಂಕಟನಾಯಕಃ " ಎಂದು

"ವಿಶೇಷತಃ ಕ್ರೂರಕಲೌ ನರಾಣಾಂ ಪಾಪಾಕರಾಣಾಂ ಪರಪೀಡಕಾನಾಂ
ಭೂಗೋಲಮಧ್ಯೆ ದ್ರವಿಡೇ ಚ ಪುಣ್ಯೇ ಶ್ರೀವೆಂಕಟಾದ್ರಿರ್ಗತಿರೇವ ನಾನ್ಯಃ"

(ಈ ಕ್ರೂರಕಲಿಯುಗದಲ್ಲಿ ಹುಟ್ಟುವ ಪಾಪಾತ್ಮರಿಗೆ , ಪರಮ ಹಿಂಸಕರಿಗೆ ನರರಿಗೆ ಭೂಗೋಳ ಮಧ್ಯದಲ್ಲಿರುವ ಪವಿತ್ರವಾದ ದ್ರಾವಿಡ ದೇಶದ ವೆಂಕಟಾದ್ರಿಯ ಗತಿಬೇರೊಂದಲ್ಲ)

"ಕಲೌಪುನಃ ಪಾವರತಾಭಿಭೂತೇ ನ ಉದ್ಭಭೂವಾऽಶ್ರಿತ ವತ್ಸಲಾತ್ವಾತ್
ಅರ್ಚ್ಯಾತ್ಮನಾ ಸರ್ವಜನಾನ್ ಸುಗೋಪ್ತುಂ ಸರ್ವಾಧಿರೋ ವೆಂಕಟ ಭೂದರೇಂದ್ರಃ"

(ಪಾಪಾಸಕ್ತರು, ದುರ್ಜನರಿಂದಲೇ ಕಲಿಗಾಲವು ಪರಿಭಾವಗೊಳ್ಳುತ್ತದೆ. ಶ್ರೀ ಮನ್ನಾರಾಯಣನು ಆಶ್ರಿತಜನರ ಪಾಲನೆಗಾಗಿ ಅರ್ಚಾರೂಪದಲ್ಲಿದ್ದು ಸರ್ವಜನರನ್ನು ಯಥೋಚಿತವಾಗಿ ಕಾಪಾಡಲು ಸರ್ವಾದಿಕವಾಗಿ ವೆಂಕಟಾಚಲಧೀಶ್ವರನಾಗಿ ಆವಿರ್ಭವಿಸಿದ್ದಾನೆ.)

ಎಂದು ಪವಿತ್ರ ಸ್ಥಾನದಲ್ಲಿ ವರ್ಣಿಸಿದಂತೆ ವರ್ಣಾಶ್ರಮ ಬೇದವಿಲ್ಲದೆ ಸರ್ವ ಮಾನವರನ್ನೂ ರಕ್ಷಿಸಲು ಅವತರಿಸಿದ ಶ್ರೀವೆಂಕಟಾದ್ರಿ ಪ್ರಭುವನ್ನು ಸರ್ವರೂ ಸೇವೆಗೈದು ಕೃತಾರ್ಥರಾಗುವ ಭಾಗ್ಯ ಪ್ರಾಪ್ತವಾಗಿರಲು, ಐವರು ಭಾಗವತರಿಗೆ ಬೆಟ್ಟವೇರಿ ಸ್ವಾಮಿಯನ್ನು ಸೇವಿಸುವುದು ನಿಷಿದ್ಧವಾಗಲು, ಅವರು ತಿರುಮಲೆ ದಕ್ಷಿಣ ಶಿಖರದಲ್ಲಿರುವ ತೀರ್ಥಪಂಚಕವೆಂದು ಪ್ರಖ್ಯಾತಿಯನ್ನು ಪಡೆದಿರುವ ತೀರ್ಥಗಳೆಲ್ಲವೂ ಒಗ್ಗೂಡಿರುವ ಚಂಡಾಲತೀರ್ಥದಲ್ಲಿ ಸ್ನಾನಮಾಡಿ ಆ ಸ್ವಯಂ ವ್ಯಕ್ತಗೊಂಡಿರುವ ದಿವ್ಯಚರಣಗಳ ಸನ್ನಿಧಿಯನ್ನು ಸೇರಿ ಪ್ರದಕ್ಷಿಣೆ ನಮಸ್ಕಾರ ಮಾಡಿ ಧನ್ಯರಾಗುವಂತೆ ಮಾಡಿದರು.

(-ಮುಂದುವರೆಯುತ್ತದೆ.)

ಕರ್ನಾಟಕ ಭಾರತ ಕಥಾಮಂಜರಿ ಅಥವಾ ಕುಮಾರವ್ಯಾಸ ಭಾರತ ಅಥವಾ ಗದುಗಿನ ಭಾರತ ಎಂಬ ಷಟ್ಪದಿ ಮಹಾಕಾವ್ಯವನ್ನು ರಚಿಸಿದವನು ಮಹಾಕವಿ ಕುಮಾರವ್ಯಾಸ ಅಥವಾ ಗದುಗಿನ ನಾರಣಪ್ಪ. ಈತನ ಕಾಲ ಕ್ರಿ.ಶ. ಸುಮಾರು 1450 ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಇವನ ಊರು ಗದುಗಿನ ಸಮೀಪದ ಕೋಳಿವಾಡ ಗ್ರಾಮ. ಕೋಳಿವಾಡದಲ್ಲೂ ಕೂಡಾ ವೀರನಾರಾಯಣನ ದೇವಾಲಯವಿದೆ. ಕುಮಾರ ವ್ಯಾಸನ ಮನೆ ಇದ್ದ ಬಗ್ಗೆ ದಾಖಲೆ ಇದೆ. ಅವನ ಪೂರ್ವಿಕರು ಇಂದಿಗೂ ಕೋಳಿವಾಡದಲ್ಲಿ ವಾಸವಿದ್ದಾರೆ. ಅವರ ಮನೆಯಲ್ಲಿ ಕುಮಾರವ್ಯಾಸ ಭಾರತದ ತಾಳೆಗರಿಯ ಪ್ರಾಚೀನ ಹಸ್ತಪ್ರತಿ ಇಂದಿಗೂ ಇದೆ. ಪ್ರತಿವರ್ಷ ಉತ್ತರಾಯಣ ಪುಣ್ಯಕಾಲ, ಹೇಮಂತ ಋತು, ಪುಷ್ಯ ಮಾಸದ, ಶುಕ್ಲಪಕ್ಷ,ಚತುರ್ದಶಿ ದಿವಸ ( ಈ ವರ್ಷ 16- 1-2022) ಕೋಳಿವಾಡದಲ್ಲಿ ಮತ್ತು ಗದುಗಿನಲ್ಲಿ ಕುಮಾರವ್ಯಾಸ ಜಯಂತಿ ಉತ್ಸವವನ್ನು ಆಚರಿಸುತ್ತಾರೆ. ಅಂದು ಕುಮಾರವ್ಯಾಸ ಭಾರತದ ಹಸ್ತಪ್ರತಿಗಳ ಪೂಜೆ, ವಾಚನ ವ್ಯಾಖ್ಯಾನ ಮೊದಲಾದ ಕಾರ್ಯಕ್ರಮಗಳು ನಡೆಯುತ್ತವೆ.








ಕೋಳಿವಾಡ ಮೂಲದ ಚಿನ್ನದಕ್ಕೈ ಮಾಧವರಸ ಎಂಬುವವನು ವಿಜಯನಗರದ ಸಾಳುವ ನರಸಿಂಗನ ರಾಯನ ಆಸ್ಥಾನದಲ್ಲಿ ಗಜಶಾಲೆಯ ಅಧಿಪತಿಯಾಗಿದ್ದನು. ಹರಿಹರರಲ್ಲಿ ಭೇದವೆಣಿಸದ ಸ್ಮಾರ್ತ ಭಾಗವತ ಪಂಥದ ಈ ಮನೆತನದವರ ಆರಾಧ್ಯ ದೈವ ವೀರನಾರಾಯಣ. ಮಾಧವರಸನು ಕೋಳಿ ವಾಡದಲ್ಲಿ ವೀರನಾರಾಯಣ ಗುಡಿಯನ್ನು ಕಟ್ಟಿಸಿದನು. ಇವನ ಮಗ ತಿಮ್ಮರಸನು ಕೋಳಿವಾಡ ಗ್ರಾಮದಲ್ಲಿ ನೆಲೆಸಿದ್ದನು. ಇವರು ಈ ಊರಿನ ಗೌಡರು, ಶ್ಯಾನುಭೋಗರೂ ಆಗಿದ್ದರೆಂದು ತಿಳಿದು ಬರುತ್ತದೆ. ತಿಮ್ಮರಸನ ಮಗ ಲಕ್ಕರಸಯ್ಯ. ಇವನ ಹಿರಿಯ ಮಗನೇ ನಾರಣಪ್ಪ. ಲಕ್ಕರಸಯ್ಯನ ಕಾಲಕ್ಕೆ ಈ ಮನೆತನದವರು ಗದುಗು ಪಟ್ಟಣಕ್ಕೆ ಬಂದು ನೆಲೆಸಿರಬಹುದು. ನಾರಣಪ್ಪನು ಗದುಗಿನ ವೀರನಾರಾಯಣನ ಪರಮ ಭಕ್ತ ನಾಗಿದ್ದನು. ನಾರಣಪ್ಪನೂ ಕೂಡಾ ವಿಜಯನಗರ ಆಸ್ಥಾನದಲ್ಲಿ ಕೆಲವು ಕಾಲ ಇದ್ದು, ಗಜಶಾಲೆಯ ಅಧಿಪತಿ ಯಾಗಿದ್ದನೆಂದು, ಅಂದಿನ ಕಾಲದಲ್ಲಿ ನಡೆದ ಯುದ್ಧಗಳನ್ನು ನೋಡಿದ್ದನೆಂದು ಊಹಿಸಬಹುದು. ಕಾರಣ ಭಾರತದಲ್ಲಿ ಬರುವ ಯುದ್ಧ ಪ್ರಸಂಗಗಳನ್ನು, ಭಗದತ್ತನ ಸುಪ್ರತೀಕ ಗಜದ ಅಲಂಕಾರ ಹಾಗೂ ಅದರ ಕಾಳಗನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ಅಂದಿನ ಅರಮನೆಯ ವೈಭವಗಳನ್ನು ವರ್ಣಿಸಿದ್ದಾನೆ.

ಕುಮಾರವ್ಯಾಸನ ಕಾವ್ಯದ ಬೃಹತ್ತು ಮಹತ್ತುಗಳ ಕಾರಣದಿಂದ ಅವನ ಬಗ್ಗೆ ಅನೇಕ ದಂತ ಕಥೆ ಗಳು ಹುಟ್ಟಿಕೊಂಡಿವೆ. ನಾರಣಪ್ಪನು ಯುವಕನಾಗಿದ್ದಾಗ ಗದುಗಿನ ವೀರನಾರಾಯಣ ದೇವಾಲಯದಲ್ಲಿ ಏರ್ಪಡಿಸಿದ್ದ ಸಮಾರಾಧನೆಯಲ್ಲಿ ಭಾಗವಹಿಸಿದ್ದನೆಂದು, ಬ್ರಾಹ್ಮಣರು ಊಟಕ್ಕೆ ಕುಳಿತ ಸಾಲಿನಲ್ಲಿ ಒಬ್ಬ ಹುಡುಗನು ಊಟಕ್ಕೆ ಕುಳಿತಿದ್ದನೆಂದು, ಹಿರಿಯರು ಬಂದು ಅವನನ್ನು ಎಳಿಸಲು ಹೋದಾಗ, ಆ ಹುಡುಗನು ಹಠ ಹಿಡಿದು ಜಾಗ ಬಿಡದೇ ಅಲ್ಲಿಯೇ ಕುಳಿತನಂತೆ. ಆಗ ಅಲ್ಲಿದ್ದ ಹಿರಿಯರು ಆ ಹುಡುಗನನ್ನು ಏನಪ್ಪಾ ದುರ್ಯೋಧನನ ತರಹ ಹಠ ಮಾಡುತ್ತಿದ್ದೀಯಲ್ಲಾ ಎಂದು ಬೈದರಂತೆ. ಅಲ್ಲಿಯೇ ಊಟಕ್ಕೆ ಕುಳಿತಿದ್ದ ತೇಜಸ್ವಿಯಾದ ತಪೋನಿಷ್ಠ ಬ್ರಾಹ್ಮಣರೊಬ್ಬರು ಇದನ್ನು ಕೇಳಿದ ತಕ್ಷಣ ದುಃಖಪಟ್ಟು, ಕೋಪಗೊಂಡು ಊಟ ಬಿಟ್ಟು ಹೊರಟು ಹೋದರಂತೆ. ಇದನ್ನು ಗಮನಿಸುತ್ತಿದ್ದ ನಾರಣಪ್ಪನು ಆ ಬ್ರಾಹ್ಮಣರನ್ನೇ ಹಿಂಬಾಲಿಸಿ ದನೆಂದು, ಅವರು ಊರ ಹೊರಗಿನ ಒಂದು ದೇವಾಲಯದ ಬಳಿ ಹೋದಾಗ ನಾರಣಪ್ಪನು ಅವರ ಪಾದಗಳಿಗೆ ನಮಸ್ಕರಿಸಿ ತಾವು ಯಾರು, ದಯಮಾಡಿ ಊಟಕ್ಕೆ ಬನ್ನಿ ಎಂದಾಗ, ಅವರು ಜಟಾಧಾರಿಯಾದ ಮುನಿಯ ರೂಪದಲ್ಲಿ ಕಾಣಿಸಿಕೊಂಡು ತಾವು ಅಶ್ವತ್ಥಾಮಚಾರ್ಯರೆಂದು ನಿನಗೆ ಭಾರತವನ್ನು ರಚಿಸುವ ಶಕ್ತಿಯನ್ನು ಅಥವಾ ವರವನ್ನು ನೀಡಿದ್ದೇನೆ, ನೀನು ಮಹಾಭಾರತ ಕಾವ್ಯವನ್ನು ರಚಿಸು ಎಂದು ಹೇಳಿದರಂತೆ. ಆದರೆ ಈ ಘಟನೆಯನ್ನು ಯಾರಿಗಾದರೂ ತಿಳಿಸಿದರೆ ನಿನಗೆ ತಕ್ಷಣ ಮರಣ ಸಂಭವಿಸುತ್ತದೆ ಎಂದರಂತೆ. ನಾರಣಪ್ಪನು ವೀರನಾರಾಯಣನ ಗುಡಿಯಲ್ಲಿ ಕುಳಿತು ಕನ್ನಡ ಭಾರತವನ್ನು ರಚಿಸಿದನು. ಆದರೆ ಅವನ ಪತ್ನಿಯು ಪದೇಪದೇ ಹೇಗೆ ನಿಮಗೆ ಈ ಕಾವ್ಯರಚನೆಯ ಶಕ್ತಿ ಹೇಗೆ ಬಂದಿತು ಎಂದು ಕೇಳಲು, ಕೊನೆಗೆ ಒಂದು ದಿನ ಬಾಯಿತಪ್ಪಿ ಈ ಘಟನೆಯನ್ನು ಬಾಯಿ ಬಿಟ್ಟನೆಂದು, ತಕ್ಷಣ ಅವನಿಗೆ ಮರಣ ಸಂಭವಿಸಲು, ಗದುಗಿನ ವೀರ ನಾರಾಯಣನ ದಯದಿಂದ ಅವನು ಮತ್ತೆ ಬದುಕಿದನೆಂದು ಹೇಳುತ್ತಾರೆ.

ಇನ್ನೊಂದು ದಂತ ಕಥೆಯ ಪ್ರಕಾರ, ಪರಮ ಭಕ್ತನಾದ ನಾರಣಪ್ಪನಿಗೆ, ವೀರನಾರಾಯಣನು ಕನಸಿನಲ್ಲಿ ಪ್ರತ್ಯಕ್ಷನಾಗಿ, ನೀನು ಕನ್ನಡ ಭಾಷೆಯಲ್ಲಿ ಮಹಾಭಾರತವನ್ನು ರಚಿಸು, ಪ್ರತಿದಿನ ನೀನು ದೇವಾಲಯದ ಪುಷ್ಕರಣಿಯಲ್ಲಿ ಸ್ನಾನ ಮಾಡಿ, ಒದ್ದೆಯಾದ ಪಂಚೆಯಲ್ಲಿಯೇ ನನ್ನ ಗುಡಿಯಲ್ಲಿ ಕುಳಿತು, ನನ್ನ ಗರ್ಭಗುಡಿಗೆ ಹಾಕಿರುವ ಪರದೆಯನ್ನು ಸರಿಸಿ ನೋಡು, ಮಹಾಭಾರತದ ದೃಶ್ಯಗಳು ನಿನಗೆ ಕಾಣು

**ಕುಮಾರ ವ್ಯಾಸ ಮಹಾಕವಿ**

"ಇದ ವಿಚಾರಿಸೆ ಬರಿಯ ತೊಳಸಿಯ ಉದಕದಂತಿರೆ ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ ಧರ್ಮ ವಿಚಾರವ ಮಾತ್ರವನು"

– ಡಾ|| ಎಸ್. ನಂಜುಂಡಸ್ವಾಮಿ
7899011310

ತ್ತವೆ, ಅದನ್ನು ನೋಡಿ ಕಾವ್ಯ ರಚಿಸು,ನೀನು ಉಟ್ಟಿರುವ ಒದ್ದೆ ವಸ್ತ್ರವು ಒಣಗಿದ ನಂತರ ಈ ದೃಶ್ಯಗಳು ಕಾಣುವುದಿಲ್ಲ ಎಂದು ವರವನ್ನು ನೀಡಿದನಂತೆ.ಅದರಂತೆ ನಾರಣಪ್ಪನು ದಿನವೂ ಒದ್ದೆ ಬಟ್ಟೆಯಲ್ಲಿಯೇ ವೀರನಾರಾಯಣನ ಗುಡಿಯಲ್ಲಿ ಒಂದು ಕಂಬದ ಕೆಳಗೆ ಕುಳಿತು ಮಹಾಭಾರತದ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿ ಕನ್ನಡ ಭಾರತವನ್ನು ಬರೆದನಂತೆ.ಈ ಕಂಬವನ್ನು ಈಗಲೂ ಕುಮಾರವ್ಯಾಸನ ಕಂಬ ಎಂದು ಹೇಳು ತ್ತಾರೆ."ವೀರನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸ" ಎಂಬುದರಲ್ಲಿ ಈ ಭಾವ ವ್ಯಕ್ತವಾಗಿದೆ.

ಮಹಾಭಾರತ ಕರ್ತೃಗಳಾದ ವೇದವ್ಯಾಸ ಮಹರ್ಷಿ ಗಳೂ ನಾರಣಪ್ಪನಿಗೆ ಪ್ರತ್ಯಕ್ಷವಾಗಿ ವರವನ್ನು ನೀಡದರೆಂದು ಒಂದು ಪ್ರತೀತಿ."ತರಳನನು ತನ್ನವನೆನುತ ಪತಿಕರಿಸಿ ಕರುಣದಿ ವರವನಿತ್ತನು ವೇದವ್ಯಾಸ ಗುರುರಾಯ" ಎಂದು ಹೇಳಿರುವುದು ಇದನ್ನು ದೃಢೀಕರಿಸುತ್ತದೆ.ಒಟ್ಟಿನಲ್ಲಿ ಕುಮಾರ ವ್ಯಾಸನು ವೀರನಾರಾಯಣನ ಮತ್ತು ವೇದವ್ಯಾಸರ ಕೃಪೆಗೆ ಪಾತ್ರನಾಗಿದ್ದನು. ಹೆಸರು ಹೇಳಿಕೊಳ್ಳಲು ಇಚ್ಛಿಸದ ಮಹಾ ಮಹಿಮರು ಅವನ ಗುರುಗಳಾಗಿದ್ದರು ಎಂಬುದು ಸತ್ಯ. ಕುಮಾರವ್ಯಾಸನ ಕಾವ್ಯದ ಮಹತ್ವವನ್ನು ಕಂಡು ಈ ರೀತಿ ದಂತ ಕಥೆಗಳು ಹುಟ್ಟಿಕೊಂಡಿವೆ ಎಂದು ಹೇಳಬಹುದು.

### ಕುಮಾರವ್ಯಾಸ ಭಾರತ ಕೃಷ್ಣಕಥೆ

ಕುಮಾರ ವ್ಯಾಸ ಅಥವಾ ಗದುಗಿನ ನಾರಣಪ್ಪನಿಗೆ ತನ್ನ ಕಾವ್ಯ ಮಹಾಭಾರತಕ್ಕಿಂತ ಹೆಚ್ಚಾಗಿ ಕೃಷ್ಣ ಕಥೆ.ಪಂಚ ಮವೇದ. ಭೂಭಾರವನ್ನು ಇಳಿಸಲು ಶ್ರೀಮನ್ನಾರಾಯಣನು ಮಾನವ ರೂಪದಲ್ಲಿ ಶ್ರೀ ಕೃಷ್ಣನಾಗಿ ಅವತರಿಸಿದ್ದಾನೆಂದು ಭೀಷ್ಮ,ದ್ರೋಣ,ವಿದುರನಂತಹ ಭಾಗವತರಿರಲಿ,ಅವನ ಪರಮ ಭಕ್ತರಾದ ಪಾಂಡವರಿರಲಿ,ಕೃಷ್ಣನನ್ನು ವಿರೋಧಿಸುತ್ತಿದ್ದ ದುರ್ಯೋಧನ, ಕರ್ಣ, ಶಕುನಿ, ಮೊದಲಾದ ಎಲ್ಲ ಪಾತ್ರಗಳೂ ದೃಢವಾಗಿ ನಂಬಿದ್ದರು ಎಂದು ಕುಮಾರವ್ಯಾಸನು ಹೇಳು ತ್ತಾನೆ. ಅವನ ಕೃಷ್ಣ ರಾಸಲೀಲೆಯ ಕೃಷ್ಣನಲ್ಲ,ಮಹಾಭಾರತದ ಸೂತ್ರಧಾರಿ, ಭಕ್ತಕುಟುಂಬಿ,ರಾಜಕಾರಣಿ,ತತ್ವಬೋಧಕ, ಅಪ ದ್ಬಾಂದವ, ವೀರ ಶೂರ.ನಾರಣಪ್ಪ ಕಾವ್ಯ ರಚಿಸಿದುದು ಕೃಷ್ಣನ ಮೆಚ್ಚುಗೆಗೆ ಮಾತ್ರ. ಅವನಿಗೆ ಯಾವುದೇ ರಾಜ ಮಹಾರಾಜರ ಹಂಗಿಲ್ಲ. ತಾನು ಕುಮಾರವ್ಯಾಸ ಯೋಗೀಂದ್ರ ಎಂದು ಅವನು ಹೇಳಿಕೊಂಡಿದ್ದಾನೆ. "ತಿಳಿಸಿ ಹೇಳುವೆ ಕೃಷ್ಣ ಕಥೆಯನು,ಧರೆಗೆ ಪಂಚಮ ಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ, ಹಲವು ಜನ್ಮದ ಪಾಪರಾಶಿಯ ತೊಳೆವ ಜಲವಿದು ಶ್ರೀಮದಾಗಮಕುಲಕೆ ನಾಯಕ ಭಾರತಾಕೃತಿ ಪಂಚಮ ಶ್ರುತಿಯು", "ಇದ ವಿಚಾರಿಸೆ ಬಲಿಯ ತೊಳಸಿಯ ಉದಕದಂತಿರೆ ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ ಧರ್ಮ ವಿಚಾರವ ಮಾತ್ರವನು" "ಹರಿಯ ಬಸುರೊಳಗೆ ಅಖಿಳ ಲೋಕ ಅಡಗಿಹವೊಲು ಭಾರತ ಶರಧಿಯೊಳಗೆ ಅಡಗಿಹವು ಅನೇಕ ಪುರಾಣ ಶಾಸ್ತ್ರಗಳು" ಎಂಬ ಕವಿಯ ವರ್ಣನೆ ಇದನ್ನು ಸಮರ್ಥಿಸುತ್ತದೆ. "ಅರಸು ಗಳಿಗೆ ವೀರ,ದ್ವಿಜರಿಗೆ ಪರಮ ವೇದದಸಾರ,ಯೋಗೀಶ್ವರರ ತತ್ವ ವಿಚಾರ,ಮಂತ್ರೀ ಜನಕೆ ಬುದ್ಧಿಗುಣ ವಿರಹಿಗಳ ಶೃಂಗಾರ, ವಿದ್ಯಾ ಪರಿಣತರ ಅಲಂಕಾರ, ಕಾವ್ಯಕೆ ಗುರು" ಎನಿಸಿದ ಈ ಮಹಾಭಾರತ ಕಾವ್ಯವು ಬಹುಮುಖವಾದುದು ಎಂದೂ ಕೂಡಾ ಹೇಳಿದ್ದಾನೆ.

ಕೃಷ್ಣನ ಪಾತ್ರ ಎಲ್ಲೆಲ್ಲಿ ಕಾಣಿಸಿಕೊಳ್ಳುತ್ತದೆ.ಅಲ್ಲೆಲ್ಲಾ ಕುಮಾರವ್ಯಾಸನು ತನ್ನ ಕಾವ್ಯದ ವಸ್ತುವನ್ನೇ ಮರೆತು, ಕೃಷ್ಣನ ವರ್ಣನೆಯಲ್ಲಿ ಮೈಮರೆತು ಬಿಡುತ್ತಾನೆ ಕೃಷ್ಣನನ್ನು ಎಷ್ಟು ವರ್ಣಿ ಸಿದರೂ ಅವನಿಗೆ ಸಾಲದು. ಸುಮಾರು 8200 ಷಟ್ಪದಿಗಳಿಂದ ಕೂಡಿದ ಈ ಕೃತಿಯಲ್ಲಿ ಸುಮಾರು 1000 ಪದ್ಯಗಳು ಕೃಷ್ಣನ ಮಹಿಮೆಯ ವರ್ಣನೆಗೆ ಮೀಸಲಾಗಿದೆ ಎಂದು ಹೇಳಬಹುದು. ಸಭಾಪರ್ವದಲ್ಲಿ ಪರಮ ಭಾಗವತನಾದ ಭೀಷ್ಮನು ಕೃಷ್ಣನಿಗೆ ಅಗ್ರಪೂಜೆ ಸಲ್ಲಬೇಕೆಂದು ಹೇಳಿ ಸುಮಾರು 60 ಪದ್ಯಗಳಲ್ಲಿ ಕೃಷ್ಣನ ಅವತಾರಗಳ ಮಹಿಮೆಯನ್ನು ವರ್ಣಿಸುತ್ತಾನೆ. ಸಭಾ ಪರ್ವದ ಅಕ್ಷಯವಸ್ತ್ರ ಪ್ರಧಾನ ಸಂದರ್ಭದಲ್ಲಿ ದ್ರೌಪದಿಯು "ಕಾಯ್ದುಕೊಳ್ಳೈ ಕೃಷ್ಣ" ಎಂದು ಸುಮಾರು 20 ಪದ್ಯಗಳಲ್ಲಿ ಕೃಷ್ಣನನ್ನು ಸ್ತುತಿಸುತ್ತಾಳೆ.ಅರಣ್ಯ ಪರ್ವದ ದೂರ್ವಾಸ ಪ್ರಸಂಗದಲ್ಲಿ ಹದಿನಾರು ಪದ್ಯಗಳಲ್ಲಿ ಕೃಷ್ಣಸ್ತುತಿಯನ್ನು ಮಾಡು ತ್ತಾಳೆ. ಉದ್ಯೋಗ ಪರ್ವದಲ್ಲಿ ಕೃಷ್ಣನು ಪಾಂಡವರ ಪರವಾಗಿ ಹಸ್ತಿನಾವತಿಗೆ ಬಂದು, ಧೃತರಾಷ್ಟ್ರನ ಅರಮನೆಗೆ ಸಂಧಿಗಾಗಿ ಹೊರಟಾಗ ದೇವ ಬಂದನು ತನ್ನ ನೆನೆವರ ಕಾವ ಬಂದನು ಭಾಗವತ ಜನ ಲೋಲುಪನು ಬಂದ" ಎಂದು ಸುಮಾರು ಹತ್ತು ಪದ್ಯಗಳಲ್ಲಿ ಕೃಷ್ಣನ ವರ್ಣನೆ ಬರುತ್ತದೆ. ಕೃಷ್ಣನ ಮಹಿಮೆಯನ್ನು ವಿದುರನು ಹತ್ತು ಪದ್ಯಗಳಲ್ಲಿ ದುರ್ಯೋಧನನಿಗೆ ವಿವರಿಸಿ ಹೇಳುತ್ತಾನೆ. ಮತ್ತೆ ಕೃಷ್ಣನನ್ನು ಕಟ್ಟಿ ಹಾಕಲು ಹೋದಾಗ ಅವನು ತೋರಿಸಿದ ವಿಶ್ವರೂಪವನ್ನು ಹತ್ತಾರು ಪದ್ಯದಲ್ಲಿ ವಿವರಿಸುತ್ತಾನೆ. ಯುದ್ಧರಂಗದಲ್ಲಿ ಅರ್ಜುನನು ವಿಷಾದ ಪಟ್ಟು ಯುದ್ಧದಿಂದ ವಿಮುಖನಾಗಲು, ಕೃಷ್ಣನು ಅರ್ಜುನನಿಗೆ ಬೋಧಿಸಿದ ಭಗ ವದ್ಗೀತೆಯನ್ನು ಪ್ರಶ್ನೋತ್ತರ ರೂಪದ ಇಪ್ಪತ್ತಕ್ಕೂ ಹೆಚ್ಚು ಪದ್ಯಗಳಲ್ಲಿ ವರ್ಣಿಸಿದ್ದಾನೆ. ನಂತರ ಮತ್ತೆ ಒಂದೆರಡು ಪದ್ಯದಲ್ಲಿ ವಿಶ್ವರೂಪದ ವರ್ಣನೆ ಇದೆ.ಹೀಗೆ ಕೃಷ್ಣನ ಮಹಿಮೆಯನ್ನು ವರ್ಣಿಸುವ ಪ್ರಸಂಗ ಬಂದಾಗಲೆಲ್ಲಾ ನಾರಣಪ್ಪನು ಮೈಮರೆತು ಭಕ್ತಿ ಭಾವ ದಿಂದ ವರ್ಣಿಸಲು ತೊಡುಗುತ್ತಾನೆ.

ಕುಮಾರವ್ಯಾಸನ ಕರ್ನಾಟಕ ಭಾರತ ಕಥಾ ಮಂಜರಿ ಅಥವಾ ಗದುಗಿನ ಭಾರತದ ವಾಚನ ವ್ಯಾಖ್ಯಾನಗಳು ಹಳ್ಳಿ ಹಳ್ಳಿಗಳಲ್ಲಿ ಮನೆ ಮನೆಯಲ್ಲಿ ನಡೆಯುತ್ತಿದ್ದವು. ಆದರೆ ಇಂದು ಅದು ಕಡಿಮೆಯಾಗಿದೆ. ಕೇವಲ ಗಮಕಿಗಳು ಮಾತ್ರ ಹಾಡು ತ್ತಿದ್ದಾರೆ."ಹಲವು ಜನ್ಮನ ಪಾಪರಾಶಿಯ ತೊಳೆವ ಜಲವಿದು. ವೇದಪಾರಾಯಣದ ಫಲ,ಗಂಗಾದಿ ತೀರ್ಥಸ್ನಾನದ ಫಲ, ಮೇದಿ ನಿಯನೊಲಿದಿತ್ತ ಫಲ,ಕನ್ಯಾದಾನದ ಫಲ, ಶ್ರೀ ಮುಕುಂದಾ ರ್ಪಣವೆನಿಸಿ ಶತ ಭೂಮಿದೇವರಿಗಿತ್ತ ಫಲ ಮಹಾ ಭಾರತದಲ್ಲಿ ಒಂದಕ್ಷರವ ಕೇಳಿದವರಿಗೆ",ಭಾರತದ ಕಥನ ಪ್ರಸಂಗವ ಕ್ರೂರ ಕರ್ಮಿಗಳೆತ್ತ ಬಲ್ಲರು, ಘೋರ ರೌರವವನ್ನು ಕಡೆ ಇಸುಗು ಕೇಳ್ದ ಸಜ್ಜನರ ಎಂದು ಕುಮಾರವ್ಯಾಸ ಯೋಗೀಂದ್ರ ಹೇಳಿದ್ದಾನೆ. ಇಂದು ಕುಮಾರವ್ಯಾಸ ಭಾರತವನ್ನು ಓದಿದವರಿಗೆ ಏನಿಲ್ಲ ವೆಂದೂ ಕನ್ನಡ ಶಬ್ದಸಾಗರದ ಪರಿಚಯ, ಭಾಷಾ ಶುದ್ಧಿ,ವಾಕ್ ಶುದ್ಧಿ ಒದಗುವುದರಲ್ಲಿ ಸಂಶಯವಿಲ್ಲವೆಂದು ಹೇಳಬಹುದು.



# ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರದ ಮಹತ್ವ

1. ಕುಜ ಕೆಂಪು ಬಣ್ಣದ ಗ್ರಹ.

2. ಕುಜ ಗ್ರಹವು ಸೂರ್ಯನ ಸುತ್ತ ಭೂಮಿಯ 1.52 ರಷ್ಟು ದೂರದಲ್ಲಿ ಸುತ್ತುತ್ತದೆ.

3. ಕುಜಗ್ರಹದಲ್ಲಿ ಫೊಬೋಸ್ ಮತ್ತು ಡಯಾಮೋಸ್ ಎಂಬ ಉಪಗ್ರಹಗಳಿವೆ.

4. ಕುಜ ಗ್ರಹವನ್ನು ಯುದ್ಧದ ದೇವರೆಂದು ಪರಿಗಣಿಸಲಾಗಿದೆ.

5.ಕುಜಗ್ರಹವನ್ನು ಸುಬ್ರಹ್ಮಣ್ಯ , ಮುರುಗದೇವರೆಂದು ಪರಿಗಣಿಸಲಾಗಿದೆ.

6. ಕುಜಗ್ರಹವನ್ನು ಪ್ರಧಾನ ಸೇನಾಧಿಕಾರಿಯೆಂದು ಪರಿಗಣಿಸಲಾಗಿದೆ.

7. ಕುಜಗ್ರಹ ತೇವವಿಲ್ಲದ, ಮಳೆಯಿಲ್ಲದ ಗ್ರಹ, ಬೆಂಕಿಯಿಂದ ಕೂಡಿದೆ.

8. ಕುಜಗ್ರಹ ಪೌರುಷವುಳ್ಳ ಗ್ರಹ.

9. ಕುಜಗ್ರಹ ಕೆಡುಕು ಉಂಟು ಮಾಡುವ ಗ್ರಹ.

10. ಕುಜಗ್ರಹವು ದಕ್ಷಿಣ ದಿಕ್ಕಿಗೆ ಅಧಿಪತಿ ಮತ್ತು ಗ್ರೀಷ್ಮ ಋತುವಿನ ಕಾರುಬಾರ ಮಾಡುವುದೆಂದು ಪರಿಗಣಿಸಲಾಗಿದೆ.

11. ಕುಜಗ್ರಹವು ಬಹಳ ಬಿಸಿಯಾದ ಗ್ರಹ ಮತ್ತು ಹೊಗೆಯಾಡುವ ಆಮ್ಲದ ಕಾರುಬಾರ ಮಾಡುವುದೆಂದು ಪರಿಗಣಿಸಲಾಗಿದೆ.

12. ಕುಜಗ್ರಹ ಸಹೋದರರ ಮೇಲೆ, ಭೂಭಾಗದ ಮೇಲೆ ಸಾಹಸೋದ್ಯಮದ ಮೇಲೆ ಆಡಳಿತ ನಡೆಸುತ್ತದೆ.

13.ಕುಜ ಗ್ರಹದ ಪ್ರಭಾವದಿಂದ ಕಾಲಪುರುಷನ ಪ್ರಬಲ ತರ್ಕವಾದಿಯಾಗಿ, ಕೆಚ್ಚೆದೆಯವನನ್ನಾಗಿ, ಕುಶಲಯೋಧನಾಗುವವನಾಗಿ ಮಾಡುತ್ತದೆ.

14. ಕುಜಗ್ರಹವು ಜಗಳ, ಯುದ್ಧ, ಕಚ್ಚಾಟ, ಸಾಂಕ್ರಾಮಿಕ ರೋಗಗಳ ಮೇಲೆ ಕಾರುಬಾರ ಮಾಡುತ್ತಾನೆ.

15. ಕುಜಗ್ರಹವು ರಚನಾತ್ಮಕ ಹಾಗೂ ನಿರ್ಮಾಣದ ಕೆಲಸದ ಮೇಲೆ ಹೆಚ್ಚು ಪರಿಣಾಮ ಬೀರುವುದೆಂದು ಪರಿಗಣಿಸಲಾಗಿದೆ.

16. ಕುಜಗ್ರಹ ಇಂದ್ರಿಯಗಳ ಚಿಹ್ನೆ ಹಾಗೂ ಪ್ರಾಣಿ ತನದ ಮನುಷ್ಯ ಗುಣಗಳ ಮೇಲೆ ಕಾರುಬಾರ ಮಾಡುತ್ತಾನೆ.

17.ಕುಜಗ್ರಹದ ಪ್ರಭಾವದಿಂದ ಮನುಷ್ಯನಿಗೆ ನಿಶ್ಚಯಿಸುವ, ಜಯಶಾಲಿಯಾಗುವ, ವಿಜ್ಞಾನಕಲಿಯುವ ಆಸಕ್ತಿವುಳ್ಳವನಾಗಿ ಮಾಡುತ್ತದೆ ಮತ್ತು ವಿದೇಶ ಪ್ರಯಾಣದ ಕಾರುಬಾರ ಮಾಡುತ್ತದೆ.



- ಆರ್. ಶ್ರೀನಿಧಿ
99705 65978

18.ಕುಜಗ್ರಹದ ಪ್ರಭಾವದಿಂದ ಕಾಲ ಪುರುಷ ಕೆಂಪು ಛಾಯೆಯ ಬಿಳಿಯ ಮೈಬಣ್ಣ,ಎತ್ತರ,ಛಲವುಳ್ಳವನಾಗಿ, ಹೊಳೆಯುವ ಗುಂಗುರು ಕೂದಲುವುಳ್ಳವನಾಗಿ ,ಕೆಂಗಣ್ಣುವುಳ್ಳವನಾಗಿ, ಕ್ರೂರ ಬುದ್ಧಿವುಳ್ಳವನಾಗಿ ಮತ್ತು ಹುಚ್ಚು ಬುದ್ಧಿವುಳ್ಳವನಾಗಿ ಮಾಡುತ್ತದೆ.

19. ಕುಜಗ್ರಹದ ಪ್ರಭಾವದಿಂದ ಕಾಲ ಪುರುಷನ ಮುಖದಲ್ಲಿ ಮಡವೆ, ಗುಂಡಾಗಿರುವ ಕಣ್ಣುವುಳ್ಳವನಾಗಿರುತ್ತಾನೆ.

20. ಕುಜಗ್ರಹದ ಪ್ರಭಾವದಿಂದ ಕಾಲಪುರುಷನು ಬಹಳ ಶಿಸ್ತು, ಮುಂಗೋಪಿ ಮತ್ತು ಆಕ್ರಮಣ ಶೀಲವುಳ್ಳವನಾಗುತ್ತಾನೆ.

21. ಕುಜಗ್ರಹವು ನೀಚತ್ವದಲ್ಲಿರುವಾಗ ದುಡುಕುವ ಮತ್ತು ಆಕ್ರಮಣ ಮತ್ತು ಧ್ವಂಸ ಮಾಡುವ ಮನಸ್ಸುವುಳ್ಳವನಾಗಿ ಮಾಡುತ್ತದೆ.

22. ಕುಜನು ಉಚ್ಚತ್ವದಲ್ಲಿರುವಾಗ ಸಾಹಸವುಳ್ಳವನಾಗಿ ಸ್ವತಂತ್ರನಾಗಿ ಉದಾರಸ್ವಭಾವವುಳ್ಳವನಾಗಿ,ಮಹತ್ವಾಕಾಂಕ್ಷೆಯುಳ್ಳವನಾಗಿ, ಅತ್ಯುತ್ಸಾಹಿಯಾಗಿ,ಸಂತೋಷವುಳ್ಳವನಾಗಿ, ಪ್ರಾಮಾಣಿಕನಾಗಿ, ಸರಳ ಸ್ವಭಾವವುಳ್ಳದಿರುವನಾಗಿ,ಮತ್ತು ಹೊಂದಿಕೊಳ್ಳುವ ಸ್ವಭಾವವುಳ್ಳವನಾಗಿ ಮಾಡುತ್ತದೆ.

23.ಕುಜನ ಉಚ್ಚತ್ವದಲ್ಲಿರುವ ಕಾಲ ಪುರಷರು ಮುಂದಾಳತ್ವವನ್ನು ವಹಿಸುತ್ತಾರೆ, ಶೂರನಾಗುತ್ತಾರೆ, ಮೂಲಕರ್ತನಾಗುತ್ತಾರೆ, ಪರಿಶೋದಕನಾಗುತ್ತಾನೆ.

24. ಕುಜಗ್ರಹದ ನೀಚತ್ವದಿಂದಾಗುವ ಕಾಯಿಲೆಗಳು - ತೀವ್ರ ಜ್ವರ ಗಂಟಲಿಗೆ ಸಂಬಂಧಿಸಿದ ಕಾಯಿಲೆ, ಸಿಡಬು, ಸುಟ್ಟಗಾಯ ದಡಾರ, ಪಿಸ್ತುಲ ರಕ್ತನಾಳದ ತೊಂದರೆ, ಕಬ್ಬಿಣ ಚುಚ್ಚುವುದರಿಂದ ಉಂಟಾಗುವ ಗಾಯ, ರಕ್ತಸ್ರಾವ,ಅಂಡವಾಯು, ಗರ್ಭಸ್ರಾವ ಕರುಳಿಗೆ ಭಾಗಕ್ಕೆ ತಗುಲುವ ರೋಗ, ವಿಪರೀತ ಬಿಸಿಲಿನಿಂದ ಆಗುವ ಕಾಯಿಲೆಗಳು ಚರ್ಮದ ಮತ್ತು ಕೀಲುಗಳ ನೋವು, ಧನುರ್ವಾತ ರೋಗ, ಕುರೂಪ ಉಂಟಾಗುತ್ತದೆ.

25. ಎಣ್ಣೆ ಉಳ್ಳ ಕಾಯಿಗಳು, ಗೋಡಂಬಿ, ಅಡಿಕೆ, ಕಡಲೆ ಕಾಯಿ,ಶುಂಠಿ, ಸಾಸಿವೆಕಾಳು, ಬೆಳ್ಳುಳಿ, ಮಧ್ಯ, ಈಚಲ ಗಿಡದ ರಸ, ಕೊಡಲಿ ಬಂದೂಕ, ಕತ್ತಿ,ಚಾಕು,ಕೊತ್ತಂಬರಿ, ಮುಳ್ಳು ಗಿಡ ಹಳೆಯ ಉಪಕರಣಗಳನ್ನು ಪ್ರತಿನಿಧಿಸುತ್ತದೆ.

26. ಪ್ರಾಣಿಗಳಲ್ಲಿ ಹುಲಿ,ತೋಳ, ಆನೆ, ಕಾಡು ಪ್ರಾಣಿ, ಬೇಟೆ ನಾಯಿಗಳನ್ನು ಕುಜಗ್ರಹವು ಪ್ರತಿನಿಧಿಸುತ್ತದೆ.

27. ಪಕ್ಷಿಗಳಲ್ಲಿ ಗಿಡುಗ, ಹದ್ದು, ರಣಹದ್ದು ಕುಜಗ್ರಹವು ಪ್ರತಿನಿಧಿಸುತ್ತದೆ.

28. ಹಿತ್ತಾಳೆ.ಕೆಂಪು ಕಲ್ಲು,ಹವಳ ಕೆಂಪು ಪದ್ಮರಾಗ, ಲೋಹ ಮತ್ತು ರತ್ನಗಳನ್ನು ಕುಜಗ್ರಹವು ಪ್ರತಿನಿಧಿಸುತ್ತದೆ.

**ಎಡದಿಂದ ಬಲಕ್ಕೆ**

1.ಆಗಮನ
2.ಭಕ್ಷಕ
3.ಅಂತಃಕರಣ
4. ಸಫಲ
5. ಶತಪಥ

**ಬಲದಿಂದ ಎಡಕ್ಕೆ**

6.ಫನ
7.ಷರ
8.ಛಲ
9.ಊಟ
10.ಬಹಳ

**ಮೇಲಿಂದ ಕೆಳಕ್ಕೆ**

11.ಏತ
12.ಕಲರವ
13.ಇಹ
14.ಎಡ
15.ಔತಣ
16.ಈಶ
17.ಝಳ

**ಕೆಳಗಿನಿಂದ ಮೇಲಕ್ಕೆ**

18.ಉದಕ
19. ಒಗತನ
20. ಋಣ
21. ಧನ
22. ಓಟ
23. ಚಪಲ
24. ಅಪಜಯ

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| | 1 ಆ | ಗ | ಮ | ನ | 6 ಫ | 11 ಏ | 12 ಕ | 13 ಇ |
| 2 | 2 ಭ | ಕ್ಷ | ಕ | ತ | | ತ | ಲ | ಹ |
| 3 | | | ದ | ಗ | 14 ಎ | 15 ಔ | ರ | 16 ಈ |
| 4 | ರ | 7 ಷ | 18 ಉ | 19 ಒ | ಡ | ತ | ವ | ಶ |
| 5 | | 3 ಅಂ | ತಃ | ಕ | ರ | ಣ | ಯ | ನ |
| 6 | 4 ಸ | ಫ | ಲ | 8 ಛ | | 20 ಋ | ಜ | 21 ಧ |
| 7 | ಟ | 9 ಊ | ಪ | 17 ಝ | 5 ಶ | ತ | ಪ | ಥ |
| 8 | 22 ಓ | | 23 ಚ | ಳ | ಹ | 10 ಬ | 24 ಅ | |



ಧಾರಾವಾಹಿ- ೯

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

## ಹಿಂದಿನ ಸಂಚಿಕೆಯಿಂದ

ಶ್ರೀ ಎನ್. ಎಸ್. ಅನಂತರಂಗಾಚಾರ್ಯರು ತಮ್ಮ ಮೊದಲ್ ತಿರುವಂದಾದಿ ಎನ್ನುವ ಪುಸ್ತಕದಲ್ಲಿ ಹತ್ತು ಪಾಶುರಗಳನ್ನು ತಿರುಮಲೆಯನ್ನು ಕುರಿತದ್ದಾಗಿ ಹೇಳಿದ್ದಾರೆ. ಆದರೆ ಇವರು ಕಾಣಿಸಿರುವ ೨೩ನೇ ಪಾಶುರದಲ್ಲಿ ತಿರುವೇಂಗಡದ ನೇರ ಪ್ರಸ್ತಾಪವಿಲ್ಲ. ಇದಕ್ಕೆ ಬದಲಾಗಿ ಅವರು ಸೂಚಿಸದೇ ಇರುವ ೬೮ನೇ ಪಾಶುರದಲ್ಲಿ ವೇಂಗಡದ ವಿಚಾರವಿದ್ದು, ಅವರು ಅದನ್ನೇಕೆ ಬಿಟ್ಟಿರುವರೆಂಬ ಕಾರಣ ತಿಳಿಯುವುದಿಲ್ಲ ಈ ೨೭ ನೇ ಪಾಶುರವನ್ನು ಬಿಟ್ಟು ೬೮ ನೇ ಪಾಶುರವನ್ನು ನಾವು ತೆಗೆದುಕೊಂಡಾಗಲೂ ಈ ತಿರುವಂದಾದಿಯಲ್ಲಿ ವೇಂಗಡದ ವಿಷಯವಾದ ಪಾಶುರಗಳು ಹತ್ತೇ ಎಂಬುದಾಗಿ ನಿರ್ಧರಿಸಬಹುದು. 'ಇರಂಡಾಂ ತಿರುವಂದಾದಿ' ಯಲ್ಲಿ ಶ್ರೀ ಆಚಾರ್ಯರು ೧೨ ಪಾಶುರಗಳನ್ನು ನಮೂದಿಸಿ 'ಆಳ್ವಾರುಗಳು ಮತ್ತು ಶ್ರೀಮದ್ವೇಂಕಟನಾಯಕನೂ' ಪುಸ್ತಕದಲ್ಲಿ ೧೩ ಪಾಶುರಗಳನ್ನು ತೋರಿಸಿದ್ದಾರೆ. ಇಲ್ಲಿನ ಹೆಚ್ಚುವರಿ ಪಾಶುರದ ಸಂಖ್ಯೆ ೫೪. ಇದೇ ರೀತಿ ಮೂನ್ರಾಂತಿರುವಂದಾದಿಯಲ್ಲಿ ೧೮ ಪಾಶುರಗಳನ್ನು ತೋರಿಸಿ 'ಆಳ್ವಾರುಗಳೂ ಮತ್ತು ಶ್ರೀಮದ್ವೆಂಕಟನಾಯಕನೂ' ಪುಸ್ತಕದಲ್ಲಿ ೧೯ ಪಾಶುರಗಳನ್ನು ತೋರಿಸಿದ್ದಾರೆ ಈ ಹೆಚ್ಚಿಗೆ ಪಾಶುರದ ಸಂಖ್ಯೆ ೧೪.

ನಮ್ಮಾಳ್ವಾರ್ ಅವರ ತಿರುವಾಯ್ಮೊಳಿಯ ಚತುರ್ಥ ಶತಕದ, ಪಂಚಮದಶಕದ ಹನ್ನೊಂದನೆಯ ಪಾಶುರ ಮತ್ತು ಷಷ್ಠಮ ಶತಕದ ಷಷ್ಠಮ ದಶಕದ ಹನ್ನೊಂದನೆಯ ಪಾಶುರಗಳಲ್ಲಿ ವೇಂಗಡದ ನಾಮ ನಿರ್ದೇಶನಗೊಂಡಿರುವುದು. ಈ ಶ್ಲೋಕಗಳು ಆಯಾ ದಶಕದ ಮಂಗಳ ಶ್ಲೋಕವಾಗಿರುವುದರಿಂದ ಆಯಾ ದಶಕಗಳ ಮಿಕ್ಕ ಹತ್ತು, ಹತ್ತು ಪಾಶುರಗಳೂ ವೇಂಗಡ

ವಿಷಯಾತ್ಮಕವಾದದ್ದೇ ಎಂದು ತೀರ್ಮಾನಿಸಿ ಅವುಗಳನ್ನೆಲ್ಲಾ 'ಆಳ್ವಾರುಗಳೂ ಮತ್ತು ಶ್ರೀ ಮದ್ವೇಂಕಟನಾಯಕನೂ' ಎನ್ನುವ ತಮ್ಮ ಪುಸ್ತಕದಲ್ಲಿ ಸೇರಿಸಿದ್ದಾರೆ. ಆದರೆ ಈ ೨೦ ಪಾಶುರಗಳಲ್ಲಿ ಎಲ್ಲಿಯೂ ವೇಂಗಡವಾಗಲೀ, ಅದರ ಒಡೆ ಯನ ವಿಷಯವಾಗಲೀ ಕಾಣಸಿಕ್ಕುವುದಿಲ್ಲ.

ಇದೇ ರೀತಿ ಪೆರಿಯಾಳ್ವಾರ್ ಅವರ ತಿರುಮೊಳಿಯ ಐದನೇ ಶತಕದ ನಾಲ್ಕನೇ ದಶಕದ ಆರಂಭ ಪಾಶುರವಾದ 'ಶೆನ್ನಿಯೋಂಗು'ವಿನಲ್ಲಿ ತಿರುಪತಿಯ ವಿಷಯವಿರುವುದರಿಂದ ಆ ದಶಕದ ಹತ್ತು ಶ್ಲೋಕಗಳೂ ವೇಂಗಡವನ್ನು ಕುರಿತದ್ದು ಎಂದು ಪರಿಗಣಿಸಿದ್ದಾರೆ. ಆದರೆ ಈ ಮಿಕ್ಕ ಪಾಶುರಗಳಲ್ಲಿ ವೇಂಗಡದ ವಿಷಯ ಸ್ವಲ್ಪವೂ ಬರುವುದಿಲ್ಲ.ಆದರೆ ಶ್ರೀ ವೈಷ್ಣವರು, ಅದರಲ್ಲೂ ತಿರುಪತಿಯ ದೇವಸ್ಥಾನದವರು ಈ ಶೆನ್ನಿಯೋಂಗು ದಶಕವನ್ನು ತಿರುವೇಂಗಡದ ಸ್ವಾಮಿಯ ಮಂಗಳಾಶಾಸನ ಪದ್ಯಗಳೆಂದೇ ಭಾವಿಸಿದ್ದಾರೆಂದು ತಿಳಿದು ಬರುತ್ತದೆ.

ಆದರೆ ತಿರುವಾಯ್ಮೊಳಿಯ ಆರನೇ ಶತಕದ ನವಮ ದಶಕದ ೫ನೇ ಪಾಶುರ, (೬-೯-೫) ಪೆರಿಯತಿರುವಂದಾದಿಯ ೬೮ನೇ ಪಾಶುರ, ತಿರುಮಂಗೈ ಆಳ್ವಾರರ ತಿರುಕ್ಕುರುಂದಾಂ ಡಗಂನ ೭ ಪಾಶುರ, ತಿರುನೆಡುಂದಾಡಗಂನ ೮,೯,೧೦ ಪಾಶುರಗಳು, ಶಿರಿಯತಿರುಮಡಲ್‌ನ ೬೯ ನೆಯ ಸಾಲು, ಪೆರಿಯ ತಿರುಮಡಲ್‌ನ ೬ ಮತ್ತು ೧೨೪ ನೇ ಸಾಲುಗಳಲ್ಲಿ ವೇಂಗಡದ ಬಗ್ಗೆ ಸ್ಪಷ್ಟ ನಿರೂಪಣೆ ಇದ್ದರೂ ಅವುಗಳನ್ನು 'ಆಳ್ವಾರುಗಳೂ ಮತ್ತು ಶ್ರೀಮದ್ವೇಂಕಟನಾಯಕನೂ' ಎಲ್ಲೂ ಪ್ರಸ್ತಾಪಮಾಡಿಲ್ಲದಿರುವುದು ಗಮನಾರ್ಹ ತಿರುಮಳಿಶೈ ಆಳ್ವಾರ್ ಅವರ ತಿರುಚ್ಚಂದವಿರುತ್ತಂನ ಎರಡು ಪಾಶುರ ಗಳಾದ ೬೦ ಮತ್ತು ೮೧ ನ್ನು ತಿರುಮಲೆ ತಿರುಪತಿ ದೇವಸ್ಥಾನ ದವರು ತಮ್ಮ ಪುಸ್ತಕದಲ್ಲಿ ಉದಾಹರಿಸಿದ್ದರೆ ಶ್ರೀ ಆಚಾರ್ಯರು ತಮ್ಮ ಮೇಲ್ಕಂಡ ಪುಸ್ತಕದಲ್ಲಿ ೪೮ ನೇ ಪಾಶುರವನ್ನೂ ಜೋಡಿಸಿ ಮೂರು ಪಾಶುರಗಳೆಂದು ತೋರಿಸಿದ್ದಾರೆ.

'ತಿರುವಿರುತ್ತಂ' ನಲ್ಲಿ ತಿರುಪತಿ ದೇವಸ್ಥಾನದವರು ೭ ಪಾಶುರಗಳನ್ನು ತೋರಿಸಿದ್ದಾರೆ. ಅನಂತರಂಗಾಚಾರ್ಯರು ೮ ಪಾಶುರಗಳನ್ನು ಕಾಣಿಸಿದ್ದಾರೆ. ಈ ಎರಡು ಪುಸ್ತಕಗಳನ್ನೂ ಪರಿಶೀಲಿಸಿದರೆ ಈ ಹೆಚ್ಚಿನ ಪಾಶುರಗಳನ್ನು ನಾವು ವೇಂಗಡ ವಿಷಯಾತ್ಮಕವಾದದ್ದೆಂದು ಪರಿಗಣಿಸಲು ಅಡ್ಡಿ ಇಲ್ಲ. ಎಸ್.ಕೆ. ರಾಮಚಂದ್ರರಾಯರ ಪಾಶುರಗಳ ಸಂಖ್ಯೆಯಿಂದ ಅವರು ಯಾವ ಯಾವ ಪಾಶುರಗಳನ್ನು ಪರಿಗಣಿಸಿದ್ದಾರೆ, ಯಾವುದನ್ನು ಬಿಟ್ಟಿದ್ದಾರೆ ಎನ್ನುವುದು ತಿಳಿಯುವುದಿಲ್ಲ. ಇದರ ವಿಚಾರವನ್ನು ಈಗಾಗಲೇ ಚರ್ಚಿಸಿದ್ದಾಗಿದೆ. ಅನಂತರಂಗಾಚಾರ್ಯರ ವಿವಿಧ ಪುಸ್ತಕಗಳಲ್ಲಿ ಕಂಡು ಬರುವ ವ್ಯತ್ಯಾಸಗಳಿಗೆ ಕಾರಣ ತಿಳಿಯು ವುದಿಲ್ಲ.

ನಮ್ಮಾಳ್ವಾರ್ ಅವರ ತಿರುವಾಯ್ಮೊಳಿಯಲ್ಲಿನ ಸಪ್ತಮ ಶತಕದ ನಾಲ್ಕನೇ ದಶಕದ ೧೧ ಪಾಶುರಗಳು ತಿರುವೇಂಗಡದ ಸ್ವಾಮಿಯನ್ನು ಕುರಿತದ್ದು ಎಂದು ಹೇಳುತ್ತಾರೆ. ಇದಕ್ಕೆ ಈ ಪಾಶುರಗಳಲ್ಲಿ ಬರುವ 'ಅಪ್ಪನ್' ಎಂಬ ದೈವ ಸಂಬೋಧನೆ ಯೊಂದೇ ಕಾರಣವಾಗಿದೆ. 'ಅಪ್ಪನ್' ಎನ್ನುವುದು ತಿರುಮಲೆಯ ದೇವರ ಉತ್ಸವ ವಿಗ್ರಹವಾದ 'ಮಲೆಯಪ್ಪನ್' ಸ್ವಾಮಿಯ ಸ್ವರೂಪವೆನ್ನುತ್ತಾರೆ. ಟಿ.ಟಿ.ಡಿ. ಪುಸ್ತಕದಲ್ಲಿ, ಆದರೆ ಮೂಲ ದೇವರಿಗೂ 'ಅಪ್ಪನ್' ಎಂದೇ ಜನ ಮೊದಲಿನಿಂದ ಕರೆಯುವ ರೂಢಿ ಶ್ರೀವೈಷ್ಣವರಲ್ಲಿದೆ. ಅವರುಗಳು ಅಪ್ಪಲಾಚಾರ್ಯ, ಅಪ್ಪಣೈಯ್ಯಂಗಾರ್ ಮುಂತಾದ ಹೆಸರುಗಳನ್ನು ಈ ವ್ಯಾಜ ರೆಂದಲೇ ಇಟ್ಟುಕೊಳ್ಳುವುದು.'ಅಪ್ಪನ್' ಎಂದರೆ ಸ್ವಾಮಿ ಎಂದು ಅರ್ಥ.ಈ ಹೆಸರಿನಿಂದ ನಿರ್ದೇಶಿಸಲ್ಪಡುವ ಏಕೈಕ ದೇವ ರೆಂದರೆ ಶ್ರೀನಿವಾಸನೊಬ್ಬನೇ.ಈ ಹನ್ನೊಂದು ಪಾಶುರಗಳನ್ನು ತಿರುಮಲೆ ತಿರುಪತಿ ದೇವಸ್ಥಾನದವರು ತಮ್ಮ ಪುಸ್ತಕದ ಕಡೆ ಯಲ್ಲಿ ಬೇರೆಯಾಗಿ ಸೇರಿಸಿದ್ದಾರೆ.ಈ ಹನ್ನೊಂದು ಪಾಶುರ ಗಳನ್ನು ದೈನಂದಿನ ಪ್ರಬಂಧ ಪಾರಾಯಣದಲ್ಲಿ ತಿರುಪತಿಯಲ್ಲಿ ಸೇರಿಸಿದ್ದಾರೆಂದು ಹೇಳುತ್ತಾರೆ. ಆದ್ದರಿಂದ ಹಚ್ಚಳಿಕೆಯಿಂದ ಕೂಡಿದ ಈ ಹನ್ನೊಂದು ಪಾಶುರವನ್ನು ನಾನು ಪರಿಗಣನೆಗೆ ತೆಗೆದುಕೊಂಡಿದ್ದೇನೆ.ಈ ದೃಷ್ಟಿಯಿಂದ ಆಳ್ವಾರ್‌ಗಳು ವೇಂಗಡ ದೊಡೆಯನನ್ನು ಮಂಗಳಾಶಾಸನ ಮಾಡಿರುವ ಪಾಶುರಗಳ ಸಂಖ್ಯೆ ೨೧೧ ಆಗುತ್ತದೆ.

ವೇಂಗಡ ವಿಷಯವಾದ ಪಾಶುರಗಳ ಪಟ್ಟಿಯನ್ನು ಈ ಕೆಳಕಂಡಂತೆ ಪರಿಷ್ಕರಣಗೊಳಿಸಬಹುದಾಗಿದೆ.

| | | | |
|---|---|---|---|
| ಪೊಯ್ಗೆಯ್ ಆಳ್ವಾರ್ | | ೧೦ | ಪಾಶುರಗಳು |
| ಪೂದತ್ತಾಳ್ವಾರ್ | | ೧೩ | ಪಾಶುರಗಳು |
| ಪೇಯಾಳ್ವಾರ್ | | ೧೯ | ಪಾಶುರಗಳು |
| ತಿರುಮಳಿ ಶೈ ಆಳ್ವಾರ್ | (ನಾ.ತಿ.) | ೧೨ | ಪಾಶುರಗಳು |
| | (ತಿ. ವಿ.) | ೩ | ಪಾಶುರಗಳು |
| ನಮ್ಮಾಳ್ವಾರ್ | (ತಿ.ವಿ.) | ೮ | ಪಾಶುರಗಳು |
| | (ಪೆ.ತಿ.) | ೧ | ಪಾಶುರಗಳು |
| | (ತಿರುವಾಯ್ಮೊಳಿ) | ೪೬ | ಪಾಶುರಗಳು |
| ಕುಲಶೇಖರ | | ೧೧ | ಪಾಶುರಗಳು |
| ಆಂಡಾಳ್ | | ೧೬ | ಪಾಶುರಗಳು |
| ಪೆರಿಯಾಳ್ವಾರ್ | | ೭ | ಪಾಶುರಗಳು |
| ತಿರುಪಾಣಿ | | ೨ | ಪಾಶುರಗಳು |
| ತಿರುಮಂಗೈ (ತಿರುಕ್ಕುರುಂದಾಂಡಗಂ) | | ೧ | ಪಾಶುರಗಳು |
| | (ತಿರುನೆಡುಂದಾಂಡಗಂ) | ೪ | ಪಾಶುರಗಳು |
| | (ಪೆರಿಯತಿರುಮೊಳಿ) | ೫೫ | ಪಾಶುರಗಳು |
| | (ಶಿರಿಯತಿರುಮಡಲ್) | ೧ | ಸಾಲುಗಳು |
| | (ಪೆರಿಯತಿರುಮಡಲ್) | ೨ | ಸಾಲುಗಳು |
| | ಒಟ್ಟು | ೨೧೧ | ಪಾಶುರಗಳು |

ಈ ರೀತಿ ನಾಲಾಯಿರ ದಿವ್ಯ ಪ್ರಬಂಧಗಳಲ್ಲಿನ ವೇಂಗಡವನ್ನು ಮಂಗಳಾಶಾಸನ ಮಾಡಿರುವ ಒಟ್ಟು ಇಷ್ಟು ಪಾಶುರಗಳೆಂದು ನಿರ್ಧರಿಸಬಹುದು. ಇವುಗಳನ್ನು ನಾವು ಅರ್ಥಸಹಿತವಾಗಿ ಅಧ್ಯಯನ ಮಾಡಿದಾಗ ಈ ಮಲೆಯ ಸೌಂದರ್ಯ, ವೈಭವ, ಮಹಿಮೆ, ಅದರ ಮೇಲಿನ ಸ್ವಾಮಿಯ ವಿಶೇಷ, ಎಲ್ಲದರ ಸಮಗ್ರ ಚಿತ್ರಣ ನಮಗೆ ದೊರೆಯುತ್ತದೆ. ಇದಲ್ಲದೆ ಹಲವು ಹೊಸ ವಿಚಾರಗಳೂ ಗೋಚರಗೊಳ್ಳುತ್ತದೆ. ಕುತೂಹಲಕಾರಿಯಾದ ಹಲವಾರು ಚಾರಿತ್ರಿಕ, ಸಾಮಾಜಿಕ, ಐತಿಹಾಸಿಕ ವಿವರಗಳೂ ನಮಗೆ ಪ್ರಯೋಜನ ಕಾರಿಯಾಗಿ ಕಂಡು ಬರುತ್ತದೆ.

(ಮುಂದುವರೆಯುತ್ತದೆ.)

ನೀತಿ ಕಥೆ

# ಕಿತಾಪತಿ ಸೀತಾಪತಿ

– ಜಿ. ಶ್ಯಾಮರಾವ್

ಅಮೋಘ ಮತ್ತು ಸೀತಾಪತಿ ಒಂದೇ ಊರಿನಲ್ಲಿ ಅಕ್ಕ ಪಕ್ಕದಲ್ಲೇ ಆಸ್ತಿ ಮಾಡಿಕೊಂಡಿದ್ದರು.ಇಬ್ಬರೂ ಸಂಬಂಧಿಕರೇ. ಅಮೋಘ ತರುಣ ನಾದರೆ, ಸೀತಾಪತಿಗೆ ಅರವತ್ತು ವರ್ಷ. ಅಮೋಘ ಕಷ್ಟಪಟ್ಟು ದುಡಿದು ತನ್ನ ತೋಟಗದ್ದೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಸೀತಾಪತಿಯ ಆಸ್ತಿಯು ಚೆನ್ನಾಗಿಯೇ ಇತ್ತು.ಆದರೂ ಸೀತಾಪತಿಗೆ ಅಮೋಘನ ಏಳಿಗೆ ಕಂಡರೆ ಕಣ್ಣುರಿ.ಯಾವಾಗಲೂ ಅಮೋಘನಿಗೆ ಏನಾದರೂ ಒಂದು ಕೇಡನ್ನು ಮಾಡದೆ ಬಿಡುತ್ತಿರಲಿಲ್ಲ. ಊರವರೆಲ್ಲ ಸೀತಾಪತಿಯನ್ನು ಕಿತಾ ಪತಿ ಎಂದು ಕರೆಯುತ್ತಿದ್ದರು.

ಚಿಕ್ಕಂದಿನಿಂದಲೇ ಅಮೋಘ ತುಂಬಾ ಕಷ್ಟ ಎದುರಿಸಬೇಕಾ ಯಿತು. ಸೀತಾಪತಿಗೆ ಕಾನೂನು ತಿಳಿದಿತ್ತು. ಕೈಯಲ್ಲಿ ಹಣವೂ ಇತ್ತು. ಅಮೋಘನಿಗೆ ನಾನಾ ಕಷ್ಟಗಳನ್ನು ಕೊಟ್ಟ. ಆಸ್ತಿ ವ್ಯಾಜ್ಯವೂ ನಡೆಯಿತು. ಪೋಲಿಸು, ಕೇಸುಗಳೂ ಆದವು. ಊರಿನಲ್ಲಿ ಪಂಚಾಯಿತಿಗಳೂ ನಡೆ ದವು. ಪಾಪ, ಅಮೋಘ ಚಿಕ್ಕವನು ಬೇರೆ. ಇದರಿಂದಾಗಿ ತುಂಬಾ ಕಷ್ಟ ಅನುಭವಿಸಿಬಿಟ್ಟ. ಆದರೆ ಊರ ಜನರು ಅವನ ಸಹಾಯಕ್ಕಿದ್ದುದರಿಂದ ಹೇಗೋ ಎಲ್ಲದರಿಂದಲೂ ಪಾರಾದ.

ಹೀಗೇ ಸ್ವಲ್ಪ ಸಮಯ ಕಳೆದ ಮೇಲೆ ಅಮೋಘನ ಮದುವೆ ನಿಶ್ಚಯವಾಯಿತು. ಹುಡುಗಿ ಅದೇ ಊರಿನವಳೇ. ಸೀತಾಪತಿಗೂ ಸಂಬಂಧವೇ .

ಅಮೋಘ ಮದುವೆಗೆ ಎಲ್ಲರನ್ನೂ ಕರೆದ. ಆದರೆ ಸೀತಾಪತಿ ಯನ್ನು ಕರೆಯಲು ಅವನಿಗೆ ಮನಸ್ಸೊಪ್ಪಲಿಲ್ಲ. ಹುಡುಗಿಯ ಅಪ್ಪ ರಘು ನಾಥರು ತುಂಬಾ ತಿಳುವಳಿಯುಳ್ಳ ಜನ. ಅವರು ಸೀತಾಪತಿಯನ್ನು ಮದುವೆಗೆ ಕರೆಯುವಂತೆ ಅಮೋಘನನ್ನು ಬಲವಂತ ಮಾಡಿದರು. ಏನೇನೂ ಹಿತವಿಲ್ಲದೆ ಅಮೋಘ ಅವರನ್ನು ಮದುವೆಗೆ ಕರೆದ ಸೀತಾ ಪತಿಯೂ ಮದುವೆಗೆ ಬಂದ ಮದುವೆ ಮನೆಯಲ್ಲಿಯೂ ಅವನು ಸುಮ್ಮ ನಿರದೆ ಅದೂ, ಇದೂ ಎಂದು ತೊಂದರೆ ಕೊಡುತ್ತಿದ್ದ ಅಮೋಘನ ಮಾವ ಎಲ್ಲವನ್ನೂ ಗಮನಿಸುತ್ತಿದ್ದರು.ಸೀತಾಪತಿಗೆ ಸರಿಯಾಗಿ ಬುದ್ಧಿ ಕಲಿಸ ಬೇಕು. ಅವರಿಂದ ಮಗಳಿಗೂ ಅಳಿಯನಿಗೂ ಮುಂದೆ ತೊಂದರೆಯಾಗ ಬಾರದೆಂದು ಮನದಲ್ಲೇ ನಿಶ್ಚಯ ಮಾಡಿದರು. ಮದುವೆಶಾಸ್ತ್ರ ಮುಗಿದು ವಧೂವರರು ಹಿರಿಯರೆಲ್ಲರಿಗೂ ನಮಸ್ಕಾರ ಮಾಡುವ ಸಮಯ ಬಂತು.

ಆಗ ಹುಡುಗಿಯ ಅಪ್ಪ ರಘುನಾಥರು ಎಲ್ಲರಿಗೂ ಕೇಳಿಸುವಂತೆ ಹೇಳಿದರು. "ಅಳಿಯಂದಿರೇ ಎಲ್ಲರಿಗೂ ಮತ್ತೆ ನಮಸ್ಕಾರ ಮಾಡಿ. ಮೊದಲು ಗುರುಗಳಿಗೆ ನಮಸ್ಕಾರ ಮಾಡಿ ಬನ್ನಿ"

ಅಮೋಘ ಗುರುಗಳೆಲ್ಲೆಂದು ಅತ್ತಿತ್ತ ನೋಡಿದ. ಯಾವ ಗುರುಗಳೂ ಕಾಣಿಸಲಿಲ್ಲ! ಬೆರಗಾಗಿ ಮಾವನ ಮುಖ ನೋಡಿದ.

"ಅಯ್ಯೋ, ಸೀತಾಪತಿರಾಯರು ಅಲ್ಲಿ ಕೂತಿದಾರಲ್ಲಾ, ಅವರಿಗೆ ಮೊದಲು ನಮಸ್ಕಾರ ಮಾಡಿ. ಅವರೇ ನಿಮ್ಮ ಗುರುಗಳಲ್ವಾ?''ಎಂದರು ಮಾವ .

ಅಮೋಘನ ಮುಖ ಕೆಂಪಾಯಿತು. ಅಷ್ಟೊಂದು ಜನರೆದುರು ಮಾವ ತನ್ನನ್ನು ಅವಮಾನಿಸುತ್ತಿರುವರೆಂದು ತಿಳಿದು ಕಕ್ಕಾಬಿಕ್ಕಿಯಾಗಿ ನಿಂತ. ಪುನಃ ರಘುನಾಥರೇ ಹೇಳಿದರು.''ಅವರಿಗೆ ಮೊದಲು ನಮಸ್ಕಾರ ಮಾಡಿ ಯಪ್ಪಾ. ಮೊದಲು ನಿಮಗೆ ಏನು ಗೊತ್ತಿತ್ತು ಹೇಳಿ? ಯಾವ ಅನುಭವವೂ ಇರಲಿಲ್ಲ ನಿಮಗೆ. ಈಗ ನೋಡಿ ಯಾವ ಪೋಲಿಸು, ಕೇಸು. ವ್ಯಾಜ್ಯ, ಯಾವು ದನ್ನು ಬೇಕಾದರೂ ಎದುರಿಸುವ ಅಭ್ಯಾಸ ಆಗಿದೆ. ನಿಮಗೆ ಅಂಥಾ ಸಮಸ್ಯೆ ಗಳೆಲ್ಲ ಬಂದಾಗ ಅವುಗಳನ್ನೆಲ್ಲ ಹೇಗೆ ಬಗೆ ಹರಿಸೋದು? ಕಷ್ಟ ಬಂದಾಗ ಹೇಗೆ ಪಾರಾಗೋದು? ಅಂತೆಲ್ಲ ನಿಮಗೆ ಅನುಭವ ಮಾಡಿಸಿದವರು ಅವರೇ ಅಲ್ವಾ? ಹಾಗಾಗಿ ಅಂಥವರಿಗೆ ಮೊದಲು ನಮಸ್ಕಾರ ಮಾಡಿ. ಅವರು ನಿಮ್ಮ ನಿಜವಾದ ಗುರುಗಳು'' ಎಂದರು. ಗಂಬೀರವಾಗಿ, ಅರ್ಥಮಾಡಿ ಕೊಂಡ ಅಮೋಘ ತತ್‌ಕ್ಷಣ ಹಂಡತಿಯ ಜೊತೆಗೆ ಹೋಗಿ ಬಗ್ಗಿ ಕಾಲು ಮುಟ್ಟಿ ನಮಸ್ಕಾರ ಮಾಡಿದ. ಈಗ ನಾಲ್ಕು ಜನರೆದುರು ಮುಖ ಕೆಂಪು ಮಾಡಿಕೊಳ್ಳುವ ಸರದಿ ಸೀತಾಪತಿಯದಾಯಿತು. ಊರಿನ ಎಲ್ಲರಿಗೂ ಸೀತಾಪತಿಯ ಬುದ್ಧಿ ಗೊತ್ತಿತ್ತು. ಅನಂತರ ಮನೆಗೆ ಹೋದ ಸೀತಾಪತಿ ಕುಳಿತು ಯೋಚಿಸಿದ "ಹೌದಲ್ಲ ! ನಾನು ಅಷ್ಟೊಂದು ಕಿರಿಕಿರಿ ಮಾಡಿದ್ದರಿಂದ ಅದನ್ನೆಲ್ಲ ಹೇಗೆ ಎದುರಿಸಬೇಕೆಂಬ ಅನುಭವ ಅವನಿಗಾಯಿತು. ಎಂತಹ ಪರಿಸ್ಥಿತಿ ಬಂದರೂ ಈಗ ಅವನಿಗೆ ಅದನ್ನು ಸಮರ್ಥವಾಗಿ ಎದುರಿಸುವ ಅಭ್ಯಾಸ ನನ್ನಿಂದ ಆಗಿದೆ ನನಗೆ ಮಾತ್ರ ಯಾವ ಲಾಭವೂ ಆಗಿಲ್ಲ'' ಅದೇ ಕೊನೆ. ಅಂದಿನಿಂದ ಸೀತಾಪತಿ ಅಮೋಘನಿಗೆ ಕಿತಾಪತಿ ಕೆಲಸ ಕೊಡಲಿಲ್ಲ.


**ಕೇಳಿ ಗೊತ್ತಾಯ್ತಾ?**

ಅನುಭವಕ್ಕೆ ಇರುವ ಬೆಲೆ ಸಾಟಿಯಿಲ್ಲದ್ದು. ಕಷ್ಟವನ್ನೂ ಅನುಭವ ಎಂದು ತಿಳಿದುಕೊಂಡರೆ ಅದು ಎಲ್ಲಕ್ಕಿಂತ ದೊಡ್ಡ ಲಾಭ!

ಚಿತ್ರಕಥೆ

# ತ್ಯಾಗರಾಜರು

ಕಥೆ : ತೆಲುಗು ಮೂಲ : ಡಾ|| ಕೆ. ರವಿಚಂದ್ರನ್
ಅನುವಾದ : ಆರ್.ಕೆ.
ಚಿತ್ರಗಳು : ಟಿ. ಶಿವಾಜಿ





ಕಂದಾ! ಗಣಪತಿ! ಆಲಯ ಮರ್ಯಾದೆಯನ್ನೂ , ಪೂಜಾ ಸಂಪ್ರದಾಯಗಳ ಬಗ್ಗೆ ವಿಮರ್ಶೆ ಮಾಡುವುದು ಧರ್ಮವಲ್ಲ. ಸ್ವಾಮಿಯವರ ಪೂಜೆಯನ್ನು ನಿಲ್ಲಿಸಿ ಪರದೆಯನ್ನು ತೆಗೆಯುವಷ್ಟು ಘನತೆ ಈ ಭೂಮಿಯಲ್ಲಿ ಯಾರಿಗೂ ಇಲ್ಲ.
ಆ ಪರದೆಗಿಂತ ನಮ್ಮಲ್ಲಿ ಸ್ವಾರ್ಥಭಾವನೆಯು ತುಂಬಾ ಇದೆ.ಅದನ್ನು ತೊಲಗಿಸೆಂದು ಆ ಸ್ವಾಮಿಯನ್ನು ಬೇಡಿ ಕೊಳ್ಳೋಣ!
ತೆರೆ ತೀಯಗ ರಾದಾ ನಾಲೋನಿ ತೆರ ತೀಯಗ ರಾದಾ ತಿರುಪತಿ ವೆಂಕಟರಮಣ ಮತ್ಸರಮನು ತೆರತೀಯಗರಾದಾ!
ತ್ಯಾಗಯ್ಯರವರ ಗಾನಾಮೃತಕ್ಕೆ ಶ್ರೀವೆಂಕಟೇಶ್ವರ ಸ್ವಾಮಿಯವರ ಮುಂದಿರುವ ಪರದೆ ತೊಲಗಿ ಹೋಯಿತು... ಅರ್ಚಕರು ಸಂಭ್ರಮಾಶ್ಚರ್ಯಪಟ್ಟರು.
ಅದ್ಭುತ ನಾದಬ್ರಹ್ಮ ! ನಿಮ್ಮ ಅಪೂರ್ವಗಾನ ಪ್ರತಿಭೆಯಿಂದ ಸ್ವಾಮಿಯವರ ಪರದೆಯನ್ನು ತೊಲಗಿಸಿದಿರೀ, ಸ್ವಾಮಿಯವರಿಗೆ ನಿಮ್ಮ ಗಾನವು ಮೆಚ್ಚಿಗೆಯಾಯಿತು.
ಸರ್ವೇ ಜನಾಃ ಸುಖಿನೋ ಭವನ್ತು !

## ಕ್ವಿಜ್

# ರಸಪ್ರಶ್ನೆ

ಅ)ಸಂಕ್ರಾಂತಿ ಹಬ್ಬ ಯಾವ ಮಾಸದಲ್ಲಿ ಸಂಭವಿಸುತ್ತದೆ?
1. ಪುಷ್ಯಮಾಸ 2. ಮಾಘಮಾಸ
3. ಭಾದ್ರಪದಮಾಸ 4.ಚೈತ್ರಮಾಸ

ಆ) ಸಂಕ್ರಾಂತಿ ಪರ್ವ ದಿನದಂದು ಯಾವ ಪಶುವನ್ನು ಪೂಜಿಸುತ್ತಾರೆ?
1.ಗೋವು 2.ಮೇಕೆ
3.ಜಿಂಕೆ 4.ಎಮ್ಮೆ

ಇ) ಸಂಕ್ರಾಂತಿ ಹಬ್ಬವನ್ನು ಯಾವ ಮತ್ತೊಂದು ಹೆಸರಿನಿಂದ ಕರೆಯುತ್ತೇವೆ?
1. ದೀಪಗಳ ಹಬ್ಬ 2. ಪೊಂಗಲ್
3.ರಥಸಪ್ತಮಿ 4.ನವರಾತ್ರಿ

ಈ) ಸಂಕ್ರಾಂತಿಯಂದು ಸೂರ್ಯನು ಯಾವ ರಾಶಿಗೆ ಪ್ರವೇಶಿಸುತ್ತಾನೆ?
1. ಮಿಥುನ 2. ಕರ್ಕಾಟಕ
3. ಮಕರ 4. ಮೀನ


ಉ) ವೈಕುಂಠ ಏಕಾದಶಿಯಂದು ದೇವರನ್ನು ದರ್ಶಿಸುವ ದ್ವಾರ ಯಾವುದು?
1.ಪಶ್ಚಿಮ 2. ಪೂರ್ವ
3.ದಕ್ಷಿಣ 4. ಉತ್ತರ

ಊ) ವೈಕುಂಠ ಏಕಾದಶಿಯಂದು ಮುಖ್ಯವಾಗಿ ಯಾವ ದೇವರನ್ನು ದರ್ಶಿಸುತ್ತೇವೆ?
1. ಶಿವ 2. ದುರ್ಗಾದೇವಿ
3. ಶ್ರೀವೇಂಕಟೇಶ್ವರ 4.ಹನುಮಂತ

ಋ)ವೈಕುಂಠಏಕಾದಶಿಗೆ ಇರುವ ಮತ್ತೊಂದು ಹೆಸರೇನು?
1. ಪುತ್ರದಾ ಏಕಾದಶಿ 2. ಸರ್ವೇಶಾಮ ಏಕಾದಶಿ
3. ನಿರಾಹಾರ ಏಕಾದಶಿ 4. ನಿರ್ಜಲ ಏಕಾದಶಿ

ಉತ್ತರಗಳು: ಅ) 1 ಆ) 1 ಇ) 3 ಈ) 4 ಉ) 3 ಊ) 3 ಋ) 1

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...

| | | | | | |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |

## ನಿಮಗಿದು ಗೊತ್ತಾ ಮಕ್ಕಳೇ ?

1.ಪದ್ಮಾವತಿ ದೇವಿಯ ತಾಯಿಯ ಹೆಸರೇನು?
2.ವಕುಳ ಮಾತೆಯ ಪೂರ್ವಜನ್ಮ ಯಾವುದು?
3.ಗೋದಾದೇವಿಗೆ ವಿಶೇಷ ಪೂಜೆ ನಡೆಯುವ ಮಾಸ ಯಾವುದು?
4.ತಿರುಪತಿ ಶ್ರೀಕಪಿಲೇಶ್ವರಾಲಯದಲ್ಲಿರುವ ಅಮ್ಮನವರ ಹೆಸರೇನು?
5.ತಿರುಚಾನೂರು ಅಮ್ಮನವರ ಆಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುವ ಉತ್ಸವ ಯಾವುದು?
6. ತಿರುಮಲೆಯಲ್ಲಿ ಶ್ರೀನಿವಾಸನಿಗೆ ಭೂ ದಾನವನ್ನು ಮಾಡಿದವರು ಯಾರು?
7.ತಿರುಮಲೆಯಲ್ಲಿ ಸ್ವಾಮಿಯವರಿಗೆ ಮೊದಲ ತೀರ್ಥ ಕೈಂಕರ್ಯವನ್ನು ಮಾಡಿದವರಾರು?

1.ಧರಣಿದೇವಿ
2.ಯಶೋಧ
3.ಧನುರ್ಮಾಸ
4.ಕಾಮಾಕ್ಷಿದೇವಿ
5.ಪಂಚಮಿತೀರ್ಥ
6.ವರಾಹಸ್ವಾಮಿ
7. ತಿರುಮಲನಂಬಿ

## ಮಕ್ಕಳೇ ಇದನ್ನು ಹೊಂದಿಸಿ ಬರೆಯಿರಿ :

| | |
|---|---|
| 1. ದ್ವಾರಕ | ಅ) ಶ್ರೀರಾಮನು |
| 2.ಪೂರಿ | ಆ) ಮೀನಾಕ್ಷಿ |
| 3.ಅಯೋಧ್ಯ | ಇ) ವಿಶಾಲಾಕ್ಷಿ |
| 4.ಮಧುರೈ | ಈ) ಜಗನ್ನಾಥ |
| 5.ಕಾಶಿ | ಉ) ಶ್ರೀ ಕೃಷ್ಣ |

ಉತ್ತರಗಳು : 1) ಉ 2) ಈ 3) ಅ 4) ಆ 5) ಇ

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ರ ನೆ ದ್ದ ನೆ ಮ ಕು

ಅ ಯಿ ಮ ರೆ ರೂ ನೆ ಬೇ

ಉತ್ತರಗಳು:
ಅರಮನೆಯಿದ್ದರೂ ನೆರೆಮನೆ ಬೇಕು.


Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.



2021 ನವೆಂಬರ್ 25 ರಿಂದ
29 ರ ವರೆಗೆ ನಡೆದ
ತಿರುಮಲೆ
ಶ್ರೀ ವರಾಹ ಸ್ವಾಮಿಯವರ
ಅಲಯದ ಅಷ್ಟ ಬಂಧನ,
ಮಹಾಸಂಪ್ರೋಕ್ಷಣ,
ವಿಮಾನ ಜೀಣೋದ್ಧಾರಣ ದೃಶ್ಯಗಳು.













SAPTHAGIRI (KANNADA) ILLUSTRATED MONTHLY Published by Tirumala Tirupati Devasthanams Printing on 25-12-2021 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2021-2023"Licenced to Post Without Prepayment No. PMGK/RNP/WPP-04(6)/2021-2023" Posting on 20th of Every Month

